ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 21 ಮಂಗಳವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 184 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಯುವ ಕವಿಗೋಷ್ಠಿಗೆ ಕವಿತೆಗಳ ಆಹ್ವಾನ

ಮೈಸೂರು: ಕ್ರಿಯಾ ಮೈಸೂರು ಮತ್ತು ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ಅ.25ರಂದು ಸಂಜೆ 4ಕ್ಕೆ ಬೋಗಾದಿಯ ಕ್ರಿಯಾ ಶೈಕ್ಷಣಿಕ ಸಂಪನ್ಮೂಲ ಕೇಂದ್ರ(KARC)ದಲ್ಲಿ 'ಯುವ ಕವಿಗೋಷ್ಠಿ' ನಡೆಯಲಿದ್ದು, ಆಸಕ್ತ ಕವಿಗಳಿಂದ ಕವಿತೆಗಳನ್ನು ಆಹ್ವಾನಿಸಲಾಗಿದೆ.

ಈ ಕವಿಗೋಷ್ಠಿಯನ್ನು ವಿಶೇಷವಾಗಿ ಯುವಜನರಲ್ಲಿ ಸಾಹಿತ್ಯಕ ಅಭಿರುಚಿಯನ್ನು ಮೂಡಿಸಲು ಆಯೋಜಿಸುತ್ತಿರುವುದರಿಂದ, ಇದರಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಕವಿಗಳು, ಕಡ್ಡಾಯವಾಗಿ 16–29ರ ವಯೋಮಾನದವರಾಗಿರಬೇಕು. ತಾವು ವಾಚಿಸಲಿರುವ 24 ಸಾಲುಗಳ ಗರಿಷ್ಠ ಮಿತಿಯ ಯಾವುದೇ ವಸ್ತು ವಿಷಯವನ್ನು ಹೊಂದಿರುವಂತಹ ಎರಡು ಸ್ವರಚಿತ ಅತ್ಯುತ್ತಮ ಕವಿತೆಗಳನ್ನು ಈ ಕೆಳಗೆ ನೀಡಿರುವ ವಾಟ್ಸಪ್ ಸಂಖ್ಯೆಗೆ ಕಳುಹಿಸಿಕೊಡಬೇಕು. ಕವಿಗಳು ತಮ್ಮ ಸ್ವವಿವರಗಳಾದ ಹೆಸರು, ಹುಟ್ಟಿದ ದಿನಾಂಕ, ವಯಸ್ಸು, ಊರು, ವಿದ್ಯಾರ್ಹತೆ, ವೃತ್ತಿ ಮತ್ತು ಮೊಬೈಲ್ ಸಂಖ್ಯೆಗಳನ್ನು ಪ್ರತ್ಯೇಕವಾಗಿ ನಮೂದಿಸಬೇಕು. ಕವಿತೆಗಳನ್ನು ಕಳುಹಿಸಬೇಕಾದ ದೂರವಾಣಿ ಸಂಖ್ಯೆ 9535421340 (ಮಂದಾರ ಎಸ್.ಉಡುಪಿ) ಆಗಿದ್ದು, ಅ.20ರೊಳಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9880264678 ಸಂಪರ್ಕಿಸಬಹುದು. ಕವಿಗೋಷ್ಠಿಯಲ್ಲಿ ಭಾಗವಹಿಸಿದ ಎಲ್ಲ ಕವಿಗಳಿಗೂ ಪ್ರಮಾಣ ಪತ್ರವನ್ನು ನೀಡಲಾಗುವುದು ಎಂದು ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ 33 ಪ್ರವಾಸಿ ತಾಣಗಳಲ್ಲಿ ಕ್ಯೂಆರ್ ಕೋಡ್ ಅಳವಡಿಕೆ

ವಿವಿಧ ಭಾಷೆಗಳಲ್ಲಿ ಪ್ರವಾಸಿ ತಾಣದ ಸಂಪೂರ್ಣ ಮಾಹಿತಿ ಲಭ್ಯ

ಮೈಸೂರು,ಅ.20(ಎಂಟಿವೈ)– ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪ್ರವಾಸಿಗರಿಗೆ ನಗರದ ಪ್ರಮುಖ ಪ್ರವಾಸಿ ತಾಣ ಹಾಗೂ ಐತಿಹಾಸಿಕ, ಪಾರಂಪರಿಕ ಕಟ್ಟಡಗಳ ಬಗ್ಗೆ ನೈಜ ಹಾಗೂ ಸಮಗ್ರ ಮಾಹಿತಿ ಒದಗಿಸುವ ಪ್ರವಾಸೋದ್ಯಮ ಇಲಾಖೆ ಡಿಜಿಟಲ್ ವ್ಯವಸ್ಥೆಯೊಂದಿಗೆ ಕ್ಯೂ–ಆರ್ ಕೋಡ್ ಅಳವಡಿಸಿದೆ.

ಮೈಸೂರಿನ ಹೃದಯ ಭಾಗದಲ್ಲಿರುವ ಪ್ರಮುಖ ಪಾರಂಪರಿಕ ಕಟ್ಟಡಗಳು ಹಾಗೂ ಪ್ರವಾಸಿ ತಾಣ ಸೇರಿದಂತೆ ಒಟ್ಟು ಪ್ರಮುಖ 33 ತಾಣವನ್ನು ಪ್ರವಾಸೋದ್ಯಮ ಇಲಾಖೆ ಆಯ್ಕೆ ಮಾಡಿಕೊಂಡು. ಆ ಸ್ಥಳ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಕ್ಯೂ–ಆರ್ ಕೋಡ್ ವ್ಯವಸ್ಥೆ ಮೂಲಕ ಆಯಾ ಸ್ಥಳ ಹಾಗೂ ಕಟ್ಟಡದ ಬಗ್ಗೆ ಮಾಹಿತಿ ಒದಗಿಸುತ್ತಿದೆ. ಡಿಜಿಟಲೀಕರಣ ವ್ಯವಸ್ಥೆಯ ಮೂಲಕ ಪ್ರವಾಸೋದ್ಯಮ ಇಲಾಖೆ ಮೊದಲ ಹಂತದಲ್ಲಿ 33 ಪ್ರವಾಸಿ ಹಾಗೂ ಪಾರಂಪರಿಕ ಕಟ್ಟಡ, ಧಾರ್ಮಿಕ ಕ್ಷೇತ್ರಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಪ್ರವಾಸಿಗರಿಗೆ ಬೆರಳ ತುದಿಯಲ್ಲಿಯೇ ನೀಡುವ ವ್ಯವಸ್ಥೆ ಅನುಷ್ಠಾನಕ್ಕೆ ತಂದಿದ್ದು, ಈಗಾಗಲೇ ನೂರಾರು ಪ್ರವಾಸಿಗರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆದುಕೊಂಡು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಐತಿಹಾಸಿಕ ಕಟ್ಟಡಗಳು, ದೇವಾಲಯಗಳು, ಉದ್ಯಾನವನ, ಇತರೆ ಪ್ರೇಕ್ಷಣೀಯ ಸ್ಥಳಗಳ ಬಳಿ ಮಾಹಿತಿ ಫಲಕದೊಂದಿಗೆ ಕ್ಯೂಆರ್ ಕೋಡ್ ಮುದ್ರಿತ ಫಲಕ ಅಳವಡಿಸಲಾಗಿದೆ. ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಆಯಾ ಸ್ಥಳದ ಸಂಕ್ಷಿಪ್ತ ಮಾಹಿತಿಯನ್ನು ಫಲಕದಲ್ಲಿ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವಂತೆ ಸೂಚನೆ ನೀಡಲಾಗಿದೆ. ಇದರಿಂದ ಆಯಾ ಸ್ಥಳ ವೀಕ್ಷಣೆಗೆ ಬರುವ ಪ್ರವಾಸಿಗರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಸಮಗ್ರ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಪ್ರವಾಸಿಗರು ತಮ್ಮ ಸ್ಮಾರ್ಟ್ ಫೋನ್‌ನಲ್ಲಿ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಆ ಸ್ಥಳದ ಇತಿಹಾಸ, ವಾಸ್ತುಶಿಲ್ಪ, ಪ್ರಾಕೃತಿಕ ಮಹತ್ವ ಹಾಗೂ ಇತರೆ ವಿಶೇಷ ಮಾಹಿತಿ ತಿಳಿಯುತ್ತದೆ. ಅಲ್ಲದೇ ಈ ಸ್ಥಳದ ಕ್ಯೂಆರ್ ಕೋಡ್‌ನ ಫೋಟೋ ತೆಗೆದಿಟ್ಟುಕೊಂಡರೆ ಕಾಲ ಕಾಲಕ್ಕೆ ಆಗುವ ಅಪ್‌ಡೇಟ್ ಮಾಹಿತಿಯನ್ನು ಪಡೆಯಬಹುದಾಗಿದೆ. ಈ ಮಾಹಿತಿಯನ್ನು ಕನ್ನಡ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳಲ್ಲಿ ನೀಡಿರುವುದರಿಂದ ದೇಶದ ಎಲ್ಲಾ ರಾಜ್ಯಗಳ ಪ್ರವಾಸಿಗರಿಗೂ ಅನುಕೂಲವಾಗುತ್ತದೆ.

ಎಲ್ಲೆಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿದೆ: ಮೈಸೂರು ಅರಮನೆ, ಚಾಮುಂಡಿಬೆಟ್ಟ, ಚಾಮರಾಜೇಂದ್ರ ಮೃಗಾಲಯ, ಗಣಪತಿಸಚ್ಚಿದಾನಂದ ಆಶ್ರಮದ ಶುಕವನ, ರೈಲ್ವೆ ಮ್ಯೂಸಿಯಂ, ಚಾಮುಂಡಿಬೆಟ್ಟದ ಪಾದ, ಆರ್.ಕೆ. ನಾರಾಯಣ್ ನಿವಾಸ, ಚಿಕ್ಕ ಗಡಿಯಾರ, ಓರಿಯಂಟಲ್ ರಿಸರ್ಚ್ ಸೆಂಟರ್, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ಪಿರಿಯಾಪಟ್ಟಣದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಾಲಯ, ಬೈಲುಕುಪ್ಪೆಯ ಗೋಲ್ಡನ್ ಟೆಂಪಲ್, ಜಗನ್ಮೋಹನ ಅರಮನೆ, ವರುಣ ಕೆರೆ, ಸೇಂಟ್ ಫಿಲೋಮಿನಾಸ್ ಚರ್ಚ್, ಚಿಕ್ಕಗಡಿಯಾರ, ಚುಂಚನಕಟ್ಟೆ, ಮುಡುಕು ತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯ, ತಲಕಾಡು, ತಿ.ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಾಲಯ, ಕಬಿನಿ ಹಿನ್ನೀರು, ನಾಗರ ಹೊಳೆ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕದೇವಮ್ಮ ದೇವಾಲಯ, ಬದನವಾಳು ಖಾದಿ ಗ್ರಾಮ, ತಗಡೂರು ಲಕ್ಷ್ಮೀನಾರಾಯಣ ದೇವಾಲಯ, ಗರ್ಗೇಶ್ವರಿ ದೇವಾಲಯ, ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಾಲಯ, ಬೇಲದಕುಪ್ಪೆ ಮಹದೇಶ್ವರ ದೇವಾಲಯ, ಭೀಮನಕೊಲ್ಲಿ, ಮೈಸೂರಿನ ಜಾನಪದ ವಸ್ತುಸಂಗ್ರಹಾಲಯ ಹಾಗೂ ಕೆಎಸ್‌ಐಸಿ ಸೇರಿದಂತೆ ಒಟ್ಟು 33 ಪ್ರಮುಖ ತಾಣಗಳಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ.



ಮೈಸೂರು ಅರಮನೆ ಮುಂದೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ಕ್ಯೂಆರ್ ಕೋಡ್ ಮಾಹಿತಿ ಫಲಕ ಅಳವಡಿಸಿರುವುದು.



ಮೃಗಾಲಯದ ಮುಂದೆ ಕ್ಯೂಆರ್ ಕೋಡ್ ಫಲಕ ಅಳವಡಿಸಿರುವುದು.

ನಕಲಿ ಗೈಡ್ ಹಾವಳಿ ತಪ್ಪಿಸಲು ಸಹಕಾರಿ

“ಮೈಸೂರಿಗೆ ಬರುವ ಪ್ರವಾಸಿಗರನ್ನು ದಿಕ್ಕುತಪ್ಪಿಸಲು ಕೆಲವು ನಕಲಿ ಗೈಡ್‌ಗಳು ಕಾರ್ಯೋನ್ಮುಖರಾಗಿದ್ದು, ಅರಮನೆ, ಮೃಗಾಲಯ ಸೇರಿದಂತೆ ಕೆಲ ಪ್ರವಾಸಿ ತಾಣದ ಬಗ್ಗೆ ಪ್ರವಾಸಿಗರಿಗೆ ತಪ್ಪು ಮಾಹಿತಿ ನೀಡಿ, ಕಮಿಷನ್ ಆಸೆಗಾಗಿ ಒಡಂಬಡಿಕೆ ಮಾಡಿಕೊಂಡ ಶಾಪಿಂಗ್ ಮಾಲ್‌ಗಳಿಗೆ ಪ್ರವಾಸಿಗರನ್ನು ಕಳುಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಕಲಿ ಗೈಡ್‌ಗಳಿಂದ ದಾರಿ ತಪ್ಪಿದ ಕೆಲ ಪ್ರವಾಸಿಗರು ಮೋಸಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರವಾಸಿ ತಾಣ ಹಾಗೂ ಪಾರಂಪರಿಕ ಕಟ್ಟಡ, ದೇವಾಲಯಗಳ ಮುಂದೆ ಕ್ಯೂಆರ್ ಕೋಡ್ ವ್ಯವಸ್ಥೆಯೊಂದಿಗೆ ಸಮಗ್ರ ಮಾಹಿತಿ ನೀಡಲು ಹೊಸ ವ್ಯವಸ್ಥೆ ಸಹಕಾರಿಯಾಗಿದೆ. ಇದನ್ನು ಕಾಲಕಾಲಕ್ಕೆ ಮಾರ್ಪಾಡು ಮಾಡಿ, ಪ್ರವಾಸಿಗರಿಗೆ ಇನ್ನಷ್ಟು ಮಾಹಿತಿ ಒದಗಿಸಬೇಕು. ಅಲ್ಲದೆ ಸಾಮಾಜಿಕ ಜಾಲತಾಣಗಳಲ್ಲೂ ಕ್ಯೂಆರ್ ಕೋಡ್ ವ್ಯವಸ್ಥೆ ಅಳವಡಿಸಿದರೆ, ಇನ್ನಷ್ಟು ಪ್ರವಾಸಿಗರಿಗೆ ಮಾಹಿತಿ ದೊರೆತು ಮೈಸೂರು ವೀಕ್ಷಣೆಗೆ ಆಗಮಿಸಲು ಸಾಧ್ಯವಾಗಲಿದೆ.

ನೂತನ ಪದಾಧಿಕಾರಿಗಳು



ಮೈಸೂರಿನ ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಜಯನಗರ ಮಹೇಶ್, ಉಪಾಧ್ಯಕ್ಷರಾಗಿ ಎಂ.ಎಸ್. ಸುರೇಶ ಕುಮಾರ್, ಕಾರ್ಯದರ್ಶಿಯಾಗಿ ಯೋಗೇಶ್ ಹೆಬ್ಬಾಳು, ಖಜಾಂಚಿಯಾಗಿ ರವಿಕುಮಾರ್, ನಿರ್ದೇಶಕರಾಗಿ ಚಂದ್ರೇಗೌಡ, ಬೋಗಾದಿ ಕುಮಾರ, ಶಿವರಾಜ್ ಎಸ್, ಯೋಗೇಶ್ ಜಯನಗರ, ರುದ್ರಸ್ವಾಮಿ, ಸಂತೋಷ್ ಕುಮಾರ್ ಬೆಹರ, ಕೃಷ್ಣ ಕುಮಾರ್ ಎನ್, ದಿನೇಶ್, ಜಾಕಿರ್ ಹುಸೇನ್, ಆಯ್ಕೆಯಾಗಿದ್ದಾರೆ.

ಮೈಸೂರು ಜಿಲ್ಲಾ ಎಕ್ಸ್ ಸರ್ವೀಸ್‌ಮನ್ ವಿಭಾಗಕ್ಕೆ ಆಯ್ಕೆ



ಮೈಸೂರು,ಅ.20–ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಎಕ್ಸ್‌ಸರ್ವೀಸ್‌ಮನ್ ವಿಭಾಗದಿಂದ ಮೈಸೂರು ಜಿಲ್ಲಾ ಎಕ್ಸ್ ಸರ್ವೀಸ್‌ಮನ್ ವಿಭಾಗಕ್ಕೆ ಶ್ರೀಮತಿ ರಜನಿ ಸುಬ್ಬಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಎಕ್ಸ್–ಸರ್ವೀಸ್‌ಮನ್ (ಮಾಜಿ ಸೈನಿಕ) ಹಾಗೂ ಯುದ್ಧದಲ್ಲಿ ಮೃತರಾದ ಸೈನಿಕರ ಕುಟುಂಬದವರು ಅಂದರೆ ತಾಯಿ ಅಥವಾ ಹೆಂಡತಿ ಇವರಲ್ಲಿ ಯಾರಿಗಾದರೂ ಕುಂದುಕೊರತೆಗಳು ಇದ್ದಲ್ಲಿ ನೇರವಾಗಿ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಮೊ. 74066 70097, 74066 70097 ಸಂಪರ್ಕಿಸಬಹುದು.

ಮಕ್ಕಳಿಗಾಗಿ ಉಚಿತ ಕಣ್ಣಿನ ತಪಾಸಣೆ ಅಭಿಯಾನ

ಮೈಸೂರು,ಅ.20–ವಾಸನ್ ಕಣ್ಣಿನ ಆರೈಕೆಯು 24 ರವರೆಗೆ ತನ್ನ ಎಲ್ಲಾ ಶಾಖೆಗಳಲ್ಲಿ 15 ವರ್ಷದೊಳಗಿನ ಮಕ್ಕಳಿಗೆ ಪಟಾಕಿ ಸಂಬಂಧಿತ ಕಣ್ಣಿನ ಗಾಯಗಳಿಗೆ ಉಚಿತ ಸಮಾಲೋಚನೆ ನೀಡುವ ವಿಶೇಷ ಕಣ್ಣಿನ ಸುರಕ್ಷತಾ ಅಭಿಯಾನವನ್ನು ಪ್ರಾರಂಭಿಸಿದೆ.

ವಾಸನ್ ಐ ಕೇರ್‌ನಲ್ಲಿ ಶನಿವಾರ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ಹಿರಿಯ ಕಣ್ಣಿನ ಪೊರೆ ಶಸ್ತ್ರಚಿಕಿತ್ಸಕಿ ಡಾ.ಹೇಮಾ ಶ್ರೀನಾಥ್, ಪಟಾಕಿ ಅಪಘಾತಗಳಿಂದಾಗಿ ಗಾಯಗೊಂಡ ಮಕ್ಕಳ ದೃಷ್ಟಿಯನ್ನು ಸಕಾಲಿಕ ಚಿಕಿತ್ಸೆಯಿಂದ ಉಳಿಸಬಹುದು. ಇಂತಹ ಪ್ರಕರಣಗಳನ್ನು ನಿಭಾಯಿಸಲು ನಮ್ಮ ತಜ್ಞ ವೈದ್ಯರು ಎಲ್ಲಾ ಕೇಂದ್ರಗಳಲ್ಲಿ ಲಭ್ಯವಿದೆ. ಈ ಉಪಕ್ರಮವು ಸಮುದಾಯದ ಕಣ್ಣಿನ ಆರೋಗ್ಯ, ತುರ್ತು ಆರೈಕೆ ಮತ್ತು ತಡೆಗಟ್ಟುವ ಜಾಗೃತಿಯ ಕುರಿತು ವಾಸನ್ ಐ ಕೇರ್‌ನ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ವಾಸನ್ ಐ ಕೇರ್ ಸಾರ್ವಜನಿಕರು ಜವಾಬ್ದಾರಿಯುತವಾಗಿ ಹಬ್ಬವನ್ನು ಆಚರಿಸಬೇಕು ಮತ್ತು ಕಣ್ಣಿನಲ್ಲಿ ಯಾವುದೇ ಅಸ್ವಸ್ಥತೆ ಅಥವಾ ಗಾಯವಾದರೆ ತಜ್ಞರ ಆರೈಕೆಯನ್ನು ಪಡೆಯಲು ಮನವಿ ಮಾಡಿದೆ. ಸಹಾಯಕ್ಕಾಗಿ, ಹತ್ತಿರದ ವಾಸನ್ ಐ ಕೇರ್ ಕೇಂದ್ರಕ್ಕೆ ಭೇಟಿ ನೀಡಿ ಅಥವಾ ತಕ್ಷಣದ ಬೆಂಬಲಕ್ಕಾಗಿ ನಮ್ಮ ಟೋಲ್–ಫ್ರೀ ಸಂಖ್ಯೆ 1800 571 3333 ಗೆ ಕರೆ ಮಾಡಿ. ಈ ವೇಳೆ ರೆಟಿನಾ ಸರ್ಜನ್ ಡಾ. ಮಹೇಶ್ವರಿ ಮತ್ತು ಕಣ್ಣಿನ ಪೊರೆ ಶಸ್ತ್ರಚಿಕಿತ್ಸಕ ಡಾ. ಅರುಣ್ ಅವರು ಸಹ ಉಪಸ್ಥಿತರಿದ್ದರು.



ವಾಸನ್ ಕಣ್ಣಿನ ಆರೈಕೆಯು ಅ.24ರವರೆಗೆ ತನ್ನ ಎಲ್ಲಾ ಶಾಖೆಗಳಲ್ಲಿ 15 ವರ್ಷದೊಳಗಿನ ಮಕ್ಕಳಿಗೆ ಪಟಾಕಿ ಸಂಬಂಧಿತ ಕಣ್ಣಿನ ಗಾಯಗಳಿಗೆ ಉಚಿತ ಸಮಾಲೋಚನೆ ನೀಡುವ ಕಣ್ಣಿನ ಸುರಕ್ಷತಾ ಅಭಿಯಾನ ಪ್ರಾರಂಭಿಸಿದೆ.

ನಾಳೆ ವಿಶೇಷ ಸ್ವಾತಿ ಪೂಜೆ



ಮೈಸೂರು,ಅ.20–ನಗರದ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಅ.22ರಂದು (ಬುಧವಾರ) ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9342188323, 7598832271 ಸಂಪರ್ಕಿಸಬಹುದು.

ಪೌರಕಾರ್ಮಿಕರಿಗೆ ಮಣ್ಣಿನ ಹಣತೆ ವಿತರಣೆ



ಮೈಸೂರಿನ ವಾರ್ಡ್ ನಂ.55ರ ವ್ಯಾಪ್ತಿಯಲ್ಲಿ ಮನೆ ಮನೆಗೆ ಹಾಗೂ ಪೌರಕಾರ್ಮಿಕರಿಗೆ ಮಣ್ಣಿನ ಹಣತೆ ವಿತರಿಸಿ ಹಬ್ಬದ ಶುಭಾಷಯ ಕೋರಲಾಯಿತು.

ಮೈಸೂರು, ಅ.20(ಎಂಕೆ)– ಮೈಸೂರಿನ ವಾರ್ಡ್ ನಂ.55ರಲ್ಲಿ ಮನೆ ಮನೆಗೆ ಹಾಗೂ ಪೌರಕಾರ್ಮಿಕರಿಗೆ ಮಣ್ಣಿನ ದೀಪಗಳನ್ನು ವಿತರಿಸುವ ಮೂಲಕ ದೀಪಾವಳಿ ಹಬ್ಬದ ಶುಭಾಷಯ ಕೋರಲಾಯಿತು.

ನಗರಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಹಾಗೂ ಬಿಜೆಪಿ ಮುಖಂಡರ ನೇತೃತ್ವದಲ್ಲಿ ವಾರ್ಡ್‌ನ ಎಲ್ಲಾ ಮನೆಗಳಿಗೆ ದೀಪದ ಹಣತೆಗಳನ್ನು ವಿತರಣೆ ಮಾಡಲಾಯಿತು. ಬಳಿಕ ಸ್ನೇಕ್ ಪಾರ್ಕ್‌ನಲ್ಲಿ ವಾರ್ಡ್ ವ್ಯಾಪ್ತಿಯ ಪೌರಕಾರ್ಮಿಕರಿಗೆ ಹಣತೆಗಳನ್ನು ನೀಡಿ, ದೀಪಾವಳಿ ಹಬ್ಬದ ಶುಭಾಷಯ ಕೋರಲಾಯಿತು.

ಹಾಗೆಯೇ ಪಟಾಕಿಗಳಿಂದ ಪರಸರಕ್ಕೆ ಹಾನಿಯಾಗಲಿದ್ದು, ಸಾಧ್ಯವಾದಷ್ಟು ಪಟಾಕಿಗಳ ಬಳಕೆ ಕಡಿಮೆ ಮಾಡಿ. ಮಕ್ಕಳ ಕೈಯಲ್ಲಿ ಪಟಾಕಿ ಹೊಡೆಯಲು ಕೊಡಬೇಡಿ. ಕಣ್ಣಿಗೆ ಕನ್ನಡಕ ಹಾಕಿಕೊಂಡು ಪಟಾಕಿ ಹೊಡೆಯಿರಿ ಎಂದು ಎಚ್ಚರಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಅದ್ವೈತ್ ಜೀವತ್ಸ, ವಿ.ಮಂಜುನಾಥ್, ಧರ್ಮೇಂದ್ರ, ಲಕ್ಷ್ಮಿನಾರಾಯಣ್, ಶ್ರೀರಾಮ ಗೆಳೆಯರ ಬಳಗದ ಸಿ.ಸಂದೀಪ್, ಭಾನುಕುಮಾರ್, ಮಧುಸೂಧನ್, ಪಾರ್ವತಿ, ಸುರೇಶ್ ಉಪಸ್ಥಿತರಿದ್ದರು.

ದಿವಾಳಿ ಬದಲು ದೀಪಾವಳಿ ಪದ ಬಳಕೆ ಜಾಗೃತಿ ಅಭಿಯಾನ

ಮೈಸೂರು,ಅ.20(ಎಂಕೆ)–'ದಿವಾಳಿ' ಎನ್ನುವ ಬದಲು 'ದೀಪಾವಳಿ' ಎಂಬ ಕನ್ನಡ ಪದ ಬಳಕೆ ಮಾಡುವಂತೆ ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಜಾಗೃತಿ ಅಭಿಯಾನ ನಡೆಸಲಾಯಿತು.

ಡಿ.ದೇವರಾಜ ಅರಸು ರಸ್ತೆ ವಿನೋಬಾ ರಸ್ತೆ, ಶಿವರಾಂಪೇಟೆಯ ಅಂಗಡಿ–ಮಳಿಗೆಗಳಿಗೆ ಭೇಟಿ ನೀಡಿದ ವೇದಿಕೆ ಪದಾಧಿಕಾರಿಗಳು, ದಿವಾಳಿ ಎಂಬ ನಾಮಫಲಕಗಳನ್ನು ಬದಲಿಸಿ, ಕನ್ನಡದಲ್ಲಿ ದೀಪಾವಳಿ ಎಂದು ಬರೆಸಬೇಕು ಎಂದು ತಾಕೀತು ಮಾಡಿದರು.

ಇತ್ತೀಚಿನ ವರ್ಷಗಳಲ್ಲಿ ಬೆಳಗಿನ ಹಬ್ಬ ದೀಪಾವಳಿ ಎನ್ನುವ ಬದಲು ದಿವಾಳಿ ಎಂದು ಶುಭ ಕೋರುವುದು ಹೆಚ್ಚಾಗುತ್ತಿದೆ. ದಿವಾಳಿ ಎನ್ನುವುದು ಕನ್ನಡದಲ್ಲಿ ಅಶುಭ ಪದವಾಗಿದೆ. ಹಿಗಾಗಿ ದೀಪಾವಳಿ ಎಂದು ಪದ ಬಳಕೆ ಮಾಡಿ. ಆಫರ್ ಜಾಹಿರಾತುಗಳಲ್ಲಿಯೂ ದೀಪಾವಳಿ ಎಂದೇ ಪದ ಬಳಕೆ ಮಾಡುವಂತೆ ತಿಳಿಹೇಳಿದರು.

ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಮುಖಂಡರಾದ ಜಿ.ರಾಘವೇಂದ್ರ ಎಸ್.ಎನ್. ರಾಜೇಶ್, ರವಿಚಂದ್ರ, ನಂಜುಂಡಸ್ವಾಮಿ, ಸಚಿನ್ ನಾಯಕ್, ದಿನೇಶ್, ರಾಕೇಶ್, ಕಾಟೂರು ಶ್ರೀನಿವಾಸ್, ಕಣ್ಣಣ್ಣ ಇದ್ದರು.



ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ದೀಪಾವಳಿ ಪದ ಬಳಕೆ ಜಾಗೃತಿ ಅಭಿಯಾನ ನಡೆಸಲಾಯಿತು.

ಪಿಹೆಚ್‌ಡಿ ಪದವಿ



ಮೈಸೂರು: 'ಮೈಸೂರು ನಗರದಲ್ಲಿ ಆಯ್ದ ಮ್ಯೂಚುಯಲ್ ಫಂಡ್ ಇನ್ ವೆಸ್ಟರ್ ಆರ್ಥಿಕ ಅರಿವಿನ ಒಂದು ಅಧ್ಯಯನ್' ಕುರಿತು ಬಿ ಹೃಷಿಕೇಶ್ ಮಂಡಿಸಿದ ಮಹಾಪ್ರಬಂಧಕ್ಕೆ ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಭಾರತೀಯ ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿ ನೀಡಿದೆ. ಇವರು ಕೊಯಮತ್ತೂರಿನ ಸಿಬಿಎಂ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕ ಡಾ. ಎ ಕಬೂರ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಪ್ರಬಂಧ ಮಂದಿಸಿದ್ದರು.

ಮಳಲಿ ನಟರಾಜ್‌ಕುಮಾರ್‌ಗೆ ಪಿತೃವಿಯೋಗ



ಮೈಸೂರು, ಅ. 20– ಮೈಸೂರು ದಿಗಂತ ಪ್ರಾದೇಶಿಕ ದಿನಪತ್ರಿಕೆ ಸಂಪಾದಕ ಮಳಲಿ ನಟರಾಜ್‌ಕುಮಾರ್ ಅವರ ತಂದೆ ಅಮಾವಾಸೇಗೌಡ (87) ಹುಟ್ಟೂರು ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಮಳಲಿ ಗ್ರಾಮದಲ್ಲಿ ಸೋಮವಾರ ನಿಧನರಾದರು.

ಶ್ರೀಯುತರು ಮಳಲಿ ಗ್ರಾಮದ ಶ್ರೀ ಲಕ್ಷ್ಮೀದೇವಿ ದೇವಸ್ಥಾನದ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದರು. ಮೃತರು ಇಬ್ಬರು ಪುತ್ರರಾದ ಮಳಲಿ ನಟರಾಜ್‌ಕುಮಾರ್ ಮತ್ತು ಮಧುಸೂದನ್, ಪುತ್ರಿ ವಿಜಯಕುಮಾರಿ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಳಲಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಟಿ.ಕೆ.ಗಜಾನನ್



ಮೈಸೂರು, ಅ. 20–ಮೈಸೂರು ವಿಶ್ವವಿದ್ಯಾನಿಲಯದ ವಿದೇಶಿ ಭಾಷೆಗಳ ಶಾಲೆಯ ಮಾಜಿ ಅಧ್ಯಕ್ಷರಾಗಿದ್ದ ಡಾ. ಟಿ.ಕೆ. ಗಜಾನನ್ (67) ಸೋಮವಾರ ಯೂನಿವರ್ಸಿಟಿ ಕ್ವಾಟ್ರರ್ಸ್‌ನಲ್ಲಿ ನಿಧನರಾದರು.

ಮೂಲತಃ ಕೇರಳದ ತಟ್ಟೀಲ್ ಗ್ರಾಮದವರಾದ ಇವರು ಪತ್ನಿ, ಓರ್ವ ಪುತ್ರ, ಪುತ್ರಿ (ಮಲೇಷಿಯಾದಲ್ಲಿ ಡೆಂಟಿಸ್ಟ್) ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಅವರ ಸ್ವಗ್ರಾಮದಲ್ಲಿ ನಾಳೆ (ಅ.21) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹನುಮಂತ ನಾಯಕ



ಮೈಸೂರಿನ ಹೂಟಗಳ್ಳಿ ನಿವಾಸಿ ಹನುಮಂತನಾಯಕ (87) ಅವರು ಭಾನುವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಐವರು ಪುತ್ರಿಯರು, ಓರ್ವ ಪುತ್ರ ಸರ್.ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಯೋಗೀಶ್, ಅಳಿಯಂದಿರು, ಸೊಸೆ ಅರ್ಪಿತ್, 10 ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮ ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕು ದೊಡ್ಡ ಕಾಡನೂರಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.10.2025 ಮಂಗಳವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಪೊಲೀಸ್ ಉಪ ಮಹಾನಿರೀಕ್ಷಕರು ದಕ್ಷಿಣ ವಲಯ, ಮೈಸೂರು ನಗರ, ಮೈಸೂರು ಜಿಲ್ಲೆ, ಕರ್ನಾಟಕ ಪೊಲೀಸ್ ಅಕಾಡೆಮಿ, ಕೆಎಸ್‌ಆರ್‌ಪಿ ಮತ್ತು ಕೆಎಆರ್‌ಪಿ ಘಟಕ :** ಪೊಲೀಸ್ ಹುತಾತ್ಮರ ದಿನಾಚರಣೆ, ಮುಖ್ಯ ಅತಿಥಿಗಳು : ಪೊಲೀಸ್ ಉಪ ಮಹಾನಿರೀಕ್ಷಕ, ದಕ್ಷಿಣ ವಲಯ ಡಾ. ಎಂ.ಬಿ. ಬೋರಲಿಂಗಯ್ಯ, ಸ್ಥಳ: ಮೈಸೂರು ಜಿಲ್ಲಾ ಪೊಲೀಸ್ ಕಚೇರಿ ಪಕ್ಕದಲ್ಲಿರುವ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನ, ಬೆಳಗ್ಗೆ 8ಕ್ಕೆ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮೈಗ್ರೇನ್ ಹಾಗೂ ಎಲ್ಲಾ ಪ್ರಕಾರದ ತಲೆನೋವುಗಳಿಗೆ ಚಿಕಿತ್ಸಾ ಶಿಬಿರ, ಲಕ್ವ/ಪ್ಯಾರಾಲಿಸಿಸ್, ಕಾರ್ನಿಯಾದ ಅಪಾರ ದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ದೀಪಾವಳಿ ಹಬ್ಬದ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ
- **ಮೈಸೂರು ಮಹಾನಗರ ಪಾಲಿಕೆ :** ಡಾ. ಪುಟ್ಟರಾಜ ಗವಾಯಿಗಳ ಕ್ರೀಡಾಂಗಣದಿಂದ ಭಾರತ ತಂಡಕ್ಕೆ ಆಯ್ಕೆಯಾಗಿರುವ ಕು. ಶ್ರಾವಣಿ ಅವರಿಗೆ ಅಭಿನಂದನಾ ಕಾರ್ಯಕ್ರಮ, ಉಪಸ್ಥಿತರು : ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸ್ಥಳ: ಮೈಸೂರು ನಗರ ಪಾಲಿಕೆ ಹಳೆಯ ಕೌನ್ಸಿಲ್ ಸಭಾಂಗಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕವಿತಾ ಮುಚ್ಚಂಡಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಹಂಸಿನಿ.ಎಸ್. ಕುಮಾರ್, ವ್ಯಾಖ್ಯಾನ: ಡಾ.ಎನ್.ಎಸ್.ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು ನೆನಪುಗಳ ಹೊತ್ತು – ವಿಶೇಷ ಕಾರ್ಯಕ್ರಮ ಸರಣಿ, ತೊಂಬತ್ತರ ಹರೆಯದ ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅವರೊಂದಿಗೆ ಸಂವಾದ. ಪ್ರಸ್ತುತಿ : ಉಮೇಶ್.ಎಸ್.ಎಸ್., 9.00 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ – ಪ್ರಾಯೋಜಿತ ಕಾರ್ಯಕ್ರಮ, 9.05 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಲಲಿತಾ ಮತ್ತು ಹರಿಪ್ರಿಯ–ಯುಗಳ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ: ದೀಪಾವಳಿ ಹಬ್ಬದ ಕುರಿತು ಮೈಸೂರಿನ ಸದ್ಗುರು ಕಲಾ ತಂಡದವರಿಂದ ವಿಶೇಷ ಕಾರ್ಯಕ್ರಮ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ ಮೈಸೂರು ಪರಿಸರದಲ್ಲಿ ದೊರೆತ ಕೊಳ್ಳೆಗಾಲದ ಅಪೂರ್ವ ಸ್ಮಾರಕ ಶಿಲ್ಪ ಈ ಕುರಿತು ಮಾತನಾಡುತ್ತಾರೆ ಹುಣಸೂರು ಸರ್ಕಾರಿ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಜಗದೀಶ್ ತುರಗನೂರು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಅಟಲ್ ಭೂಜಲ್ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತ ಎಂ.ವಿನೋದ್, 1.20 ಭಾವಗೀತೆಗಳು : ವೀಣಾ ಶ್ರೀನಿವಾಸ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಭರತ್ ಸುಂದರ್ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ –ಬಲಿವಾಮನ, ಪ್ರಸ್ತುತಿ : ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. 'ಮತ್ಸ್ಯ–ತರಂಗ', ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ಮೀನು ಸಾಕಾಣಿಕೆಯಲ್ಲಿ ರೋಗಗಳ ಸಮಗ್ರ ನಿರ್ವಹಣೆ ಈ ಕುರಿತು ಮಳವಳ್ಳಿಯ ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಜೆ.ಪೂಜಾಶ್ರೀ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ –ಬಿ. ದಿಗ್ವಿಜಯ್, 8.00 ಆಕಾಶವಾಣಿಗೆ ತೊಂಬತ್ತು ಸಿನಿತಾರೆಯರ ನುಡಿಮುತ್ತು, ಪ್ರಸ್ತುತಿ–ಶ್ರೀಮಾನ್.ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಬಿ. ಹರಿಹರನ್ ಹಾಗೂ ಅಶೋಕ್.ಆರ್–ಯುಗಳ ಹಾಡುಗಾರಿಕೆ, 10.00 ಚೈತ್ರವನ ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 21 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 184 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website:* www.mysurumithra.com

₹4

18 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆ ಆರಂಭ

●ಅರ್ಹತಾ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನ.9 ಕಡೇ ದಿನ; ಡಿ.7ರಂದು ಪರೀಕ್ಷೆ ●ಎರಡು ತಿಂಗಳಲ್ಲಿ ಸಂಪೂರ್ಣ ನೇಮಕಾತಿ ಪ್ರಕ್ರಿಯೆ ಪೂರ್ಣ ●ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ



ಬೆಂಗಳೂರು, ಅ.20 (ಕೆಎಂಶಿ)– ರಾಜ್ಯದಲ್ಲಿ 18 ಸಾವಿರ ಶಿಕ್ಷಕರು ಹಾಗೂ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಆರಂಭಿಸಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ಅವರು ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಶುರು ಮಾಡಲಾಗಿದೆ ಎಂದರು.

51 ಸಾವಿರ ಅತಿಥಿ ಶಿಕ್ಷಕರ ನೇಮಕ: ಶಾಲಾ ಶಿಕ್ಷಣ ಗುಣಮಟ್ಟ ಸುಧಾರಣೆಯಾಗಬೇಕಾದರೆ ಶಿಕ್ಷಕರ ನೇಮಕಾತಿ ಅಗತ್ಯ ಇದೆ. ಸದ್ಯಕ್ಕೆ ಶಿಕ್ಷಕರ ಕೊರತೆ ನೀಗಲು ನಮ್ಮ ಸರ್ಕಾರ 51 ಸಾವಿರ ಅತಿಥಿ ಶಿಕ್ಷಕರನ್ನು ಏಕಕಾಲಕ್ಕೆ ನಿಯೋಜನೆ ಮಾಡಲಾಗಿದೆ. ಈಗಾಗಲೇ 13 ಸಾವಿರ ಶಿಕ್ಷಕರನ್ನು ನೇಮಿಸಲಾಗಿದ್ದು, ಹೊಸದಾಗಿ ಪದವಿಪೂರ್ವ ಕಾಲೇಜಿನ 800 ಉಪನ್ಯಾಸಕರು, ಕಲ್ಯಾಣ ಕರ್ನಾಟಕ ಭಾಗದ 500, ರಾಜ್ಯದ ಇತರೆಡೆಗೆ 5 ಸಾವಿರ ಸೇರಿದಂತೆ ಒಟ್ಟು 13 ಸಾವಿರ ಶಿಕ್ಷಕರ ನೇಮಕಕ್ಕೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ.

ಅಕ್ಟೋಬರ್ 23ರಿಂದ ನವೆಂಬರ್ 9ರ ಒಳಗೆ ಶಿಕ್ಷಕರ ಅರ್ಹತಾ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಡಿಸೆಂಬರ್ 7ರಂದು ಈ ಪರೀಕ್ಷೆ ನಡೆಸಲಾಗುವುದು. ಮುಂದಿನ ಎರಡು ತಿಂಗಳೊಳಗಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ಗುರಿಯಿದೆ. ಮುಂದಿನ ವರ್ಷ ಮತ್ತಷ್ಟು ಶಿಕ್ಷಕರ ನೇಮಕಾತಿಗೆ ಅನುಮತಿ ಕೋರಿ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗಿದೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದಿದ್ದಾರೆ. ರಾಜ್ಯ ಸರ್ಕಾರ ಅಭಿವೃದ್ಧಿ ಮಾಡುತ್ತಿಲ್ಲ ಎಂದು ಟೀಕೆ ಮಾಡುತ್ತಿರುವ ಬಿಜೆಪಿಯವರು ಕಣ್ಣು ಬಿಟ್ಟು ನೋಡಲಿ, ಗ್ಯಾರಂಟಿ ಯೋಜನೆಗಳ ಜೊತೆಗೆ ಎರಡೂವರೆ ವರ್ಷದಲ್ಲಿ ಒಟ್ಟು 23 ಸಾವಿರ ಶಿಕ್ಷಕರನ್ನು ನೇಮಿಸಿಕೊಂಡಂತಾಗುತ್ತದೆ. ಬಿಜೆಪಿಯವರು 3 ವರ್ಷ 7 ತಿಂಗಳಲ್ಲಿ ಕೇವಲ 4700 ಶಿಕ್ಷಕರನ್ನು ಮಾತ್ರ ನೇಮಿಸಿದ್ದರು ಎಂದು ತಿರುಗೇಟು ನೀಡಿದ್ದಾರೆ.

800 ಪಬ್ಲಿಕ್ ಶಾಲೆ ನಿರ್ಮಾಣಕ್ಕೆ ಶೀಘ್ರ ಚಾಲನೆ: ರಾಜ್ಯದಲ್ಲಿ 2018ರಿಂದ ಕೇವಲ 308 ಪಬ್ಲಿಕ್ ಶಾಲೆಗಳಿದ್ದವು. ನಮ್ಮ ಸರ್ಕಾರ ಹೆಚ್ಚುವರಿಯಾಗಿ 800 ಶಾಲೆಗಳನ್ನು, ಉಚಿತ ಸಾರಿಗೆ ವ್ಯವಸ್ಥೆಯೊಂದಿಗೆ ಆರಂಭಿಸುತ್ತಿದೆ. ನವೆಂಬರ್ 2ನೇ ವಾರದಲ್ಲಿ 800 ಕರ್ನಾಟಕ ಪಬ್ಲಿಕ್ (ಕೆಪಿಎಸ್) ಶಾಲೆಗಳ ನಿರ್ಮಾಣಕ್ಕೆ ಶಿವಮೊಗ್ಗದಲ್ಲಿ ಗುದ್ದಲಿ ಪೂಜೆಯನ್ನು ಮುಖ್ಯಮಂತ್ರಿ ನೆರವೇರಿಸಲಿದ್ದಾರೆ. ಸುಮಾರು ಮೂರು ಸಾವಿರ ಕೋಟಿ ರೂ. ವೆಚ್ಚದಲ್ಲಿ ಈ ಶಾಲೆಗಳು ನಿರ್ಮಾಣವಾಗುತ್ತಿವೆ. ಇಲ್ಲಿ 1ನೇ ತರಗತಿಯಿಂದಲೂ ▶ 6ನೇ ಪುಟಕ್ಕೆ

ಮಾತೃ ಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ

“ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಮಕ್ಕಳ ಸ್ವಂತ ಮಾತೃ ಭಾಷೆಯಲ್ಲೇ ಕಲಿಸಲಾಗುವುದು. 6ನೇ ತರಗತಿ ಬಳಿಕ ಮಾಧ್ಯಮವನ್ನು ವಿಭಜಿಸಲಾಗುತ್ತದೆ. ಕನ್ನಡ, ಇಂಗ್ಲಿಷ್ ಸೇರಿದಂತೆ ಯಾವುದೇ ಮಾಧ್ಯಮವನ್ನಾದರೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಕನ್ನಡ ಭಾಷಾ ಕಲಿಕೆ ಕಡ್ಡಾಯವಾಗಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರಿಂದ ಪೋಷಕರ ಶೈಕ್ಷಣಿಕ ವೆಚ್ಚ ತಗ್ಗಲಿದೆ. 800 ಶಾಲೆಗಳ ಜೊತೆಗೆ ರಾಜ್ಯಾದ್ಯಂತ 9500 ಚಾಲ್ತಿಯಿರುವ ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಗುರುತಿಸಲಾಗಿದೆ. ಇದು ಮುಂದಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆ ತರಲಿದೆ.

–ಮಧು ಬಂಗಾರಪ್ಪ, ಶಿಕ್ಷಣ ಸಚಿವ



“**ಪ್ರತಿ ಶಾಲೆಗೂ ಎಲ್‌ಕೆಜಿ, ಯುಕೆಜಿಗೆ ತಲಾ 30, ಪ್ರಾಥಮಿಕ ತರಗತಿಗಳಿಗೆ 50, ಪ್ರೌಢ ಮತ್ತು ಪಿಯುಸಿ ತರಗತಿಗೆ ತಲಾ 60 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಶಾಲೆಗಳ ಸ್ಥಳ ಆಯ್ಕೆಯನ್ನು ಸ್ಥಳೀಯ ಮಟ್ಟಕ್ಕೆ ಬಿಡಲಾಗುತ್ತದೆ. ಸ್ಮಾರ್ಟ್ ಕ್ಲಾಸ್‌ಗಳನ್ನು ನಿರ್ವಹಣೆ ಮಾಡಲಾಗುವುದು. ಶಾಸಕರ ಅಧ್ಯಕ್ಷತೆಯಲ್ಲಿ ಗೌವರ್ನಿಂಗ್ ಕೌನ್ಸಿಲ್ ರಚಿಸಿ, ಶಾಲೆಗಳ ನಿರ್ವಹಣೆ ಮಾಡಲಾಗುವುದು. –ಮಧು ಬಂಗಾರಪ್ಪ**

ಸಿಎಂ ಸಿದ್ದರಾಮಯ್ಯ ಭಾಗಿಯಾಗಿದ್ದ ಕಾರ್ಯಕ್ರಮದಲ್ಲಿ

ನೂಕುನುಗ್ಗಲು: 11ಕ್ಕೂ ಅಧಿಕ ಮಂದಿ ಅಸ್ವಸ್ಥ

ಊಟ, ಉಡುಗೊರೆಗೆ ಮುಗಿಬಿದ್ದ ಜನ; ಮಹಿಳೆಯರು, ಮಕ್ಕಳ ನರಳಾಟ



ಪುತ್ತೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಿದ್ದ 'ಅಶೋಕ ಜನಮನ' ಕಾರ್ಯಕ್ರಮದಲ್ಲಿ ನೂಕುನುಗ್ಗಲು ಉಂಟಾಗಿ ಅಸ್ವಸ್ಥರಾದವರನ್ನು ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಕರೆದೊಯ್ಯುತ್ತಿರುವುದು.

ಪುತ್ತೂರು, ಅ.20– ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಿದ್ದ 'ಅಶೋಕ ಜನಮನ' ಕಾರ್ಯಕ್ರಮದಲ್ಲಿ ನೂಕುನುಗ್ಗಲು ಉಂಟಾಗಿ 11ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ.

ಪುತ್ತೂರು ಶಾಸಕ ಅಶೋಕ್ ರೈ ನೇತೃತ್ವದಲ್ಲಿ ಅಶೋಕ್ ರೈ ಚಾರಿಟೇಬಲ್ ಟ್ರಸ್ಟ್ ವತಿಯಿಂದ ದೀಪಾವಳಿ ಆಚರಣೆ ಹಾಗೂ, ವಸ್ತ್ರ ಮತ್ತು ತಟ್ಟೆ-ಬಟ್ಟಲಿನ ವಿತರಣೆಗೆ ಪುತ್ತೂರು ತಾಲೂಕು ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಇದನ್ನು ಸಿಎಂ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.


ಕ್ರೀಡಾಂಗಣವು 20 ಸಾವಿರ ಜನ ಸೇರುವ ಸಾಮರ್ಥ್ಯ ಇದೆ. ಆದರೆ, ಕ್ರೀಡಾಂಗಣದಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ಬೆಳ್ತಂಗಡಿ, ಸುಳ್ಯ, ಬಂಟ್ವಾಳ, ಮಂಗಳೂರಿನಿಂದಲೂ ಉಚಿತ ಬಸ್ಸಿನಲ್ಲಿ ಮಹಿಳೆಯರು ಬಂದಿದ್ದರು. ಮುಖ್ಯಮಂತ್ರಿಗಳು ಬರುವಾಗಲೇ ಮಧ್ಯಾಹ್ನ 1.30 ಗಂಟೆ ಆಗಿದ್ದರಿಂದ ಜನರು ಹಸಿದಿದ್ದರು. ▶ 6ನೇ ಪುಟಕ್ಕೆ

ಹಾಸನಾಂಬೆ ದರ್ಶನ ಮುಗಿಸಿ ಮರಳುತ್ತಿದ್ದಾಗ ಬೈಕ್‌ಗೆ ಇನ್ನೋವಾ ಕಾರು ಡಿಕ್ಕಿ: ಸ್ಥಳದಲ್ಲೇ ಇಬ್ಬರ ದುರ್ಮರಣ

ಹಾಸನ, ಅ.20– ಹಾಸನಾಂಬ ದೇವಿಯ ದರ್ಶನ ಪಡೆದು ಮರಳುತ್ತಿದ್ದ ವೇಳೆ ಎರಡು ಬೈಕ್‌ಗಳಿಗೆ ಇನ್ನೋವಾ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಧಾರುಣವಾಗಿ ಸಾವನ್ನಪ್ಪಿರುವ ಘಟನೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೂಕಿನ ಕಗ್ಗಲಿಕಾವಲು ಫಾರೆಸ್ಟ್ ಬಳಿ ನಡೆದಿದೆ. ಭಾನುವಾರ ತಡರಾತ್ರಿ ಈ ಅಪಘಾತ ಸಂಭವಿಸಿದ್ದು, ಬೈಕ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ನೇಹಿತ ಬಸವರಾಜು ಜೊತೆಯಲ್ಲಿ ಬೆಂಗಳೂರಿನಿಂದ ಯಮಹಾ ಬೈಕ್‌ನಲ್ಲಿ ಅನುಶ್ರೀ (19) ಹಾಗೂ ಛಾಯಾ (20) ಬಂದಿದ್ದರು. ಹಾಸನಾಂಬ ದೇವಿ ದರ್ಶನ ಮುಗಿಸಿ ಒಂದೇ ಬೈಕ್‌ನಲ್ಲಿ ಮೂವರು ತೆರಳುತ್ತಿದ್ದರು. ಈ ವೇಳೆ ಚನ್ನರಾಯಪಟ್ಟಣ ಕಡೆಯಿಂದ ಬರುತ್ತಿದ್ದ ಇನ್ನೋವಾ ಕಾರು ಹೌಸಿಂಗ್ ಬೋರ್ಡ್ ಬಳಿ ವೇಗವಾಗಿ ಬಂದು ಮೊದಲು ಆಕ್ಟಿವಾಗೆ ಡಿಕ್ಕಿ ಹೊಡೆದು ಬಳಿಕ ಬೈಕ್‌ಗೆ ಡಿಕ್ಕಿ ಹೊಡೆದು ರಸ್ತೆ ಬದಿಯ ಅರಣ್ಯಕ್ಕೆ ನುಗ್ಗಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬೈಕ್‌ನಲ್ಲಿದ್ದ ಬಸವರಾಜು ಹಾಗೂ ಅನುಶ್ರೀ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೋರ್ವ ಯುವತಿ ಛಾಯಾ ಸ್ಥಿತಿ ಚಿಂತಾಜನಕವಾಗಿದ್ದು, ಚನ್ನರಾಯಪಟ್ಟಣ ತಾಲೂಕು ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಅಲ್ಲದೇ ಅಪಘಾತದಲ್ಲಿ ಆಕ್ಟಿವಾ ಸವಾರ ಮೊಹಮ್ಮದ್ ಶಾಹಿದ್‌ಗೂ ಗಂಭೀರ ಗಾಯಗಳಾಗಿವೆ. ಸ್ಥಳಕ್ಕೆ ಚನ್ನರಾಯಪಟ್ಟಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.





ಬಸವರಾಜು ಮತ್ತು ಅನುಶ್ರೀ

ಮೈಸೂರಿನ ತೆಂಗಿನ ಕಾಯಿ ವ್ಯಾಪಾರಿಗೆ 49 ಲಕ್ಷ ದೋಖಾ

ಮೈಸೂರು, ಅ.20 (ಬಿಎಲ್‌ಯು)– ಮೈಸೂರಿನ ತೆಂಗಿನಕಾಯಿ ಹೋಲ್ ಸೇಲ್ ವ್ಯಾಪಾರಿಗೆ ತಮಿಳುನಾಡಿನ ಇಂಪೋರ್ಟ್ ಅಂಡ್ ಎಕ್ಸ್‌ಪೋರ್ಟ್ ಉದ್ಯಮಿ 49 ಲಕ್ಷ ರೂ. ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ.

ಮೈಸೂರಿನ ಮಂಡಿಮೊಹಲ್ಲಾದ ಅಕ್ಬರ್ ರಸ್ತೆ ನಿವಾಸಿ ಸುಬೇದ್ ಅಗರವಾಲ್, ಹಣ ಕಳೆದುಕೊಂಡ ವ್ಯಕ್ತಿಯಾಗಿದ್ದಾರೆ.

ತಮಿಳುನಾಡಿನ ಚೆನ್ನೈನಲ್ಲಿ ಶ್ರೀವತ್ಸನ್ ಎಂಬಾತ ಇಂಪೋರ್ಟ್ ಅಂಡ್ ಎಕ್ಸ್‌ಪೋರ್ಟ್ ವ್ಯವಹಾರ ನಡೆಸುತ್ತಿದ್ದು, ಈತನ ಜೊತೆ ಮಾಡಿಕೊಂಡ ಒಪ್ಪಂದದಂತೆ ಸುಬೇದ್ ಅಗರವಾಲ್ ಅವರು 49,47,401 ಲಕ್ಷ ಮೌಲ್ಯದ ತೆಂಗಿನ ಕಾಯನ್ನು ಆತನಿಗೆ ಮಾರಾಟ ಮಾಡಿದ್ದಾರೆ. ಆದರೆ ತೆಂಗಿನ ಕಾಯಿ ಖರೀದಿ ಹಣವನ್ನು ಶ್ರೀವತ್ಸನ್ ಪಾವತಿ ಮಾಡಿಲ್ಲ. ಶ್ರೀವತ್ಸನ್‌ನ 4 ಮೊಬೈಲ್‌ಗಳು ಸ್ವಿಚ್ ಆಫ್ ಆಗಿವೆ. ಈ ಸಂಬಂಧ ಸುಬೇದ್ ಅಗರವಾಲ್ ಅವರು ಮೈಸೂರಿನ ಮಂಡಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ದೀಪಾವಳಿ ಸಂಭ್ರಮದ ನಡುವೆ ಘೋರ ದುರಂತ

ಸಾಲಿಗ್ರಾಮದಲ್ಲಿ ಮೂವರು ಬಾಲಕರು ನೀರುಪಾಲು

ಸಾಲಿಗ್ರಾಮ,ಅ.20–ದೀಪಾವಳಿ ಹಬ್ಬದ ದಿನವೇ ಸಾಲಿಗ್ರಾಮದಲ್ಲಿ ದುರಂತವೊಂದು ಸಂಭವಿಸಿದೆ. ಕಾಲುವೆಗೆ ಈಜಲು ತೆರಳಿದ್ದ ಮೂವರು ಬಾಲಕರು ನೀರುಪಾಲಾಗಿದ್ದಾರೆ. ಘಟನೆಯಲ್ಲಿ ಸಾಲಿಗ್ರಾಮದ ಕೋಟೆ ಬೀದಿ ನಿವಾಸಿಗಳಾದ ಅಯಾನ್ (16), ಆಜಾನ್(13) ಹಾಗೂ ಲುಖ್ಮಾನ್ (14) ಮೃತಪಟ್ಟಿದ್ದಾರೆ. ಮೂವರ ಸಾಲಿಗ್ರಾಮದ ಭಾಸ್ಕರ ದೇವಸ್ಥಾನದ ಬಳಿ ಘಟನೆ ನಡೆದಿದೆ. ಅಯಾನ್ ಹಾಗೂ ಆಜಾನ್ ಕೆ.ಆರ್.ಪೇಟೆಯ ನವೋದಯ ಶಾಲೆಯಲ್ಲಿ ಓದುತ್ತಿದ್ದು, ದೀಪಾವಳಿ ಹಬ್ಬದ ರಜೆ ಹಿನ್ನೆಲೆ ಗ್ರಾಮಕ್ಕೆ ಬಂದಿದ್ದರು. ಇಂದು (ಅ. 20) ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ಈ ಇಬ್ಬರು ಸಹೋದರರು ಸ್ನೇಹಿತ ಲುಕ್ಮಾನ್ ಜೊತೆ ಭಾಸ್ಕರ ದೇವಸ್ಥಾನದ ಬಳಿ ಇರುವ ಚಾಮರಾಜ ಎಡದಂಡೆ ಕಾಲುವೆಗೆ ಈಜಾಡಲು ತೆರಳಿದ್ದಾರೆ. ಈ ವೇಳೆ ನೀರಿನ ರಭಸಕ್ಕೆ ಮೂವರೂ ಕೊಚ್ಚಿ ಹೋಗಿದ್ದಾರೆ ಎನ್ನಲಾಗಿದೆ.



ಸಂಜೆಯಾದರೂ ಮಕ್ಕಳು ಮನೆಗೆ ಬಾರದಿದ್ದಾಗ ಪೋಷಕರು ಹುಡುಕಾಟ ನಡೆಸಿದಾಗ ಕಾಲುವೆ ಬಳಿ ಮಕ್ಕಳ ಬಟ್ಟೆ ಹಾಗೂ ಚಪ್ಪಲಿಗಳು ಪತ್ತೆಯಾಗಿವೆ. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದು, ಸಾಲಿಗ್ರಾಮ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಶೋಧ ಕಾರ್ಯ ನಡೆಸಿ, ಮೂವರ ದೇಹಗಳನ್ನೂ ನೀರಿನಿಂದ ಹೊರತೆಗೆದಿದ್ದಾರೆ. ಈ ಕುರಿತು ಅಯಾನ್ ಹಾಗೂ ಆಜಾನ್ ಸಹೋದರರ ತಂದೆ ಶಾಕೀಲ್ ಅಹಮದ್ ನೀಡಿದ ದೂರಿನ ಮೇರೆಗೆ ಸಾಲಿಗ್ರಾಮ ಠಾಣೆ ಪೊಲೀಸರು ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ದೀಪಾವಳಿಯ ಅವಘಡ ತಡೆಗೆ ಅಗ್ನಿಶಾಮಕ ದಳ ಸನ್ನದ್ಧ

ಮೈಸೂರು, ಅ.20(ಬಿಎಲ್‌ಯು)– ದೀಪಾವಳಿ ಹಬ್ಬದ ಅಗ್ನಿ ಅವಘಡಗಳೇನಾದರೂ ಸಂಭವಿಸಿದರೆ ಕ್ಷಿಪ್ರ ಕಾರ್ಯಾಚರಣೆ ಮೂಲಕ ಅವುಗಳ ತಡೆಗೆ ಅಗ್ನಿಶಾಮಕ ದಳ ಸನ್ನದ್ಧವಾಗಿದೆ. ಮೈಸೂರಿನ ಸರಸ್ವತಿಪುರಂನಲ್ಲಿ 3 ಅಗ್ನಿಶಾಮಕ ವಾಹನ, ಬನ್ನಿಮಂಟಪದಲ್ಲಿ 2, ಹೆಬ್ಬಾಳದಲ್ಲಿ 2 ಹಾಗೂ ಆರ್‌ಬಿಐನಲ್ಲಿ 2 ಅಗ್ನಿಶಾಮಕ ವಾಹನಗಳು ಸಜ್ಜಾಗಿವೆ.



ಇದಲ್ಲದೆ ಮೈಸೂರು ಜಿಲ್ಲೆಯ ನಂಜನಗೂಡು, ತಿ.ನರಸೀಪುರ, ಪಿರಿಯಾಪಟ್ಟಣ, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಹುಣಸೂರು ತಾಲೂಕು ಕೇಂದ್ರದಲ್ಲಿ ಕೂಡ ತಲಾ 2 ಅಗ್ನಿಶಾಮಕ ವಾಹನಗಳು ತಯಾರಾಗಿವೆ. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಯಾವುದೇ ಸಮಯದಲ್ಲಿ ಅಗ್ನಿ ಅನಾಹುತ ಸಂಭವಿಸಿದರೆ ಬೆಂಕಿ ನಂದಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಅಗ್ನಿಶಾಮಕ ದಳದ ಅಧಿಕಾರಿ ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ರಸ್ತೆ ಮೇಲೆ ಪ್ರಾರ್ಥನೆಗೂ ಅನುಮತಿ ಅಗತ್ಯ

ಬೆಂಗಳೂರು,ಅ.20–ರಸ್ತೆ ಮೇಲೆ ಪ್ರಾರ್ಥನೆ ಮಾಡಲು ಅರ್ಜಿ ಹಾಕಿ ಅನುಮತಿ ಪಡೆದುಕೊಳ್ಳಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಪ್ರಿಯಾಂಕ್ ಖರ್ಗೆ

ರಸ್ತೆ ಮೇಲೆ ಪೂರ್ವಾನುಮತಿ ಇಲ್ಲದೇ ನಮಾಜ್ ಮಾಡಲು ಮುಸ್ಲಿಮರಿಗೆ ಅವಕಾಶ ನೀಡಬಾರದು ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಪತ್ರ ಬರೆದಿದ್ದಾರಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ, ಪ್ರಿಯಾಂಕ್ ಹೀಗೆ ಪ್ರತಿಕ್ರಿಯಿಸಿದರು. ಈ ವಿಚಾರವಾಗಿ ಯತ್ನಾಳ್ ಅವರು ಇಂಗ್ಲಿಷ್‌ನಲ್ಲಿ ಪತ್ರ ಬರೆದಿರುವುದು ವಿಶೇಷ. ಯಾರಿಗೆ ಸಂದೇಶ ಕೊಡಲು ಇಂಗ್ಲಿಷ್‌ನಲ್ಲಿ ಪತ್ರ ಬರೆದಿದ್ದಾರೊ ಗೊತ್ತಿಲ್ಲ. ಮುಖ್ಯಮಂತ್ರಿಗೆ ಗೊತ್ತಾಗಲಿ ಎಂದೋ ಅಮಿತ್‌ಶಾಗೆ ಗೊತ್ತಾಗಲಿ ಎಂದೊ, ಅಥವಾ ಬೇರೆ ಯಾರಿಗೆ ಗೊತ್ತಾಗಲಿ ಎಂದು ಬರೆದಿದ್ದಾರೊ ಗೊತ್ತಿಲ್ಲ ಎಂದು ಹೇಳಿದರು.

ನಮ್ಮದು ಒಕ್ಕೂಟ ವ್ಯವಸ್ಥೆ. ಕೇಂದ್ರ ಸರ್ಕಾರದ ಎಲ್ಲ ನಿಯಮಗಳನ್ನು ನಾವು ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಎಂದು ಕಾನೂನು ತಿದ್ದುಪಡಿ ತಂದಿದೆ. ಆದರೆ, ರಾಜ್ಯ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಕಾರ್ಯಕ್ರಮ, ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಇಲ್ಲ ಎಂದರು. ▶ 6ನೇ ಪುಟಕ್ಕೆ

ರಾಜ್ಯ ಸರ್ಕಾರಕ್ಕೆ ಸೆಡ್ಡು ಹೊಡೆದು ಆರ್‌ಎಸ್‌ಎಸ್ ಪಥಸಂಚಲನದಲ್ಲಿ

ಸರ್ಕಾರಿ ವೈದ್ಯ, ಕಾಂಗ್ರೆಸ್ ಕಾರ್ಯಕರ್ತರು ಭಾಗಿ

ಕಲಬುರಗಿ,ಅ.20–ಸರ್ಕಾರಿ ಅಧಿಕಾರಿ ಹಾಗೂ ನೌಕರರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅಂತಹವರನ್ನು ಸರ್ಕಾರ ಕೆಲಸದಿಂದ ಅಮಾನತು ಮಾಡುತ್ತಿದೆ.



ಹೀಗಿದ್ದರೂ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಸರ್ಕಾರಿ ವೈದ್ಯಾಧಿಕಾರಿ ಮತ್ತು ಹಲವು ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದಾರೆ.

ಸೇಡಂ ತಾಲೂಕಿನ ಆಡಳಿತ ವೈದ್ಯಾಧಿಕಾರಿ ನಾಗರಾಜ್, ಹಲವು ಕಾಂಗ್ರೆಸ್ ಕಾರ್ಯಕರ್ತರು ಆರ್‌ಎಸ್‌ಎಸ್ ಗಣವೇಷ ಧರಿಸಿ, ಈ ಪಥಸಂಚಲನದಲ್ಲಿ ಪಾಲ್ಗೊಂಡಿದ್ದಾರೆ. ಆರ್‌ಎಸ್‌ಎಸ್ ಸ್ಥಾಪನೆಯಾಗಿ ನೂರು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಈ ಪಥಸಂಚಲನ ಆಯೋಜಿಸಲಾಗಿತ್ತು.

ಮೈಸೂರಿನ ಕಡಕೊಳ ಸಮೀಪದ ಕೋಚನಹಳ್ಳಿಯ 404 ಎಕರೆಯಲ್ಲಿ ಕೈಗಾರಿಕಾ ಬಡಾವಣೆ

ಸರ್ಕಾರ ಎಕರೆಗೆ 1.25 ಕೋಟಿ ಆಫರ್; ರೈತರು 4 ಕೋಟಿಗೆ ಡಿಮ್ಯಾಂಡ್

■ಭೂಮಿ ಬೆಲೆ ನಿಗದಿ ಸಂಬಂಧ ಸರ್ಕಾರ ಹಾಗೂ ರೈತರ ನಡುವೆ ಹಗ್ಗ ಜಗ್ಗಾಟ ■ಎಂಎಲ್‌ಸಿ ಯತೀಂದ್ರ, ಡಿಸಿ ಲಕ್ಷ್ಮಿಕಾಂತ ರೆಡ್ಡಿ ಕರೆದ ಸಂಧಾನ ಸಭೆ ವಿಫಲ ■ಸಿದ್ದರಾಮಯ್ಯ ಪ್ರತಿನಿಧಿಸುತ್ತಿರುವ ಕ್ಷೇತ್ರ ವ್ಯಾಪ್ತಿ ಗ್ರಾಮ ■ನಿಮ್ಮ ಹಣವೂ ಬೇಡ, ನಾವು ಭೂಮಿ ಕೊಡುವುದೂ ಬೇಡ

ಮೈಸೂರು, ಅ.20 (ಬಿಎಲ್‌ಯು)– ಮೈಸೂರು ತಾಲೂಕಿನ ಕೋಚನಹಳ್ಳಿಯ 404 ಎಕರೆಯಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಸರ್ಕಾರ ನಿರ್ಧರಿಸಿದೆ.

ಈ ಸಂಬಂಧ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿದೆ. ಆದರೆ ಭೂಮಿ ಖರೀದಿಸಲು ಸರ್ಕಾರ ನಿಗದಿ ಮಾಡಿರುವ ಬೆಲೆ ರೈತರಿಗೆ ಸಮ್ಮತವಾಗಿಲ್ಲ. ಈ ಹಿನ್ನಲೆಯಲ್ಲಿ ರೈತರು ಮತ್ತು ಸರ್ಕಾರದ ನಡುವೆ ಹಗ್ಗಜಗ್ಗಾಟ ನಡೆಯುತ್ತಿದೆ. ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ನಡೆಸಿದ ಸಂಧಾನಸಭೆ ಕೂಡ ವಿಫಲವಾಗಿದೆ.

ಕಡಕೊಳ ಬಳಿಯ ಕೋಚನಹಳ್ಳಿ ಮೈಸೂರಿನ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿ ನಿಧಿಸುತ್ತಿದ್ದಾರೆ. ಭೂ ಸ್ವಾಧೀನ ಪ್ರಕ್ರಿಯೆ ಆರಂಭಿಸಿದ ನಂತರ ಎಕರೆಗೆ 1.15 ಕೋಟಿ ರೂಪಾಯಿ ನೀಡುವುದಾಗಿ ಕೆಐಎಡಿಬಿ ತಿಳಿಸಿದೆ.

ಆದರೆ ಇದಕ್ಕೆ ಒಪ್ಪದ ಕೋಚನಹಳ್ಳಿ ರೈತರು ಈಗಾಗಲೇ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಕೆಐಎಡಿಬಿ ನಿಗದಿ ಮಾಡಿರುವ ಹಣ ನಮಗೆ ಸರ್ವ ಸಮ್ಮತವಲ್ಲ ಎಂದು ತಿಳಿಸಿದ್ದಾರೆ. ಈ ಸಂಬಂಧ ಕೆಐಎಡಿಬಿ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅವರಿಗೆ ರೈತರೆದುರೇ ದೂರವಾಣಿ ಕರೆ ಮಾಡಿದ ಸಿದ್ದರಾಮಯ್ಯ ಅವರು ನಾನು ಬೆಲೆ ನಿಗದಿ ಮಾಡುವ ತನಕ ಭೂ ಸ್ವಾಧೀನ ಪ್ರಕ್ರಿಯೆ ಆರಂಭಿಸಬಾರದು ಎಂದು ತಾಕೀತು ಮಾಡಿದ್ದರು.

ಈ ಮಧ್ಯೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಭೆ ನಡೆಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ಕೆಐಎಡಿಬಿ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಎಕರೆಯೊಂದಕ್ಕೆ 1.15 ಕೋಟಿ ನೀಡುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಇದು ನಮ್ಮ ಸಮ್ಮತಿ ಇಲ್ಲ. ನಮ್ಮ ಗ್ರಾಮ ಮೈಸೂರು ನಗರಕ್ಕೆ ಸಮೀಪವಿದ್ದು, ಭೂಮಿಗೆ ಚಿನ್ನದ ಬೆಲೆ ಇದೆ. ಈ ಹಿನ್ನೆಲೆಯಲ್ಲಿ ಎಕರೆಗೆ 4 ಕೋಟಿ ಕೊಡಿಸಬೇಕು ಎಂದು ರೈತರು ಇದೇ ವೇಳೆ ಆಗ್ರಹಿಸಿದರು. ನೀವು ಕೇಳುವ ಬೆಲೆ ಕೊಡಿಸಲು ಸಾಧ್ಯವಿಲ್ಲ. ಈ ಸಂಬಂಧ ನಮ್ಮ ತಂದೆಯವರೊಡನೆ ಮಾತನಾಡಿ 1.25 ಲಕ್ಷ ಕೊಡಿಸಲು ಪ್ರಯತ್ನಿಸುತ್ತೇನೆ ಎಂಬ ಭರವಸೆ ನೀಡಿದರು ಎಂದು ▶ 6ನೇ ಪುಟಕ್ಕೆ



ವಿಧಾನಪರಿಷತ್ ಸದಸ್ಯ ಯತೀಂದ್ರ ಅವರು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಕೋಚನಹಳ್ಳಿ ಗ್ರಾಮಸ್ಥರ ಜೊತೆ ಸಭೆ ನಡೆಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ದುಬಾರಿ ಬೆಲೆ ಕೊಟ್ಟು ಖರೀದಿ ಅಸಾಧ್ಯ

“ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ನೀಡುವಂತೆ 2013ರಲ್ಲೇ ಸುಮಾರು 400 ಕೈಗಾರಿಕೋದ್ಯಮಿಗಳು ಕೆಐಎಡಿಬಿಗೆ ಅರ್ಜಿ ಸಲ್ಲಿಸಿದ್ದಾರೆ. ಈ ಸಂಬಂಧ ಕೈಗಾರಿಕೋದ್ಯಮಿಗಳಿಗೆ ಭೂಮಿ ಮಂಜೂರು ಮಾಡಿರುವ ಕೆಐಎಡಿಬಿ ಹಣ ಕೂಡ ಕಟ್ಟಿಸಿಕೊಂಡಿದೆ. ಆದರೆ ಭೂಮಿ ಸ್ವಾಧೀನವಾಗಿಲ್ಲ.

ಕೈಗಾರಿಕಾ ಬಡಾವಣೆ ಸ್ಥಾಪನೆಗೆ ಭೂಮಿ ಸ್ವಾಧೀನ ಮಾಡಿಕೊಳ್ಳುತ್ತಿರುವ ಕೆಐಎಡಿಬಿ ಎಕರೆಗೆ 1 ಕೋಟಿ ರೂ. ನೀಡುವುದಾಗಿ ಹೇಳುತ್ತಿದೆ. ಹಾಗಾದರೆ ರೈತರಿಗೆ 1 ಕೋಟಿ ಕೊಟ್ಟರೆ ಕೈಗಾರಿಕೋದ್ಯಮಿಗಳಿಗೆ ಕನಿಷ್ಟ 2 ಕೋಟಿ ನಿಗದಿ ಮಾಡಲಿದೆ. ಇಷ್ಟು ಹಣ ಕೊಟ್ಟು ಭೂಮಿ ಖರೀದಿಸಲು ಸಾಧ್ಯವೇ ಎಂಬ ಪ್ರಶ್ನೆ ಎದುರಾಗಿದೆ.

–ಸುರೇಶ್‌ಕುಮಾರ್ ಜೈನ್, ಪ್ರಧಾನ ಕಾರ್ಯದರ್ಶಿ, ಮೈಸೂರು ಕೈಗಾರಿಕೋದ್ಯಮಿಗಳ ಸಂಘ

ಭೂಮಿಗೆ ಬೆಲೆ ನಿಗದಿ, ಸ್ವಾಧೀನ ಪ್ರಕ್ರಿಯೆ ಮಾತ್ರ ಬಾಕಿ ಇದೆ

“**ಕೋಚನಹಳ್ಳಿಯ 404.10 ಎಕರೆ ಭೂಸ್ವಾಧೀನ ಪ್ರಕ್ರಿಯೆ ಬಹುತೇಕ ಪೂರ್ಣಗೊಳಿಸಿದ್ದೇವೆ. ಸರ್ಕಾರ ಎಕರೆಯೊಂದಕ್ಕೆ ಇಂತಿಷ್ಟೆಂದು ಬೆಲೆ ನಿಗದಿ ಮಾಡಿ ಕೆಐಎಡಿಬಿಗೆ ಹಣ ನೀಡಿದರೆ, ಅದನ್ನು ರೈತರಿಗೆ ನೀಡಿ ಭೂಮಿ ಸ್ವಾಧೀನ ಮಾಡಿಕೊಳ್ಳುತ್ತೇವೆ. ಈಗಾಗಲೇ 404.10 ಎಕರೆಗೆ ಕೆಐಎಡಿಬಿಯಿಂದ ಸೆಕ್ಷನ್ 28/1ರ ಪ್ರಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದೇವೆ, ಸೆಕ್ಷನ್ 28/2ರ ಪ್ರಕಾರ ಭೂ ಸ್ವಾಧೀನಕ್ಕೆ ಎಲ್ಲಾ ರೈತರಿಗೆ ನೋಟಿಸ್ ಜಾರಿ ಮಾಡಿದ್ದೇವೆ, ಸೆಕ್ಷನ್ 28/3ರ ಪ್ರಕಾರ ಭೂ ಸ್ವಾಧೀನಪಡಿಸಿಕೊಳ್ಳುತ್ತೇವೆ ಎಂದು ಆದೇಶ ಮಾಡಿದ್ದೇವೆ, ಸೆಕ್ಷನ್ 28/4ರ ಪ್ರಕಾರ ಅಂತಿಮ ಅಧಿಸೂಚನೆ ಹೊರಡಿಸಿದ್ದೇವೆ. ಈ ಕುರಿತಂತೆ ಸಮಗ್ರ ವಿವರವನ್ನು ನಾವು ಕೆಐಎಡಿಬಿ ಪ್ರಧಾನ ಕಚೇರಿಗೆ ಸಲ್ಲಿಸಿದ್ದೇವೆ. ಸರ್ಕಾರ ಈ ಸಂಬಂಧ ಯಾವ ತೀರ್ಮಾನ ಕೈಗೊಳ್ಳುತ್ತದೆ ಎಂದ ಕಾದು ನೋಡಬೇಕು.**

–ಎನ್.ಸಿ.ವೆಂಕಟರಾಜು, ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ಮೈಸೂರು ವಲಯ

ರಿಯಲ್ ಎಸ್ಟೇಟ್ ವ್ಯವಹಾರದಿಂದ ಭಾರೀ ಲಾಭಕ್ಕೆ ಪ್ಲಾನ್

ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಯಿಂದ ರಿಯಾಯಿತಿ ದರದಲ್ಲಿ ಭೂಮಿ ಖರೀದಿ ಮಾಡಿರುವ ಕೈಗಾರಿಕೋದ್ಯಮಿಗಳು ಅಲ್ಲಿ ಕೈಗಾರಿಕೆ ಸ್ಥಾಪನೆ ಮಾಡದೆ ರಿಯಲ್ ಎಸ್ಟೇಟ್ ವ್ಯವಹಾರದ ಮೂಲಕ ಭಾರೀ ಲಾಭಗಳಿಸುವ ಪ್ಲಾನ್ ಮಾಡಿದ್ದಾರೆ.

ಮೈಸೂರಿನ ಕಡಕೊಳದಲ್ಲಿ ಈಗಾಗಲೇ ಹಲವು ಕೈಗಾರಿಕೆಗಳು ಸ್ಥಾಪನೆಯಾಗಿವೆ. ಆದರೆ ಬಹಳಷ್ಟು ಕಡೆ ಭೂಮಿ ಖಾಲಿ ಇದ್ದು, ▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಬಾಸ್ : ಎಲ್ರೂ ಆಫೀಸ್‌ಗೆ ಸರಿಯಾದ ಸಮಯಕ್ಕೆ ಒಟ್ಟಿಗೆ ಬರುತ್ತಾರೆ. ನೀನೊಬ್ಬ ಯಾಕೆ ಲೇಟ್?

ಗುಂಡ : ಗುಂಪಾಗಿ ಬರೋದು ಕುರಿಗಳು ಸಾರ್. ಸಿಂಹ ಯಾವಾಗ್ಲೂ ಸಿಂಗಲ್ಲಾಗೇ ಬರೋದು.

ಮೈಸೂರು ಮಿತ್ರ

ಮಂಗಳವಾರ, 21 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಬೌದ್ಧಿಕವಾಗಿ ನೀವು ಶಕ್ತಿಶಾಲಿಯಾಗುತ್ತ ಹೋದಂತೆಲ್ಲ, ಕಡಿಮೆ ಮಾತನಾಡಲು ಪ್ರಯತ್ನಿಸುತ್ತೀರಿ. –ಅನಾಮಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಯತ್ನಕ್ಕೆ ಪರಮೇಶ್ವರನೂ ಸಹಾಯ ಮಾಡುವನು.

ನಿಮ್ಮ ಪತ್ರಗಳು

ವಿವಾದಗಳ ಸುಳಿಗೆ ಸಿಲುಕುತ್ತಿರುವ ಕಾಂಗ್ರೆಸ್

ಮಾನ್ಯರೆ,

ಅಭಿವೃದ್ಧಿ ಕಾರ್ಯಗಳತ್ತ ಗಮನ ಹರಿಸಬೇಕಾದ ರಾಜ್ಯದ ಕಾಂಗ್ರೆಸ್ ಸರ್ಕಾರ ದಿನನಿತ್ಯ ಒಂದಿಲ್ಲೊಂದು ವಿವಾದಗಳ ಸುಳಿಗೆ ಸಿಲುಕುತ್ತಿದ್ದು, ರಾಜಕೀಯ ಕೆಸರೆರಚಾಟದಲ್ಲಿ ಮಗ್ನವಾಗಿದೆ. ಇತ್ತೀಚೆಗಂತೂ ಮಂತ್ರಿ ಮಂಡಲ ಪುನರ್ರಚನೆ ವಿಷಯವೇ ಜೋರು ಸದ್ದು ಮಾಡುತ್ತಿದೆ. ಎರಡೂವರೆ ವರ್ಷದ ನಂತರ ಅಧಿಕಾರ ಹಸ್ತಾಂತರ ಎಂಬ ಅಲಿಖಿತ ನಿಯಮಕ್ಕೆ ಕ್ಷಣಗಣನೆ ಆರಂಭವಾಗಿದೆ. ಈ ಬಗ್ಗೆ ಪುಂಕಾನುಪುಂಕದ ವರದಿಗಳು ಸದ್ದು ಮಾಡುತ್ತಿವೆ.

ತಮ್ಮ ಸ್ಥಾನ ಉಳಿಸಿಕೊಳ್ಳಲು ಸಚಿವರು ಹರ ಸಾಹಸ ಪಡುತ್ತಿದ್ದರೆ, ಹೊಸದಾಗಿ ಸಚಿವರಾಗಲು ಹಲವು ಶಾಸಕರು ಭಾರೀ ಲಾಬಿ ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಇದಲ್ಲದೇ ನವೆಂಬರ್ ಕ್ರಾಂತಿ ಎಂಬ ಪೆಡಂಭೂತದಲ್ಲಿ ಇಡೀ ಸರ್ಕಾರ ಗಿರಕಿ ಹೊಡೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಸಚಿವ–ಶಾಸಕರು ಬರೀ ರಾಜಕೀಯ ಲೆಕ್ಕಚಾರದಲ್ಲೇ ತಲ್ಲೀನರಾಗಿರುವುದು ನಿಜಕ್ಕೂ ಖೇದಕರ.

ಅತ್ತ ಬೆಂಗಳೂರಿನ ರಸ್ತೆ ಗುಂಡಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಿವೆ. ಇದರಿಂದ ಬೇಸತ್ತ ಬೆಂಗಳೂರಿನ ದೊಡ್ಡ ಉದ್ಯಮಿಗಳು ಸರ್ಕಾರದ ವಿರುದ್ಧ ತಮ್ಮ ಅಸಮಾಧಾನ ಹೊರಹಾಕುತ್ತಿದ್ದಾರೆ. ರಾಜ್ಯಕ್ಕೆ ಬರಬೇಕಾದ ಗೂಗಲ್ ಹಬ್ ನೆರೆಯ ಆಂಧ್ರದ ಪಾಲಾಗಿದೆ. ಆದರೆ ನಮ್ಮ ಐ.ಟಿ. ಬಿ.ಟಿ. ಸಚಿವರು ಮಾತ್ರ ಆರೆಸ್ಸೆಸ್ ನಿಷೇಧದ ಬಗ್ಗೆಯೇ ಹೆಚ್ಚು ತಲೆ ಕೆಡಿಸಿಕೊಂಡಿದ್ದಾರೆ. ಕಾರ್ಮಿಕ ಸಚಿವರು ಅಂತರಾಷ್ಟ್ರೀಯ ಆರ್ಥಿಕ ತಜ್ಞರಂತೆ ಮಾತನಾಡುತ್ತಾರೆ. ಲೋಕೋಪಯೋಗಿ ಸಚಿವರು ತಮ್ಮ ಕ್ಷೇತ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿ ಬ್ಯುಸಿಯಾಗಿದ್ದಾರೆ.

ಮುಖ್ಯಮಂತ್ರಿಗಳು ಭೋಜನಕೂಟದ ನೆಪದಲ್ಲಿ ತಮ್ಮ ಪದವಿಗೆ ಸಂಚಕಾರ ಬರದಂತೆ ದಾಳ ಉದುರಿಸುತ್ತಿದ್ದಾರೆ. ಉಪಮುಖ್ಯಮಂತ್ರಿಗಳು ತೆರೆ ಮರೆಯ ಕಸರತ್ತುಗಳಲ್ಲೇ ತಲ್ಲೀನರಾಗಿದ್ದಾರೆ. ಒಟ್ಟಾರೆ ರಾಜ್ಯ ರಾಜಕಾರಣ ಡೋಲಾಯಮಾನವಾಗಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಗ್ರಹಣ ಬಡಿದಂತಾಗಿದೆ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ಪಿಂಚಣಿದಾರರೇ ಎಚ್ಚರ

ಮಾನ್ಯರೆ,

ನವೆಂಬರ್ ತಿಂಗಳಿನಲ್ಲಿ ಪಿಂಚಣಿದಾರರು ತಮ್ಮ ಜೀವಿತ ಪ್ರಮಾಣವನ್ನು ದೃಢೀಕರಿಸುವ ಪ್ರಕ್ರಿಯೆ ಪ್ರಾರಂಭ ಆಗುತ್ತದೆ. (Life Certificate). ಈ ಸಂದರ್ಭವನ್ನು ಬಳಸಿಕೊಂಡು ಧೂರ್ತರು ಪಿಂಚಣಿದಾರರಿಗೆ ಕರೆ ಮಾಡಿ ಅಥವಾ ಅನಧಿಕೃತ ವಾಟ್ಸಾಪ್ ಮತ್ತು ಇತರೆ ಸಾಮಾಜಿಕ ಜಾಲತಾಣದಲ್ಲಿ ಲಿಂಕ್ ಕಳುಹಿಸುತ್ತಿರುವುದು ಕಂಡುಬಂದಿದೆ. ಒಬ್ಬ ನಿವೃತ್ತ ಬ್ಯಾಂಕ್ ಅಧಿಕಾರಿಯೊಬ್ಬರು ನಿನ್ನೆಯಷ್ಟೇ ಒಂದು ಅನಧಿಕೃತ ಲಿಂಕ್‌ಗೆ ಉತ್ತರಿಸಿ 5 ಲಕ್ಷ ರೂಪಾಯಿ ವಂಚನೆಗೆ ಒಳಗಾಗಿದ್ದಾರೆ.

ಜೀವಿತ ಪ್ರಮಾಣಪತ್ರ ಒದಗಿಸಲು ನವೆಂಬರ್ ತಿಂಗಳು ಪೂರ್ತಿ ಅವಕಾಶವಿದೆ. ಅದಕ್ಕಾಗಿ ಅಧಿಕೃತ https://jeevanpraman.gov.in ವೆಬ್‌ಸೈಟ್ ಉಪಯೋಗಿಸಿ. ಇಲ್ಲವೇ ತಮ್ಮ ಮಾತೃ ಇಲಾಖೆಯ ಸಹಾಯ ಪಡೆಯಿರಿ. ಒಂದು ವೇಳೆ ಪ್ರಮಾಣ ಪತ್ರ ಸಲ್ಲಿಸಲು ವಿಳಂಬವಾದರೆ ಪಿಂಚಣಿ ಹಣ ತಾತ್ಕಾಲಿಕವಾಗಿ ತಡೆ ತಡೆಹಿಡಿಯುತ್ತಾರೆ. ನವೆಂಬರ್ ತಿಂಗಳ ನಂತರವೂ ಜೀವಿತ ಪ್ರಮಾಣ ಪತ್ರ ಸಲ್ಲಿಸಬಹುದು. ಸಲ್ಲಿಸಿದ ಮೇಲೆ ತಡೆಹಿಡಿದ ಪಿಂಚಣಿ ಜಮೆ ಆಗುತ್ತದೆ.

–ಲಕ್ಷ್ಮಣ್ ಗೋರ್ಲಕಟ್ಟೆ, SBM ಬಡಾವಣೆ ಗದ್ದಿಗೆ ರಸ್ತೆ ಬೋಗಾದಿ ಮೈಸೂರು

ಅಲ್ಯೂಮಿನಿಯಂ ನಿಷೇಧ ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಸರ್ಕಾರವು ಇತ್ತೀಚೆಗೆ ಶಾಲೆಗಳಲ್ಲಿ ಅಡುಗೆ ಅಲ್ಯೂಮಿನಿಯಂ ಪಾತ್ರೆಗಳನ್ನು ಬಳಸದಂತೆ ಆದೇಶ ಹೊರಡಿಸಿರುವುದು ಅತ್ಯಂತ ಶ್ಲಾಘನೀಯ. ಅಲ್ಯೂಮಿನಿಯಂ ಪಾತ್ರೆಗಳಲ್ಲಿ ದೀರ್ಘಾವಧಿ ಅಡುಗೆ ಮಾಡುವುದರಿಂದ ಆಹಾರದಲ್ಲಿ ಹಾನಿಕರ ರಾಸಾಯನಿಕ ಅಂಶಗಳು ಸೇರ್ಪಡೆಗೊಂಡು, ಮೆದುಳಿನ ಬೆಳವಣಿಗೆ, ನರಮಂಡಲದ ಕಾರ್ಯಪದ್ಧತಿ ಹಾಗೂ ದೇಹದ ಪ್ರತಿರೋಧಶಕ್ತಿಯ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಇಂತಹ ಹಾನಿಕರ ಪರಿಣಾಮಗಳಿಂದ ನಮ್ಮ ಶಾಲಾ ಮಕ್ಕಳನ್ನು ರಕ್ಷಿಸುವ ಉದ್ದೇಶದಿಂದ ಸರ್ಕಾರ ಕೈಗೊಂಡಿರುವ ಈ ಕ್ರಮ ಸ್ವಾಗತಾರ್ಹ. ಮಧ್ಯಾಹ್ನದ ಬಿಸಿಯೂಟ ಮತ್ತು ಕ್ಷೀರಭಾಗ್ಯ ಯೋಜನೆಗಳು ಮಕ್ಕಳ ಪೌಷ್ಠಿಕತೆಯ ಬೆಳವಣಿಗೆಗೆ ಮೂಲವಾದವು. ಹೀಗಾಗಿ, ಅಡುಗೆಗೆ ಸುರಕ್ಷಿತವಾದ ಸ್ಟೇನ್‌ಲೆಸ್ ಸ್ಟೀಲ್ ಅಥವಾ ತಾಮ್ರದ ಪಾತ್ರೆಗಳನ್ನು ಬಳಸುವುದು ಆರೋಗ್ಯಕರ ಮತ್ತು ದೀರ್ಘಾವಧಿಯ ಪ್ರಯೋಜನಕಾರಿಯಾಗಿದೆ. ಸರ್ಕಾರ ಈ ಬದಲಾವಣೆಗೆ 22 ಕೋಟಿ ರೂ.ಗಳ ಅನುದಾನ ನೀಡಿರುವುದೂ ಪ್ರೋತ್ಸಾಹದಾಯಕ ವಿಚಾರ. ಆದರೆ ಇದರ ಪರಿಣಾಮಕಾರಿತ್ವ ಸ್ಥಳೀಯ ಮಟ್ಟದಲ್ಲಿ ಸರಿಯಾದ ಅನುಷ್ಠಾನದಿಂದಲೇ ಸಾಧ್ಯವಾಗುತ್ತದೆ. ಆದ್ದರಿಂದ ಅಧಿಕಾರಿಗಳು, ಶಾಲಾ ಅಭಿವೃದ್ಧಿ ಸಮಿತಿಗಳು ಹಾಗೂ ಪೋಷಕರು ಇದರ ಮೇಲ್ವಿಚಾರಣೆಯಲ್ಲಿ ಸಕ್ರಿಯ ಪಾತ್ರವಹಿಸುವುದು ಅತ್ಯಾವಶ್ಯಕ. –ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಉಗನಿ ಗ್ರಾಮದ ಗೋಳು ಕೇಳುವವರ್ಯಾರು

ಮಾನ್ಯರೆ,

ಧನಗೆರೆ ಪಂಚಾಯಿತಿಯ ಉಗನಿ ಗ್ರಾಮವು ತೀರಾ ಅವ್ಯವಸ್ಥೆಯಿಂದ ಕೂಡಿದ್ದು ಅಶುಚಿತ್ವ ಎದ್ದು ಕಾಣುತ್ತಿದೆ. ಮಳೆ ಬಂದರಂತೂ ಬದುಕು ದುಸ್ತರ ವಾಗುತ್ತಿದೆ. ಸರಾಗವಾಗಿ ನೀರು ಹರಿದು ಹೋಗಲು ಯಾವುದೇ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಮನೆಗಳ ಮುಂದೆ ಇಡೀ ಗ್ರಾಮದ ಕೊಳಕು ನೀರು ಕೆರೆಯಂತೆ ಶೇಖರಣೆಯಾಗಿ ಪಾಚಿ ಬೆಳೆದು ಹುಳು, ಹುಪ್ಪಟ, ಸೊಳ್ಳೆ, ಹಾವುಗಳು ಕಾಣಿಸಿಕೊಳ್ಳುತ್ತಿದೆ. ಹಾಗೇ ರೋಗ ರುಜಿನಗಳಿಗೆ ಎಡೆ ಮಾಡಿಕೊಡುತ್ತಿದೆ. ಮನೆಯಲ್ಲಿ ವಯಸ್ಸಾದ ಹಾಗೂ ಅನಾರೋಗ್ಯಕ್ಕೆ ತುತ್ತಾದ ಜೀವಗಳು ವಾಸಮಾಡಲು ಹೆಣಗಾಡುತ್ತಿದ್ದಾರೆ. ಈ ಸಂಬಂಧ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿಗೆ ಎಷ್ಟೇ ಮನವಿ ಮಾಡಿದರೂ ಅವರ ಬೇಜವಾಬ್ದಾರಿತನದಿಂದ ಯಾವುದೇ ಪ್ರಯೋಜನ ಆಗುತ್ತಿಲ್ಲ. ಆದಾಗ್ಯೂ ಅಧ್ಯಕ್ಷರು ಮತ್ತು ಸದಸ್ಯರ ಅವಧಿಯು ಮುಗಿದಿರುವುದರಿಂದ ಅವರು ಕೂಡ ಈ ಕಡೆ ಗಮನಹರಿಸುತ್ತಿಲ್ಲ. ದಯಮಾಡಿ ಇನ್ನಾದರೂ ಎಚ್ಚೆತ್ತುಕೊಂಡು ಆದಷ್ಟು ಬೇಗ ಸಮಸ್ಯೆ ಬಗೆಹರಿಸಿ ಮುಂದೆ ಆಗಬಹುದಾದ ಸಮಸ್ಯೆಗಳ ತಪ್ಪಿಸಬೇಕೆಂದು ಮನವಿ. –ಮಾದೇಶ್ ಎಂ, ಉಗನಿಯ, ಕೊಳ್ಳೇಗಾಲ ತಾ.



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಎಲ್ಲರ ಸಂಭ್ರಮದ ಬೆಳಕಿನ ಹಬ್ಬ ದೀಪಾವಳಿ



> ದೀಪಾವಳಿ ಹಬ್ಬವನ್ನು ದಕ್ಷಿಣ ಭಾರತದಲ್ಲಿ ಮೂರು ದಿನಗಳ ಕಾಲ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಪಟಾಕಿಗಳನ್ನು ಸಿಡಿಸಲಾಗುತ್ತದೆ. ಆ ಮೂಲಕ ಕೆಡಕುಗಳನ್ನು ನಾಶಪಡಿಸುವ ಸಂದೇಶವನ್ನು ಸಾರುತ್ತಾರೆ. ಸಿಹಿ ತಿನಿಸುಗಳನ್ನು ಮಾಡಿ ಮನೆಯವರೆಲ್ಲ ಒಟ್ಟಾಗಿ ಸೇರಿ ಬೆಳಕಿನ ಹಬ್ಬವನ್ನು ಆಚರಿಸಲಾಗುತ್ತದೆ. ಮನೆಗಳಲ್ಲಿ ದೇವಸ್ಥಾನಗಳಲ್ಲಿ ಸಾಲಾಗಿ ದೀಪಗಳನ್ನು ಹಚ್ಚಿಡುವ ಮೂಲಕ ಬೆಳಕಿನ ಕಾಂತಿಯನ್ನು ಎಲ್ಲೆಡೆ ಪಸರಿಸಲಾಗುತ್ತದೆ.

ಹಬ್ಬಗಳು ಸಾಂಸ್ಕೃತಿಕವಾದ ಪರಂಪರೆಯ ಪುಟಗಳನ್ನು ತೆರೆದಿಡುವುದರೊಂದಿಗೆ ಪ್ರತಿಯೊಬ್ಬರ ಮುಖದಲ್ಲಿ ನಗುವನ್ನು, ಸಂಭ್ರಮದ ಎಳೆಯನ್ನು, ಹಿಗ್ಗಿನ ಸವಿಯನ್ನು, ಜೇಬಿಗೊಂದಿಷ್ಟು ಖರ್ಚಿನ ಬಾಬ್ತನ್ನು ಬಯಸುವ ಅಂಶಗಳು. ಚಿಣ್ಣರ ಚಿಲಿಪಿಲಿ, ಜಾನುವಾರಗಳು ಶುಚಿತ್ವದಿ ಹೊಂದುವ ಜಾಲಿ ಮೂಡು, ಮನೆಗಳಿಗೆ ತೋರಣ, ಒಬ್ಬಟ್ಟಿನ ಹೂರಣ, ಬಂಧುಬಳಗ, ಸಂಬಂಧಗಳ ಅನುಬಂಧ ಸೇತುವೇ, ಹಬ್ಬ ಹರಿದಿನಗಳ ಆಚರಣೆಯು ಕಾರಣ. ಹೀಗಾಗಿ ಹಬ್ಬಗಳು ಎಂದರೆ ಎಲ್ಲಿಲ್ಲದ ಆನಂದ ಅದೇನೋ ಸಡಗರ, ಸಂಭ್ರಮ. ವರ್ಷಪೂರ್ತಿ ಹಬ್ಬಗಳನ್ನು ಆಚರಿಸಿದರೂ ಕೂಡ ಪ್ರತಿಯೊಂದು ಹಬ್ಬವನ್ನು ವಿಭಿನ್ನವಾಗಿ ಆಚರಿಸಲಾಗುತ್ತದೆ. ಭಾರತೀಯರಲ್ಲಿ ಅದರಲ್ಲೂ ಮುಖ್ಯವಾಗಿ ಹಿಂದೂ ಪರಂಪರೆಯಲ್ಲಿ ಹಬ್ಬಗಳಿಗೆ ವಿಶೇಷವಾದ ಮಹತ್ವವಿದೆ. ಪ್ರತಿಯೊಂದು ಹಬ್ಬಕ್ಕೂ ಪೌರಾಣಿಕ ಹಿನ್ನಲೆಯ ಕಥೆಗಳಿರುವುದು ಸಾಮಾನ್ಯವಾಗಿದೆ. ದೀಪಾವಳಿ ಹಬ್ಬದ ಹಿನ್ನಲೆಗೂ ಪೌರಾಣಿಕ ಕಥೆಗಳಿವೆ. ಕಾರ್ತಿಕ ಮಾಸದಲ್ಲಿ ದೀಪಾವಳಿ ಹಬ್ಬವನ್ನು ಆಚರಿಸಲಾಗುತ್ತದೆ. ಮುಖ್ಯವಾಗಿ ಮೂರು ದಿನಗಳ ಮಟ್ಟಿಗೆ ಹಬ್ಬವನ್ನು ಆಚರಿಸಲಾಗುತ್ತದೆ. ಮೊದಲ ದಿನ ನರಕ ಚತುರ್ದಶಿ, ಎರಡನೇ ದಿನ ಅಮವಾಸ್ಯೆ ಮೂರನೇ ದಿನ ಬಲಿಪಾಡ್ಯಮಿ ಹಬ್ಬವನ್ನು ಆಚರಿಸಲಾಗುವುದು.

ವಿಶೇಷವಾಗಿ ಬೆಳಕಿನ ಹಬ್ಬ ದೀಪವಾಳಿ ಎಂಬುದು ಜ್ಞಾನವನ್ನು ಹೃದಯದಲ್ಲಿ ಸಂಗ್ರಹಿಸಿಕೊಳ್ಳುವ ಬಗೆಯು ಅನುಪಮವಾದುದು. ದೀಪಗಳ + ಆವಳಿ ಅಂದರೆ ದೀಪಗಳ ಸಾಲು ಎಂದರ್ಥ. ಬೆಳಕಿನ ಹಬ್ಬವೆಂದು ಕೂಡ ಕರೆಯಲಾಗುತ್ತದೆ.

ದೀಪಾವಳಿ ಹಬ್ಬಕ್ಕಿರುವ ಪೌರಾಣಿಕ ಹಿನ್ನೆಲೆ

ನರಕ ಚತುರ್ದಶಿ: ನರಕಾಸುರ ಎಂಬ ರಾಕ್ಷಸನನ್ನು ಶ್ರೀಕೃಷ್ಣ ಪರಮಾತ್ಮ ಸಂಹರಿಸಿದ ದಿನವನ್ನು ನರಕ ಚತುರ್ದಶಿ ಎಂದು ಕರೆಯಲಾಗುತ್ತದೆ. ದುಷ್ಟರ ವಿರುದ್ಧ ಶಿಷ್ಟರ ವಿಜಯದ ಸಂಕೇತವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ದಿನದಂದು ಮಾಮೂಲಿ ಸಮಯಕ್ಕಿಂತ ಬೇಗ ಎದ್ದು ಮೈಗೆಲ್ಲ ಎಣ್ಣೆ ಹಚ್ಚಿಕೊಂಡು ಬಿಸಿಲಿನಲ್ಲಿ ಮೈ ಕಾಯಿಸಿಕೊಂಡು ಬಿಸಿ ನೀರಿನಿಂದ ಅಭ್ಯಂಜನ ಸ್ನಾನವನ್ನು ಮಾಡಲಾಗುತ್ತದೆ.

ಅಮಾವಾಸ್ಯೆ: ಎರಡನೇ ದಿನ ಸಾಮಾನ್ಯವಾಗಿ ಅಮವಾಸ್ಯೆಯಾಗಿರುತ್ತದೆ. ಇದನ್ನು ದೀಪಾವಳಿ ಅಮವಾಸ್ಯೆ ಎಂದೇ ಕರೆಯಲಾಗುತ್ತದೆ. ಈ ದಿನದಂದು ಲಕ್ಷ್ಮೀಪೂಜೆ ಮಾಡಲಾಗುತ್ತದೆ. ಅಂದು ರಾತ್ರಿ ಮನೆಗಳಲ್ಲಿ ದೀಪಗಳನ್ನು ಹಚ್ಚುವುದು, ಐಶ್ವರ್ಯದ ದೇವಿಯಾದ ಲಕ್ಷ್ಮಿಯ ಪ್ರವೇಶಕ್ಕಾಗಿ ಎಂದು ಭಾವಿಸಲಾಗುತ್ತದೆ.

ಬಲಿಪಾಡ್ಯಮಿ : ಬಲಿ ಚಕ್ರವರ್ತಿಯ ಶ್ರದ್ಧೆ, ಭಕ್ತಿ ಹಾಗೂ ದಾನಶೀಲತೆಯನ್ನು ಗೌರವಿಸುವ ದಿನ. ವಾಮನ ಅವತಾರದ ಕಥೆಯೊಂದಿಗೆ ಜೋಡಿಸಲಾದ ಈ ಹಬ್ಬ, ಬಲಿಯು ವರ್ಷಕ್ಕೊಮ್ಮೆ ಭೂಮಿಗೆ ಬಂದು ಭಕ್ತರೊಂದಿಗೆ ಸಮಯ ಕಳೆಯುತ್ತಾನೆ ಎಂಬ ನಂಬಿಕೆಯಿಂದ ಆಚರಿಸಲಾಗುತ್ತದೆ.

ಬಲಿ ಚಕ್ರವರ್ತಿಯ ಕಥೆ: ಎಲ್ಲರಿಗೂ ತಿಳಿದಿರುವ ಹಾಗೆ ಬಲಿ ಚಕ್ರವರ್ತಿ ದಾನ ಧರ್ಮಗಳನ್ನು ಮಾಡುತ್ತಾ ತಾನೇ ಶ್ರೇಷ್ಠನೆಂದು ಮೆರೆಯುತ್ತಿರುತ್ತಾನೆ. ಹೀಗಿರುವಾಗ ಬಲಿ ಚಕ್ರವರ್ತಿಯ ಅಹಂಕಾರವನ್ನು ಹೋಗಲಾಡಿಸಲು ಸಾಕ್ಷಾತ್ ವಿಷ್ಣು ವಾಮನನ ಅವತಾರವನ್ನು ತಾಳಿ ಬಲಿ ಚಕ್ರವರ್ತಿ ಆಸ್ಥಾನಕ್ಕೆ ಆಗಮಿಸುತ್ತಾನೆ. ಬ್ರಾಹ್ಮಣ ವೇಷದ ಪುಟ್ಟ ಬಾಲಕನನ್ನು ನೋಡಿ ಬಲಿ ಚಕ್ರವರ್ತಿ ಅವನಿಗೆ ಏನು ಬೇಕಾದರೂ ದಾನವನ್ನು ನೀಡುವೆನೆಂದು, ಯಾವುದೇ ಬಗೆಯ ಮುಜುಗರವನ್ನು ಪಡದೇ ತನಗೇನು ಬೇಕೊ ಅದನ್ನು ಕೇಳಿಕೊಳ್ಳುವಂತೆ ಬಲಿ ಚಕ್ರವರ್ತಿ ತಿಳಿಸುತ್ತಾನೆ. ಆಗ ವಾಮನ ಅವತಾರದಲ್ಲಿ ಬಂದು ವಿಷ್ಣು ನನಗೆ ಮೂರು ಹೆಜ್ಜೆಗಳಷ್ಟು ಜಾಗ ಮಾತ್ರ ಸಾಕೆಂದು ಬೇಡುತ್ತಾನೆ. ವಾಮನನ ಮಾತಿಗೆ ಬಲಿ ಚಕ್ರವರ್ತಿ ನಕ್ಕು ಪುಟ್ಟ ಬಾಲಕ ನೀನು, ನಿನ್ನದು ಪುಟ್ಟ ಹೆಜ್ಜೆಗಳಷ್ಟೇ, ಎಷ್ಟು ಬೇಕು ಅಷ್ಟು ಕೇಳು ಕೊಡಲು ನಾನು ಸಿದ್ಧನೆಂದು ಒತ್ತಾಯಿಸಿದರು ವಾಮನ ಮೂರೇ ಹೆಜ್ಜೆಗಳಷ್ಟು ಜಾಗ ಸಾಕೆಂದು ಕೇಳಿಕೊಳ್ಳುತ್ತಾನೆ.

ಬಲಿ ಚಕ್ರವರ್ತಿ ಈ ಬೇಡಿಕೆಗೆ ಒಪ್ಪಿಕೊಳ್ಳುತ್ತಾನೆ. ತಕ್ಷಣವೇ ವಾಮನ ಮೂರ್ತಿ ಬೃಹದಾಕಾರವಾಗಿ ಬೆಳೆದು ನಿಂತು ಒಂದು ಹೆಜ್ಜೆಯನ್ನು ಇಟ್ಟಾಗ ಇಡೀ ಭೂಮಂಡಲವೆಲ್ಲ ಆವರಿಸಿಕೊಳ್ಳುತ್ತದೆ, ಮತ್ತೊಂದು ಹೆಜ್ಜೆ ಇಟ್ಟಾಗ ಇಡೀ ಆಕಾಶವೆಲ್ಲ ಆಕ್ರಮಿಸಿಕೊಳ್ಳುತ್ತದೆ. ವಾಮನ ಅವತಾರಿ ಮೂರನೇ ಹೆಜ್ಜೆ ಎಲ್ಲಿಡಲಿ ಎಂದು ಬಲಿ ಚಕ್ರವರ್ತಿಯನ್ನು ಕೇಳಿದಾಗ ಬಂದಿರುವವನು ಬಾಲಕನಲ್ಲ, ಸಾಕ್ಷಾತ್ ವಿಷ್ಣುವೇ ಎಂದು ಭಾವಿಸಿದ ಬಲಿ ಚಕ್ರವರ್ತಿ ತನ್ನ ತಲೆಯ ಮೇಲೆ ಪಾದಗಳನ್ನಿಡಬೇಕೆಂದು ಕೇಳಿಕೊಳ್ಳುತ್ತಾನೆ. ಅದರಂತೆ ಮೂರನೇ ಹೆಜ್ಜೆಯನ್ನು ಬಲಿ ಚಕ್ರವರ್ತಿಯ ತಲೆ ಮೇಲಿಟ್ಟಾಗ ಅವನು ಪಾತಾಳ ಲೋಕಕ್ಕೆ ಹೋಗುತ್ತಾನೆ. ತನ್ನ ಅಹಂಕಾರವನ್ನು ಕಳೆದುಕೊಂಡ ಬಲಿ ಚಕ್ರವರ್ತಿಗೆ ಏನಾದರೂ ವರವನ್ನು ಬೇಡಿಕೊಳ್ಳುವ ಅವಕಾಶವೊಂದನ್ನು ವಿಷ್ಣು ಕೊಟ್ಟಾಗ ಪಾತಾಳ ಲೋಕದಿಂದ ವರ್ಷಕ್ಕೊಮ್ಮೆ ಭೂಮಿಗೆ ಬರಲು ತನಗೆ ಅವಕಾಶ ಮಾಡಿಕೊಡಬೇಕೆಂದು ಬಲಿ ಬೇಡಿಕೊಂಡಾಗ ಅದಕ್ಕೆ ವಿಷ್ಣು ಸಮ್ಮತಿಸುತ್ತಾನೆ. ಹಾಗಾಗಿ ದೀಪಾವಳಿ ಹಬ್ಬದ ಅಮಾವಾಸ್ಯೆ ಮಾರನೆಯ ದಿನವನ್ನು ಬಲಿ ಪಾಡ್ಯಮಿ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ಈ ದಿನದಂದು ಬಲಿ ಭೂಮಿಗೆ ಬಂದು ಜನರ ಭಕ್ತಿಯನ್ನು ಸ್ವೀಕರಿಸಿ ತೆರಳುತ್ತಾನೆಂಬ ನಂಬಿಕೆ ಜನರಲ್ಲಿದೆ.

ದೀಪಾವಳಿ ಹಬ್ಬದ ಬಗ್ಗೆ ಇರುವ ಇನ್ನಿತರ ಕಥೆಗಳು: ಶ್ರೀರಾಮನು ರಾವಣನನ್ನು ಕೊಂದು ಅಯೋಧ್ಯೆಗೆ ಮರಳಿದ ದಿನವನ್ನು ದೀಪಾವಳಿ ಹಬ್ಬ ಎಂದು ಆಚರಿಸಲಾಗುತ್ತದೆ ಎಂಬ ನಂಬಿಕೆಯೂ ಇದೆ. 14 ವರ್ಷಗಳ ವನವಾಸವನ್ನು ಮುಗಿಸಿಕೊಂಡು ಸೀತೆಯನ್ನು ಅಪಹರಿಸಿದ ರಾವಣನನ್ನು ಕೊಂದು ಲಂಕೆಯನ್ನು ನಾಶ ಮಾಡಿ ಮರಳಿ ತನ್ನ ರಾಜ್ಯವಾದ ಅಯೋಧ್ಯೆಗೆ ಶ್ರೀರಾಮಚಂದ್ರ ಆಗಮಿಸಿದ್ದನ್ನು ಸಂಭ್ರಮಿಸಿ ಆ ರಾಜ್ಯದ ಜನರು ಆಚರಿಸಿದ ಹಬ್ಬ ದೀಪಾವಳಿ ಹಬ್ಬವೆಂಬ ನಂಬಿಕೆಯು ನಮ್ಮಲ್ಲಿದೆ.

ಇತರ ಧರ್ಮಗಳಲ್ಲಿ ದೀಪಾವಳಿ ಹಬ್ಬದ ದೃಷ್ಟಿಕೋನ: ಹಿಂದೂ ಧರ್ಮದವರು ಮಾತ್ರವಲ್ಲದೇ ಇತರ ಧರ್ಮದವರು ದೀಪಾವಳಿ ಹಬ್ಬವನ್ನು ಇನ್ನಿತರ ಕಾರಣಗಳಿಂದ ಆಚರಿಸುತ್ತಾರೆ.

ಸಿಖ್ ಧರ್ಮ: ಸಿಖ್ ಧರ್ಮದಲ್ಲಿ ದೀಪಾವಳಿ ಹಬ್ಬವನ್ನು ಪ್ರಮುಖ ಹಬ್ಬವನ್ನಾಗಿ ಆಚರಿಸುತ್ತಾರೆ. 1620ರಲ್ಲಿ ಸಿಖ್ಖರ ಆರನೆಯ ಗುರುವಾದ ಹರಗೋಬಿಂದ್ ಸಿಂಗ್ ಗ್ವಾಲಿಯರ್‌ನ ಕೋಟೆಯಲ್ಲಿ ಬಂಧಿತರಾಗಿದ್ದ 52 ರಾಜರನ್ನು ಬಿಡುಗಡೆಗೊಳಿಸಿ ಕರೆದುಕೊಂಡು ಬಂದ ದಿನವೆಂದು ದೀಪಾವಳಿ ಹಬ್ಬವನ್ನು ಆಚರಿಸಲಾಗುತ್ತದೆ.

ಜೈನಧರ್ಮ: ಜೈನಧರ್ಮದವರು ಕಾರ್ತಿಕ ಮಾಸದಲ್ಲಿ ಮೂರು ದಿನ ದೀಪಾವಳಿಯನ್ನು ಆಚರಿಸುವರು. ಜೈನ ಧರ್ಮದ ಕೊನೆಯ ತೀರ್ಥಂಕರರಾದ ಮಹಾವೀರರು ಕಾರ್ತಿಕ ಚತುರ್ದಶಿಯಂದು ಮೋಕ್ಷ ಹೊಂದಿದ್ದರೆಂದು ಹಬ್ಬವನ್ನು ಆಚರಿಸುತ್ತಾರೆ.

ದೀಪಾವಳಿ ಹಬ್ಬದ ವಿಶೇಷತೆ: ದೀಪಾವಳಿ ಹಬ್ಬವನ್ನು ನವ ವರುಷದ ಸಂಕೇತವಾಗಿಯೂ ಆಚರಿಸಲಾಗುತ್ತದೆ. ಮುಖ್ಯವಾಗಿ ಉತ್ತರ ಭಾರತದಲ್ಲಿ ದೀಪಾವಳಿ ಹಬ್ಬದಂದು ಹೊಸ ವರುಷದ ಆರಂಭವೆಂಬಂತೆ ಪರಿಗಣಿಸಲಾಗುತ್ತದೆ. ವರ್ತಕರು, ವ್ಯಾಪಾರಿಗಳು ಈ ದಿನದಂದು ಹೊಸ ಲೆಕ್ಕದ ಪುಸ್ತಕಗಳನ್ನು ಆರಂಭಿಸಿ ಪೂಜಿಸುವ ರೂಢಿಯಿದೆ.

ಲಕ್ಷ್ಮಿ ಮತ್ತು ಗಣೇಶನ ಪೂಜೆ : ದೀಪಾವಳಿಯ ದಿನದಂದು ವಿಶೇಷವಾಗಿ ಸಂಪತ್ತಿನ ಅಧಿದೇವತೆಯಾದ ಲಕ್ಷ್ಮಿ ದೇವಿಯನ್ನು ಪೂಜಿಸಲಾಗುತ್ತದೆ. ಈ ಮೂಲಕ ಸಂಪತ್ತು, ಸಮೃದ್ಧಿ ತಮಗೆ ಲಭಿಸಲಿ ಎಂಬ ಅಭಿಲಾಷೆಯು ಇರುತ್ತದೆ. ಜೊತೆಗೆ ವಿಘ್ನಗಳ ನಾಶಕ ವಿನಾಯಕನನ್ನು ಕೂಡ ವಿಶೇಷವಾಗಿ ಪೂಜಿಸುವ ಮೂಲಕ ಕಷ್ಟಗಳೆಲ್ಲ ಮರೆಯಾಗಲೆಂದು ಶ್ರದ್ಧೆಯಿಂದ ಪೂಜಿಸಲಾಗುತ್ತದೆ.

ದೀಪಾವಳಿ ಹಬ್ಬವನ್ನು ದಕ್ಷಿಣ ಭಾರತದಲ್ಲಿ 3 ದಿನಗಳ ಕಾಲ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಪಟಾಕಿಗಳನ್ನು ಸಿಡಿಸಲಾಗುತ್ತದೆ. ಆ ಮೂಲಕ ಕೆಡಕುಗಳನ್ನು ನಾಶಪಡಿಸುವ ಸಂದೇಶವನ್ನು ಸಾರುತ್ತಾರೆ. ಸಿಹಿ ತಿನಿಸುಗಳನ್ನು ಮಾಡಿ ಮನೆಯವರೆಲ್ಲ ಒಟ್ಟಾಗಿ ಸೇರಿ ಬೆಳಕಿನ ಹಬ್ಬವನ್ನು ಆಚರಿಸಲಾಗುತ್ತದೆ.ಮನೆಗಳಲ್ಲಿ ದೇವಸ್ಥಾನಗಳಲ್ಲಿ ಸಾಲಾಗಿ ದೀಪಗಳನ್ನು ಹಚ್ಚಿಡುವ ಮೂಲಕ ಬೆಳಕಿನ ಕಾಂತಿಯನ್ನು ಎಲ್ಲೆಡೆ ಪಸರಿಸಲಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಕೆಡುಕಿನ ವಿರುದ್ಧ ಒಳಿತಿನ ವಿಜಯದ ಕುರುಹುವಾಗಿ ಹಾಗೂ ಭಕ್ತಿ,ಜ್ಞಾನ, ಭರವಸೆಯ ಕುರುಹುಗಳಾಗಿ ದೀಪಾವಳಿ ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಲಾಗುತ್ತದೆ. ನಮ್ಮಲ್ಲಿರುವ ಅಜ್ಞಾನ ಎಂಬ ಕತ್ತಲು ಮರೆಯಾಗಿ ಜ್ಞಾನ ಎಂಬ ಜ್ಯೋತಿ ಬೆಳಗಲಿ, ಬೆಳಕಿನ ಹಬ್ಬ ಎಲ್ಲರ ಮನೆ, ಮನಗಳಲ್ಲೂ ಭರವಸೆಯ ಬೆಳಕನ್ನು, ಜ್ಞಾನದ ಅರಿವನ್ನು ತರುವಂತಾಗಲಿ.ಪಟಾಕಿ ಹೊಡೆಯುವ ಹುಮ್ಮಸಿನಲ್ಲಿ ಅಕ್ಕ ಪಕ್ಕದಲ್ಲಿರುವ ವಯಸ್ಸಾದವರಿಗೆ, ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ, ಕೈ, ಕಣ್ಣುಗಳು ಸುರಕ್ಷಿತವಾಗಿರುವಂತೆ ನೋಡಿಕೊಂಡರೆ ಉತ್ತಮ. ಸಾಧ್ಯವಾದಷ್ಟು ಪರಿಸರಕ್ಕೆ ಹೆಚ್ಚು ಹಾನಿಯಾಗದಂತಹ ಹಸಿರು ಪಟಾಕಿಗಳನ್ನು ಹೊಡೆಯುವ ಮೂಲಕ ಪರಿಸರದ ಬಗ್ಗೆಯು ಕಾಳಜಿ ವಹಿಸಿದರೆ ಒಳಿತು.

ಮನದಲಿ ಮೂಡುವ ಬೆಳಕು

ಬೆಳಕಿನ ಹಬ್ಬವಿದು ದೀಪಾವಳಿ
ಮತ್ತೊಮ್ಮೆ ಬಂದಿದೆ ನೀಲಾವಳಿ
ಹರುಷವ ಹೊತ್ತು ತಂದಿದೆ
ಎಲ್ಲೆಡೆ ಬೆಳಕಿನ ತಂಗಾಳಿ,
ನಗುವ ಹಂಚಿದೆ ಪ್ರತಿಯೊಬ್ಬರ ಮನದಲ್ಲಿ
ತೂಗಿದೆ ಎದೆಯಲಿ ನವಚೈತನ್ಯದ ಜೋಕಾಲಿ
ಮಣ್ಣಿನ ದೀಪಗಳಲ್ಲಿ ಪ್ರಜ್ವಲಿಸುವ ಜ್ಯೋತಿ
ಕಡಲಿನಂತ ಪ್ರೀತಿ ತೋರಿದೆ ಸ್ಫೂರ್ತಿ
ಮನೆ–ಮನಗಳಲ್ಲಿ ಮೇರೆ ಮೀರಿದೆ ಸಂಭ್ರಮ
ಮನೆಗಳಲ್ಲಿ ಮೂಡಿ ನಿಂತಿದೆ ಭರವಸೆಯ ಅನುಪಮ
ತಮದ ಅಂಧಕಾರ ಕರಗಿ ಹೋಗಲಿ
ಹೃದಯಗಳಲಿ ಮೌಲ್ಯಗಳು ಜೀವ ತಳೆಯಲಿ
ಸತ್ಯದ ದೀಪ ಉರಿಯುತ್ತಿರಲಿ ನಿತ್ಯ
ಬದುಕಿನಲ್ಲಿ ಮೂಡುವ ಬೆಳಕೇ ಸತ್ಯ
ಭೋಜನದೊಂದಿಗೆ ಸಿಹಿ ತಿನಿಸು ತಿಂದು
ಹಂಚುವ ಸಿರಿತನದ ಸಂತೋಷವ
ಹಬ್ಬದ ಹೆಸರಲಿ ಬರೆದು ಹಬ್ಬವ
ನಾವೆಲ್ಲ ಒಂದೇ ಐಕ್ಯತೆಯ ಸಾರುವ

ರಸ್ತೆಗುಂಡಿ ಮುಚ್ಚಿ ಎಂದಿದ್ದಕ್ಕೆ ಉದ್ಯಮಿ ಕಿರಣ್ ಮುಜುಂದಾರ್ ಟೀಕೆ ಸಲ್ಲದು



ಬೆಂಗಳೂರು,ಅ.20(ಕೆಎಂಶಿ)– ಗುಂಡಿಗಳನ್ನು ಮುಚ್ಚಿ ರಸ್ತೆಗಳನ್ನು ದುರಸ್ತಿ ಮಾಡುವ ಬದಲು ಉದ್ಯಮಿ ಕಿರಣ್ ಮುಜುಂದಾರ್ ಶಾ ಅವರನ್ನು ಟೀಕೆ ಮಾಡುವುದರಿಂದ ಯಾವುದೇ ಪ್ರಯೋಜನ ಇಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರದ ಮೇಲೆ ಚಾಟಿ ಬೀಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾ ಅವರು ಹೇಳಿದ್ದು ಒಂದೆಡೆ ಇರಲಿ, ದಿನ ನಿತ್ಯವೂ ಮಾಧ್ಯಮಗಳು ತೋರಿಸುತ್ತಿರುವುದು ಸುಳ್ಳೇ? ವಾಸ್ತವಾಂಶವನ್ನು ಮಾಧ್ಯಮಗಳೇ ತೋರಿಸುತ್ತಿವೆ. ಗುಂಡಿಗಳನ್ನು ಮುಚ್ಚಿ ಸಮಸ್ಯೆ ಬಗೆಹರಿಸುವುದು ಬಿಟ್ಟು ಶಾ ಅವರನ್ನು ಟೀಕಿಸುವುದರಲ್ಲಿ ಈ ಸರ್ಕಾರ ಮತ್ತು ಕಾಂಗ್ರೆಸ್ ನಾಯಕರು ಮಗ್ನರಾಗಿರುವುದು ಸರಿಯಲ್ಲ ಎಂದು ಕುಟುವಾಗಿ ಟೀಕಿಸಿದರು.

ಶಾಗೆ ಟೀಕೆ ಸಲ್ಲದು: ರಾಜ್ಯ ಕಾಂಗ್ರೆಸ್ ಸರ್ಕಾರವು ಜನರ ಕೆಲಸ ಮಾಡುವುದು ಬಿಟ್ಟು ಕ್ಷುಲ್ಲಕ ವಿಚಾರಗಳ ಮೇಲೆ ಗಮನವಿಟ್ಟು ಸಮಯ ಪೋಲು ಮಾಡುತ್ತಿದೆ. ಬೆಂಗಳೂರಿನ ರಸ್ತೆ ಗುಂಡಿಗಳ ಬಗ್ಗೆ ಸರ್ಕಾರವನ್ನು ಎಚ್ಚರಿಸಿದ ಉದ್ಯಮಿ ಕಿರಣ್ ಮುಜುಂದಾರ್ ಶಾ ಅವರ ಟ್ವೀಟ್ ಗೆ ಈ ಸರ್ಕಾರ ಪ್ರತಿ ಟೀಕೆ ಮಾಡುತ್ತಿರುವುದು ಸರಿಯಲ್ಲ. ಒಂದು ಸರ್ಕಾರದ ವರ್ತನೆ ಇರಬೇಕಾದದ್ದು ಈ ರೀತಿಯಲ್ಲ ಎಂದರು.



ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳಿಂದಾಗಿ ಸಾಕಷ್ಟು ಜನರಿಗೆ ಬಹಳ ತೊಂದರೆ ಆಗಿದೆ. ನಾನು ಸಿಎಂ ಆಗಿದ್ದಾಗ ನನ್ನ ಕಾಲದ ಎರಡೂ ಅವಧಿಯಲ್ಲೂ ಗುಂಡಿಗಳ ಬಗ್ಗೆ ಯಾವ ಉದ್ಯಮಿಗಳೂ ಟೀಕೆ ಮಾಡಲಿಲ್ಲ. 2006–07ರಲ್ಲಿ 59 ರಸ್ತೆಗಳ ಅಗಲೀಕರಣಕ್ಕೆ ಮಂಜೂರಾತಿ ನೀಡಿ ಐದಾರು ತಿಂಗಳಲ್ಲೇ ಮುಗಿಸಲಾಗಿತ್ತು. ಇವರಿಗೆ ಕೆಲಸ ಮಾಡಲು ಏನು ಅಡ್ಡಿ ಎಂದು ಅವರು ಖಾರವಾಗಿ ಪ್ರಶ್ನಿಸಿದರು.

ಸರ್ಕಾರದ ಕಾಲಹರಣ: ಈಗಲೂ ಇವರು ಮಾಡುತ್ತಿರುವ ಕೆಲಸಗಳು ನನ್ನ ಅವಧಿಯಲ್ಲಿ ನಾನು ಮಂಜೂರಾತಿ ನೀಡಿದ್ದು. ಈ ಸರ್ಕಾರಕ್ಕೆ ಜನರ ಕೆಲಸ ಮಾಡುವುದು ಬಿಟ್ಟು ವಿನಾಕಾರಣ ಕಾಲಹರಣ ಮಾಡುತ್ತಿದೆ. ಬೇರೆ ರಾಜ್ಯಗಳಲ್ಲಿ ಉದ್ಯಮಿಗಳಿಗೆ ಕೊಡುವ ಸವಲತ್ತು, ರಿಯಾಯ್ತಿಗಳ ಬಗ್ಗೆ ಹೇಳಿದರೆ ಅಲ್ಲಿಗೇ ಹೋಗಲಿ, ಇಲ್ಲಿಗ್ಯಾಕೆ ಬಂದ್ರು ಅಂತಾರೆ. ಹೀಗೆ ಹೇಳಿದರೆ ಯಾವ ಉದ್ಯಮ ರಾಜ್ಯಕ್ಕೆ ಬರುತ್ತದೆ ಎಂದರು.

ಈಗ ದಿನವೂ ಆರ್‌ಎಸ್‌ಎಸ್.. ಆರ್‌ಎಸ್‌ಎಸ್.. ಎಂದು ಜಪ ಮಾಡುತ್ತಿದೆ ಕಾಂಗ್ರೆಸ್ ಸರ್ಕಾರ. ಇದು ಆರ್‌ಎಸ್‌ಎಸ್ ಬಗ್ಗೆ ಚರ್ಚೆ ಮಾಡುವ ಸಂದರ್ಭವೇ? ರಾಜ್ಯದಲ್ಲಿ ಎಷ್ಟೊಂದು ಸಮಸ್ಯೆಗಳಿವೆ, ಅವುಗಳನ್ನು ನಿವಾರಿಸುವುದು ಬಿಟ್ಟು ಒಂದು ಸಂಘಟನೆ ವಿರುದ್ಧ ಚರ್ಚಿಸುತ್ತಿದ್ದರೆ ಉಪಯೋಗ ಏನು? ಇಂದು ಸಚಿವರು ಕೇಳಿದರು.

ಚನ್ನಪಟ್ಟಣದಲ್ಲಿ ಪೊಲೀಸರ ಮೇಲೆ ಹಣ ಎರಚಿದರು: ಚನ್ನಪಟ್ಟಣದಲ್ಲಿ ಖವ್ವಾಲಿ ಕಾರ್ಯಕ್ರಮದಲ್ಲಿ ಪೊಲೀಸರ ಮೇಲೆ ಹಣ ಎರಚಿದ ಘಟನೆ ನಡೆದಿದೆ. ಚನ್ನಪಟ್ಟಣದಲ್ಲಿ ಪೊಲೀಸರ ಮುಂದೆ ಡಾನ್ಸ್ ಮಾಡ್ತಾರೆ, ಪೊಲೀಸರ ಮೇಲೆ ಹಣ ಎರಚ್ತಾರೆ. ಹಣ ಎರಚಿಸಿಕೊಂಡವರು, ಎರಚಿದವರ ಮೇಲೆ ಕ್ರಮ ಇಲ್ಲ. ಆದರೆ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಗಣವೇಷಧಾರಿ ಆಗಿದ್ದ ಪಿಡಿಓ ಮೇಲೆ ಕ್ರಮ ಕೈಗೊಳ್ಳುತ್ತಾರೆ. ಕಲಬುರಗಿಯಲ್ಲಿ ಕ್ರಮ ವಹಿಸಿದ ಮೇಲೆ ಚನ್ನಪಟ್ಟಣದಲ್ಲಿ ಕ್ರಮ ಯಾಕಿಲ್ಲ? ಎಂದು ಸರ್ಕಾರದ ಮೇಲೆ ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

ಶಿಷ್ಟಾಚಾರದ ಬಗ್ಗೆ ತಲೆಕೆಡಿಸಿಕೊಳ್ಳಲ್ಲ: ಹಾಸನಾಂಬೆ ದರ್ಶನ ವೇಳೆ ಜಿಲ್ಲಾಡಳಿತದಿಂದ ಶಿಷ್ಟಾಚಾರ ಪಾಲನೆ ಮಾಡದೆ ನಿಮಗೆ ಅಪಮಾನ ಮಾಡಲಾಗಿದೆ ಎಂಬ ಬಗ್ಗೆ ಮಾಧ್ಯಮಗಳು ಗಮನ ಸೆಳೆದಾಗ, ನಾನು ಶಿಷ್ಟಾಚಾರಕ್ಕೆ ಆದ್ಯತೆ ಕೊಡಲ್ಲ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅಧಿಕಾರಿಗಳಿಗೇಕೆ ತೊಂದರೆ ಕೊಡಬೇಕು? ದೇವಿಯ ದರ್ಶನ ಮುಖ್ಯ, ನನಗೆ ದರ್ಶನ ಆಗಿದೆ. ಸಾರ್ವಜನಿಕರು ಕೂಡ ಯಾವುದೇ ತೊಂದರೆಗೆ ಒಳಗಾಗದೆ ನೆಮ್ಮದಿಯಾಗಿ ತಾಯಿಯ ದರ್ಶನ ಮಾಡುತ್ತಿದ್ದಾರೆ. ಉತ್ತಮವಾಗಿ ವ್ಯವಸ್ಥೆ ಮಾಡಲಾಗಿದೆ. ಅದು ಮುಖ್ಯವೇ ಹೊರತು ಶಿಷ್ಟಾಚಾರವಲ್ಲ ಎಂದರು.

ನಾನು ಸಿಎಂ ಆಗಿದ್ದಾಗ ಗ್ರಾಮ ವಾಸ್ತವ್ಯ ಮಾಡುತ್ತಿದ್ದಾಗ ಅಧಿಕಾರಿಗಳು ಹೊರಗೆ ಮಲಗುತ್ತಿದ್ದರು. ನನ್ನಿಂದ ಅವರಿಗೆ ತೊಂದರೆ ಆಗಿದೆ. ಹೀಗಾಗಿ ನಾನು ಶಿಷ್ಟಾಚಾರದ ಬಗ್ಗೆ ತಲೆಕೆಡಿಸಿಕೊಳ್ಳಲಾರೆ ಎಂದರು. ಪಕ್ಷದ ಕೋರ್ ಕಮಿಟಿಯನ್ನು ಪುನಾರಚನೆ ಮಾಡಲಾಗುತ್ತಿದ್ದು, ಎರಡು, ಮೂರು ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು.

ಮೂಡಲಹುಂಡಿಯಲ್ಲಿ ಕೊಂಡೋತ್ಸವ ನಾಳೆ

ಮೈಸೂರು.ಅ.20(ಎಂಟಿವೈ)–ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದ ಕೊಂಡದ ಬಸವೇಶ್ವರರ ಕೊಂಡೋತ್ಸವ ಬುಧವಾರ (ಅ.22) ಸಂಜೆ 6ಕ್ಕೆ ವಿಜೃಂಭಣೆಯಿಂದ ಜರುಗಲಿದೆ.

ಕೊಂಡೋತ್ಸವದ ಹಿನ್ನೆಲೆಯಲ್ಲಿ ವರಕೋಡು ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಿಂದ ಉತ್ಸವ ಮೂರ್ತಿ, ಬೀರೇಶ್ವರ ಹಾಗೂ ಬನ್ನಿಮಹಾಕಾಳೇಶ್ವರಿ ದೇವಿಯ ಉತ್ಸವ ಮೂರ್ತಿ, ದೇವಾಲಯದ ಬಸಪ್ಪ, ಪೂಜಾ ಕುಣಿತ ಹಾಗೂ ವಿವಿಧ ದೇವಾಲಯಗಳ ದೇವರ ಗುಡ್ಡರು ಮೆರವಣಿಗೆಯಲ್ಲಿ ಮೂಡಲಹುಂಡಿಗೆ ತಲುಪಲಿದ್ದಾರೆ. ನಂತರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿ ಸಂಜೆ 5.30ಕ್ಕೆ ಗ್ರಾಮದ ಸಮೀಪವಿರುವ ದೊಣ್ಣೆಕಲ್ಲು ಬೆಟ್ಟದಲ್ಲಿರುವ ಕೊಂಡದ ಬಸವೇಶ್ವರ ಗುಡಿಗೆ ತಲುಪಲಿದ್ದಾರೆ. ಈ ವೇಳೆ ವಿವಿಧ ಹರಕೆ ಹೊತ್ತವರು ಬಾಯಿ ಬೀಗದಾರಿಗಳಾಗಿ ಮೆರವಣಿಗೆಯಲ್ಲಿ ಸಾಗಲಿದ್ದಾರೆ.

ದೀಪಾವಳಿ ದಿನದಂದು ಕೊಂಡದ ಬಸವೇಶ್ವರರ ಕೊಂಡೋತ್ಸವ ಆಚರಿಸುವ ಪದ್ಧತಿಯಿದ್ದು, ಇದಕ್ಕಾಗಿ ವರಕೋಡು, ಮೂಡಲಹುಂಡಿ ಗ್ರಾಮಸ್ಥರು ಮನೆಗೊಂದು ಸೌದೆ ನೀಡಿ, ಸಂಗ್ರಹವಾದ ಸೌದೆಯನ್ನು ಕೊಂಡದ ಬಸವೇಶ್ವರ ಗುಡಿಗೆ ಕೊಂಡೊಯ್ದು ಮಧ್ಯಾಹ್ನ ಬೆಂಕಿ ಹಚ್ಚಿ ಕೆಂಡ ಸಿದ್ಧಪಡಿಸಲಾಗುತ್ತದೆ. ದೇವರ ಮೆರವಣಿಗೆ ಗುಡಿ ಬಳಿ ತಲುಪುತ್ತಿದ್ದಂತೆಯೇ ಕೆಂಡದ ರಾಶಿಯನ್ನು ಕೊಂಡದ ಕಟ್ಟೆಗೆ ಸುರಿದು ಗಾಳಿ ಬಿಸಿ ಶಾಖ ಹೆಚ್ಚಿಸಲಾಗುತ್ತದೆ. ವಿವಿಧ ಪೂಜೆ ಬಳಿಕ ಸಂಜೆ 6.30ಕ್ಕೆ ಕೊಂಡೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಬಸವೇಶ್ವರ ದೇವಾಲಯ, ಶನೇಶ್ವರ ದೇವಾಲಯದ ದೇವರ ಗುಡ್ಡರು ಹಾಗೂ ಹರಕೆ ಹೊತ್ತಿರುವವರು ಕೊಂಡ ಹಾಯಲಿದ್ದಾರೆ. ಕೊಂಡೋತ್ಸವವನ್ನು ವೀಕ್ಷಿಸಿ, ಪೂಜೆ ಸಲ್ಲಿಸಲು ಮೂಡಲಹುಂಡಿ, ವರಕೋಡು, ಬಡಗಲಹುಂಡಿ, ಕೆಂಪೇಗೌಡನ ಹುಂಡಿ, ಹೊಸಹುಂಡಿ, ಮೆಲ್ಲಹಳ್ಳಿ, ಉನಗನಹಳ್ಳಿ, ವಾಜಮಂಗಲ, ಮೈಸೂರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಲಿದ್ದಾರೆ. ನಂತರ ದೇವರ ಮೆರವಣಿಗೆಯನ್ನು ಮೂಡಲಹುಂಡಿ ಗ್ರಾಮದ ಮೂಲಕ ವರಕೋಡು ಗ್ರಾಮಕ್ಕೆ ಕೊಂಡೊಯ್ದು ದೇವಾಲಯದಲ್ಲಿ ಉತ್ಸವ ಮೂರ್ತಿಯನ್ನು ಇಟ್ಟು, ದೀಪಾವಳಿಯ ಕೊಂಡೋತ್ಸವಕ್ಕೆ ತೆರೆ ಎಳೆಯಲಾಗುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಚಿಕಿತ್ಸೆ ಉಚಿತ ಎಂದು ಹೋದರೆ ಅನ್ಯಮಾರ್ಗದಲ್ಲಿ ವಸೂಲಿ ತಪ್ಪಿದ್ದಲ್ಲ!

ಮೈಸೂರಿನ ಟ್ರಾಮಾ ಕೇರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 'ವಸೂಲಿ ಹಾವಳಿ'ಗೆ ಬೇಸತ್ತಿರುವ ರೋಗಿಗಳು, ಅವರ ಸಂಬಂಧಿಗಳು!



ಮೈಸೂರು, ಅ.20(ಎಂಕೆ)– ಉಚಿತ ವೈದ್ಯಕೀಯ ಸೇವೆ ಬಯಸಿ ಬರುವ ಬಡ ರೋಗಿಗಳ ಜೇಬಿಗೆ ಕತ್ತರಿ ಹಾಕುತ್ತಿರುವ ವೈದ್ಯರು, ತಮ್ಮ ಜೇಬಿನ ಜೊತೆಗೆ ಖಾಸಗಿ ಸಂಸ್ಥೆಯ ಖಜಾನೆಯನ್ನು ಭರ್ತಿ ಮಾಡುತ್ತಿದ್ದಾರೆ...!

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆಡಳಿತಕ್ಕೆ ಒಳಪಟ್ಟ ಕೆ.ಆರ್.ಎಸ್ ರಸ್ತೆಯಲ್ಲಿರುವ ಟ್ರಾಮಾ ಕೇರ್ ಮತ್ತು ಸೂಪರ್ ಸ್ಪೆಷಾಲಿಟಿ(ಮಹಾರಾಣಿ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ) ಆಸ್ಪತ್ರೆಯಲ್ಲಿ ಕೆಲ ದಿನಗಳ ಕಾಲ ನಿಂತಿದ್ದ ಜೇಬು ಕತ್ತರಿ ಹಾವಳಿ ಮತ್ತೆ ಆರಂಭವಾಗಿದೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನ್ಯೂರಾಲಜಿ, ಪ್ಲಾಸ್ಟಿಕ್ ಸರ್ಜರಿ, ಯುರಾಲಜಿ, ಮೆಡಿಕಲ್, ಮೆಡಿಕಲ್ ಆಂಕೋಲಜಿ, ಕ್ಯಾನ್ಸರ್, ಇಸಿಜಿ, ನ್ಯೂರೋ ಸರ್ಜರಿ, ನೆಪ್ರೋಲಜಿ, ಸರ್ಜಿಕಲ್ ಗ್ಯಾಸ್ಟ್ರೋಎಂಟ್ರಾಲಜಿ, ಸರ್ಜಿಕಲ್ ಆಂಕೋಲಜಿ, ನೋವು ಉಪಸಮನ ಹಾಗೂ ಎಂಡೋಕ್ರಿನೊಲೊಜಿ ಚಿಕಿತ್ಸಾ ಸೇವೆ ಲಭ್ಯವಿದ್ದರೆ, ಟ್ರಾಮಾ ಕೇರ್ ಸೆಂಟರ್‌ನಲ್ಲಿ ಮೂಳೆ ಚಿಕಿತ್ಸಾ (Department of Orthopedics) ಸೇವೆ ನೀಡಲಾಗುತ್ತಿದೆ.

ಈ ಎರಡು ಆಸ್ಪತ್ರೆಗಳಲ್ಲಿಯೂ ಎಲ್ಲಾ ಬಗೆಯ ರಕ್ತ ಪರೀಕ್ಷೆ, ಸಿಟಿ ಸ್ಕ್ಯಾನ್ ಸೌಲಭ್ಯವಿದ್ದರೂ ಒಳರೋಗಿಗಳಾಗಿ ದಾಖಲಾಗುವ ರೋಗಿಗಳಿಗೆ ರಕ್ತ ಪರೀಕ್ಷೆ, ಸಿಟಿ ಸ್ಕ್ಯಾನ್ ಸೇರಿದಂತೆ ಇನ್ನಿತರೆ ಪರೀಕ್ಷೆಗಳಿಗಾಗಿ ಖಾಸಗಿ ಸಂಸ್ಥೆಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ಅಲ್ಲದೆ ಬಿಪಿಎಲ್ ಪಡಿತರ ಇದ್ದವರಿಗೆ ಚಿಕಿತ್ಸೆ ಉಚಿತವಾಗಿದ್ದರೂ ಸರಿಯಾಗಿ ಮಾಹಿತಿ ನೀಡದೆ ಬಿಲ್ ಮಾಡಿಸಲಾಗುತ್ತಿದೆ.


> ಸಮಯ ನೋಡಿಕೊಂಡು ಹೊರಗಡೆ ಖಾಸಗಿ ಸಂಸ್ಥೆಗೆ ರಕ್ತ ಪರೀಕ್ಷೆ ಮತ್ತು ಸ್ಕ್ಯಾನಿಂಗ್ ಮಾಡಿಸಲು ಬರೆಯುತ್ತಾರೆ. ಕೊನೆಗೆ ಪ್ರಶ್ನಿಸಿದಾಗ ಉಚಿತವಾಗಿ ಇಲ್ಲಿಯೇ ಮಾಡುತ್ತೇವೆ. ಹೊರಗಡೆ ಸ್ಕ್ಯಾನಿಂಗ್ ಮಾಡಿಸಲು ಖರ್ಚಾಗಿರುವ ಹಣವನ್ನು ವಾಪಸ್ ಕೊಡಿಸುವುದಾಗಿ ಹೇಳುತ್ತಾರೆ. ಕಂಡಂತೆಯೇ ಬಡರೋಗಿಗಳ ಜೇಬಿಗೆ ಕತ್ತರಿ ಹಾಕಲಾಗುತ್ತಿದೆ.
>
> – ನೊಂದ ರೋಗಿಗಳು

ವೈದ್ಯರ ಹೆಸರು ಟ್ರಾಮಾ ಕೇರ್!: ಮೊದಲೆಲ್ಲಾ ಖಾಸಗಿ ಸಂಸ್ಥೆಗಳಿಗೆ ಶಿಫಾರಸ್ಸು ಮಾಡುವಾಗ ಬಿಲ್‌ನಲ್ಲಿ ವೈದ್ಯರ ಹೆಸರನ್ನು ನಮೂದಿಸಲಾಗುತ್ತಿತ್ತು. ಈಗ ಯಾರಿಗೂ ಗೊತ್ತಾಗಬಾರದು ಮತ್ತು ಯಾವ ವೈದ್ಯರು ಶಿಫಾರಸ್ಸು ಮಾಡಿದ್ದಾರೆಂದು ತಿಳಿಯದಂತೆ ಬಿಲ್‌ನಲ್ಲಿ ಟ್ರಾಮಾಕೇರ್ ಅಥವಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಎಂದು ನಮೂದಿಸಲಾಗುತ್ತಿದೆ.

ಸಂಜೆ ವೇಳೆಯೇ ಶಿಫಾರಸು: ಬೆಳಗ್ಗೆಯಿಂದ ಸಂಜೆವರೆಗೆ ಸುಮ್ಮನಿದ್ದು, ಸಂಜೆ ಅಂದರೆ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮತ್ತು ಸ್ಕ್ಯಾನಿಂಗ್ ಅವಧಿ ಮುಗಿದ ನಂತರ ರಕ್ತ ಪರೀಕ್ಷೆ ಮಾಡಿಸಿ, ಸ್ಕ್ಯಾನಿಂಗ್ ಮಾಡಿಸಿ ಕೊಂಡು ಬನ್ನಿ ಎಂದು ಹೇಳುತ್ತಾರೆ. ಬೇರೆ ದಾರಿ ಇಲ್ಲದೆ ಹೊರಗಡೆ ಮಾಡಿಸಲೇಬೇಕಾದ ಪರಿಸ್ಥಿತಿಯನ್ನು ವೈದ್ಯರೇ ಸೃಷ್ಟಿಸುತ್ತಿದ್ದಾರೆ ಎಂದು ಒಳರೋಗಿಯ ಸಂಬಂಧಿ ಯೊಬ್ಬರು 'ಮೈಸೂರು ಮಿತ್ರ'ನಿಗೆ ಬಿಲ್ ಸಮೇತ ಮಾಹಿತಿ ನೀಡಿದರು.

ಬಡ ರೋಗಿಗಳು ಎಲ್ಲಿಗೆ ಹೋಗಬೇಕು: ಉಚಿತ ಚಿಕಿತ್ಸೆ ಎಂದು ಬಂದರೆ ಇಲ್ಲಿಯೂ ಮೆಡಿಸಿನ್‌ನಿಂದ ಹಿಡಿದು ಎಲ್ಲಾ ಪರೀಕ್ಷೆಗಳಿಗೂ ಹೊರಗಡೆ ಬರೆಯುತ್ತಾರೆ. ಈ ತರ ಬರೆಯುವುದಾದರೆ ಇಲ್ಲಿಗ್ಯಾಕೆ ಬರಬೇಕು. ಖಾಸಗಿ ಆಸ್ಪತ್ರೆಗೆ ಹೋಗಬಹುದಲ್ಲಾ ಎಂದು ಕಿಡಿಕಾರಿದರು.

ಸಿಬ್ಬಂದಿ ಕೊರತೆ: ಅಲ್ಲದೆ ಆಸ್ಪತ್ರೆಯಲ್ಲಿ ಗ್ರೂಪ್ ಡಿ ಸಿಬ್ಬಂದಿ ಕೊರತೆ ಇದ್ದು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಿಂದ ಪಕ್ಕದಲ್ಲೇ ಇರುವ ಟ್ರಾಮಾ ಕೇರ್ ಸೆಂಟರ್‌ಗೆ ಕರೆದುಕೊಂಡು ಹೋಗಲು ವೆಹಿಕಲ್ ಮಾಡಿಕೊಂಡು ಬರಬೇಕು. ನಡೆಯಲು ಶಕ್ತಿ ಇದ್ದವರು ಹೋಗಿ ಬರುತ್ತಾರೆ. ಆದರೆ, ತೀರ ಹಾಸಿಗೆ ಹಿಡಿದವರ ಪಾಡು ಹೇಳತೀರದಾಗಿದೆ ಎಂದು ಅಳಲು ವ್ಯಕ್ತಪಡಿಸಿದ್ದಾರೆ.


HOMBALE DIAGNOSTIC CENTER
BUILDING NO.8 3RD CROSS, BRINDAVAN EXTENSION,
Mysore - 20 Tel: 0821 4250864 Mobile: 7618793181 email hdcmys@gmail.com

Cash Bill

Patient Name : Mrs. KHURSHID
Patient No : 7089
Age/Gender : 73 Yrs / Female
Phone No : 7760403431
Doctor : Dr. TRAUMA CENTRE
Bill No : 1944/25-26
Bill Date : 08-Oct-2025 09.42.58 PM
Bill Type : Cash Bill
Lab Ref No : 6552


#	Services	Amount	Net Amt
1	CBC: COMPLETE BLOOD COUNT	400.00	400.00
2	RFT (RENAL FUNCTION TEST)	700.00	700.00
3	ELECTROLYTES	450.00	450.00
	Total Billed	1550.00	1550.00

Paid Amount : One Thousand Five Hundred Fifty Rupees Only

Net Payable Amt 1550.00
Net Deposit Amt 1550.00
Balance 0.00

Mr. RECEPTION
Printed By

Mr. Reception
Billed By


HOMBALE DIAGNOSTIC CENTRE

ಟ್ರಾಮಾ ಸೆಂಟರ್ ತೆರಳಿದ್ದ ರೋಗಿಗಳಿಗೆ ಖಾಸಗಿ ಲ್ಯಾಬ್‌ನಲ್ಲಿ ಟೆಸ್ಟ್ ಮಾಡಿಸಿರುವ ರಶೀದಿಗಳು.

ಮೈಸೂರಲ್ಲಿ ಕಳೆಕಟ್ಟಿದ ದೀಪಾವಳಿ ಸಂಭ್ರಮ

ಪೂಜೆ ಜೊತೆಗೆ ಪಟಾಕಿ ಸಿಡಿಸಿ ಪರಸ್ಪರ ಶುಭಕೋರಿಕೆ





ಮೈಸೂರಿನಲ್ಲಿ ಆಕಾಶ ಬುಟ್ಟಿ ಹಾರಿಸಿ, ಪಟಾಕಿ ಹಚ್ಚಿ ಸಂಭ್ರಮಿಸಿದ ನಾಗರೀಕರು.

ಮೈಸೂರು, ಅ.20(ಎಸ್‌ಬಿಡಿ)– ಮೈಸೂರಲ್ಲಿ ದೀಪಾವಳಿ ಸಡಗರ ಮನೆ ಮಾಡಿದ್ದು, ಸೋಮವಾರ ನರಕ ಚತುರ್ದಶಿಯಂದು ಪೂಜೆ ಪುನಸ್ಕಾರದ ಜೊತೆಗೆ ಪಟಾಕಿ ಸದ್ದು ಜೋರಾಗಿತ್ತು.

ಸಾಂಪ್ರದಾಯಿಕವಾಗಿ ದೀಪಾವಳಿಯನ್ನು ಐದು ದಿನಗಳ ಕಾಲ ಆಚರಿಸಲಾಗುತ್ತದೆಯಾದರೂ ಸಹಜವಾಗಿ ನರಕ ಚತುರ್ದಶಿಯಿಂದ ಮೂರು ದಿನ ಹಬ್ಬವನ್ನು ಸಂಭ್ರಮಿಸಲಾಗುತ್ತದೆ. ಹಲವರು ಇಂದು ಬೆಳಗ್ಗೆ ಅಭ್ಯಂಗನ ಸ್ನಾನ ಮಾಡಿ, ದೇವರಿಗೆ ಪೂಜೆ ಸಲ್ಲಿಸಿದ್ದಾರೆ. ಸಂಜೆ 5.55ರ ನಂತರ ಅಮಾವಾಸ್ಯೆ ಕೂಡುತ್ತಿದ್ದಂತೆ ದೀಪಾವಳಿ ಸಡಗರ ಹೆಚ್ಚಿತು. ಮನೆ ಮುಂದೆ ಹಣತೆ ಬೆಳಗಿಸಿ, ತುಳಸಿ ಕಟ್ಟೆಗೆ ಪೂಜೆ ನೆರವೇರಿಸಿದರು. ಕೆಲ ಮನೆಗಳಲ್ಲಿ ರಾತ್ರಿ ಧನಲಕ್ಷ್ಮಿ ಪೂಜೆ ನಡೆದರೆ, ಮತ್ತಷ್ಟು ಜನ ಮಂಗಳವಾರ ಪೂಜೆ ಮಾಡಲು ಸಿದ್ಧತೆ ನಡೆಸಿದ್ದಾರೆ.

ಮಂಗಳವಾರ ಬೆಳಗ್ಗೆ 11.56ರವರೆಗೂ ಅಂಗಡಿ, ವ್ಯಾಪಾರ ಸ್ಥಳಗಳಲ್ಲಿ ಲಕ್ಷ್ಮೀ ಪೂಜೆ ಸಲ್ಲಿಸಲು ಪ್ರಶಸ್ತ ಕಾಲವೆಂದು ಹೇಳಲಾಗಿದೆ. ಬುಧವಾರ ದೀಪಾವಳಿ ಪಾಡ್ಯ ಪೂಜೆ, ಸರಸ್ವತಿ ಪೂಜೆ, ಗೋಪೂಜೆ ನೆರವೇರಿಸಿ, ವಿಶೇಷ ತಿಂಡಿ–ತಿನಿಸುಗಳನ್ನು ದೇವರಿಗೆ ನೈವೇದ್ಯ ಮಾಡಲಾಗುತ್ತದೆ. ಹೋಳಿಗೆ ಸೇರಿದಂತೆ ವಿವಿಧ ಖಾದ್ಯಗಳನ್ನು ಸವಿದು ಹಬ್ಬವನ್ನು ಸಂಭ್ರಮಿಸಲಾಗುತ್ತದೆ.

ಪಟಾಕಿ ಸದ್ದು: ಪೂಜೆ ಪುನಸ್ಕಾರ ಆಚರಣೆಗಳು ಒಂದೆಡೆಯಾದರೆ ಪಟಾಕಿ ಸಿಡಿಸುವುದು ದೀಪಾವಳಿಯ ವಿಶೇಷ. ಸೋಮವಾರ ಸಂಜೆ ಹಣತೆಗಳ ಬೆಳಕಲ್ಲಿ ಮನೆಗಳ ಮುಂದೆ ಪಟಾಕಿ ಸಿಡಿಸಿ, ಖುಷಿ ಪಟ್ಟರು. ಪುಟ್ಟ ಮಕ್ಕಳು, ಹಿರಿಯರು, ಮಹಿಳೆಯರು ಸುರ್ ಸುರ್ ಬತ್ತಿ ಹೂಕುಂಡ ಹಚ್ಚಿದರು. ಪ್ರೌಢಾವಸ್ಥೆ ನಂತರದ ವಯಸ್ಸಿನವರು ರಾಕೆಟ್ ಸೇರಿದಂತೆ ಜೋರು ಶಬ್ಧ ಹೊಮ್ಮಿಸುವ ಸಿಡಿಮದ್ದುಗಳನ್ನು ಸಿಡಿಸಿದರು. ಮಕ್ಕಳಿಂದ ವೃದ್ಧರವರೆಗೂ ಮನೆ ಮಂದಿಯೆಲ್ಲಾ ಒಟ್ಟಿಗೆ ಮನೆ ಮುಂದೆ ಪಟಾಕಿ ಸಿಡಿಸಿ, ಸಂತಸಪಟ್ಟ ದೃಶ್ಯಗಳು ಹಲವೆಡೆ ಕಂಡು ಬಂದವು. ಆಗಸದತ್ತ ಸಾಗುವಂತಿದ್ದ ಆಕಾಶಬುಟ್ಟಿಗಳು ಗಮನ ಸೆಳೆದವು.

ಕತ್ತಲಾಗದಿರಲಿ ಬದುಕು: ಪರಿಸರ ಕಾಳಜಿಯಿಂದ ಹೆಚ್ಚು ಮಾಲಿನ್ಯ ಉಂಟು ಮಾಡದ ಪಟಾಕಿಯನ್ನು ಕನಿಷ್ಟ ಪ್ರಮಾಣದಲ್ಲಿ ಸಿಡಿಸುವುದು ಒಳ್ಳೆಯದು. ಮುಖ್ಯವಾಗಿ ಯಾವುದೇ ಪಟಾಕಿ ಸಿಡಿಸುವಾಗ ತಮ್ಮ ಹಾಗೂ ಸುತ್ತಮುತ್ತಲಿನ ಜನರ ಸುರಕ್ಷತೆಯನ್ನು ಮರೆಯಬಾರದು. ಜನ, ವಾಹನಗಳು ಓಡಾಡುವುವಾಗಲೇ ದೊಡ್ಡ ಪಟಾಕಿಗಳನ್ನು ಸಿಡಿಸಿದರೆ ಅಪಘಾತ–ಅವಘಡಗಳಾಗುವ ಸಾಧ್ಯತೆ ಇದೆ ಎನ್ನುವುದನ್ನು ನೆನಪಲ್ಲಿಟ್ಟುಕೊಳ್ಳಬೇಕು. ಸುರ್‌ಸುರ್ ಬತ್ತಿಯ ತಂತಿಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಒಂದೆಡೆ ಸಂಗ್ರಹಿಸಿ, ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ಪಟಾಕಿ ಸಿಡಿತದ ಕಿಡಿ ಕಣ್ಣಿಗೆ ಬಿದ್ದು, ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಹಬ್ಬದ ಸಗರದಲ್ಲಿ ಸಣ್ಣ ನಿರ್ಲಕ್ಷ್ಯದಿಂದ ಇಡೀ ಬದುಕನ್ನು ಕತ್ತಲಾಗಿಸಿಕೊಳ್ಳಬಾರದು.

ಇಂದು ಮೈಸೂರಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ

ಮೈಸೂರು, ಅ.20(ಎಸ್‌ಪಿಎನ್)– ಮೈಸೂರು ಜಿಲ್ಲಾ ಪೊಲೀಸ್ ಕಚೇರಿ ಪಕ್ಕದಲ್ಲಿರುವ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ನಗರ ಮತ್ತು ಜಿಲ್ಲೆ, ಕೆಎಸ್‌ಆರ್‌ಪಿ ಮತ್ತು ಕೆಎಆರ್‌ಪಿ ಘಟಕಗಳ ಸಹಯೋಗದೊಂದಿಗೆ ಮಂಗಳವಾರ ಬೆಳಗ್ಗೆ 8 ಗಂಟೆಗೆ ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

> ಕರ್ನಾಟಕದಿಂದ ಮೈಬೂಬ್ ಗುದ್ದಲಿಲ್ (ಎಸ್‌ಐ), ಕೆ.ಎನ್.ವೆಂಕಟಾಚಲಪತಿ(ಎಎಸ್‌ಐ), ಎಸ್.ಗಿರೀಶ್(ಎಎಸ್‌ಐ ರಿಸರ್ವ್), ಎಂ.ಬಸವರಾಜು (ಹೆಚ್‌ಸಿ–ಸಿವಿಲ್), ಟಿ.ಎಸ್. ನಿಂಗರಾಜು(ಹೆಚ್‌ಸಿ), ಬಿ.ಯು.ಪ್ರಕಾಶ್ (ಹೆಚ್‌ಸಿ), ಎನ್.ಆರ್.ಮಹೇಶ್(ಹೆಚ್‌ಸಿ), ರಾಮಪ್ಪ ಪೂಜಾರಿ(ಪಿಸಿ) ವಿವಿಧ ಸಂದರ್ಭದಲ್ಲಿ ಕರ್ತವ್ಯದ ವೇಳೆ ಹುತಾತ್ಮರಾಗಿದ್ದಾರೆ.

ಮುಖ್ಯ ಅತಿಥಿಗಳಾಗಿ ದಕ್ಷಿಣ ವಲಯದ ಡಿಐಜಿ ಡಾ.ಎಂ.ಬಿ.ಬೋರಲಿಂಗಯ್ಯ ಆಗಮಿಸಲಿದ್ದು, ಎಲ್ಲಾ ಘಟಕಗಳ ಮುಖ್ಯಸ್ಥರು ಭಾಗವಹಿಸಲಿದ್ದಾರೆ. ದೇಶಾದ್ಯಂತ 191 ಮಂದಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ವಿವಿಧ ಸಂದರ್ಭದಲ್ಲಿ ಹುತಾತ್ಮರಾಗಿದ್ದು, ಆಂಧ್ರ ಪ್ರದೇಶ 5, ಅರುಣಾಚಲ ಪ್ರದೇಶ 1, ಅಸ್ಸಾಂ 2, ಬಿಹಾರ್ 9, ಛತೀಶ್‌ಗಡ್ 16, ಗುಜರಾತ್ 3, ಜಾರ್ಖಂಡ್ 1, ಕರ್ನಾಟಕ 8, ಕೇರಳ 1, ಮಧ್ಯಪ್ರದೇಶ 11, ಮಹಾರಾಷ್ಟ್ರ 1, ಮಣಿಪುರ್ 3, ನಾಗಲ್ಯಾಂಡ್ 1, ಒಡಿಸ್ಸಾ 2 ಮಂದಿ ಹುತಾತ್ಮರಾಗಿದ್ದಾರೆ. ಅಂತಯೇ ಪಂಜಾಬ್ 3, ರಾಜಸ್ತಾನ್ 7, ತಮಿಳುನಾಡು 6, ತೆಲಂಗಾಣ 5, ತ್ರಿಪುರಾ 2, ಉತ್ತರ ಪ್ರದೇಶ 3, ಉತ್ತರಾಖಂಡ್ 4, ಪಶ್ಚಿಮ ಬಂಗಾಲ 12, ಚಂಡೀಘರ್ 2, ದೆಹಲಿ 8, ಜಮ್ಮು ಮತ್ತು ಕಾಶ್ಮೀರ 12, ಅಸ್ಸಾಂ ರೈಫಲ್ಸ್ 2, ಬಿಎಸ್‌ಎಫ್ 23, ಸಿಐಎಸ್‌ಎಫ್ 6, ಸಿಆರ್‌ಪಿಎಫ್ 9, ಐಟಿಬಿಪಿ 5, ಎಸ್‌ಎಸ್‌ಬಿ 6, ಎನ್‌ಡಿಆರ್‌ಎಫ್ 1 ಹಾಗೂ ಆರ್‌ಪಿಎಫ್ 9 ಸೇರಿದಂತೆ ಒಟ್ಟು 191 ಮಂದಿ ಹುತಾತ್ಮರಾಗಿದ್ದಾರೆ ಎಂದು ಮೈಸೂರು ಜಿಲ್ಲಾ ವರಿಷ್ಠಾಧಿಕಾರಿಗಳ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ದೀಪಾವಳಿಯಲ್ಲಿ ಹಸಿರು ಪಟಾಕಿಗಳನ್ನು ಬಳಸಿ

ಬೆಂಗಳೂರು, ಅ.20– ರಾಜ್ಯದೆಲ್ಲೆಡೆ ಸೋಮವಾರ ದೀಪಾವಳಿಯನ್ನು ಉತ್ಸಾಹದಿಂದ ಆಚರಿಸಲಾಗುತ್ತಿದ್ದು, ಜನರು ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸುತ್ತಿದ್ದಾರೆ. ಹೂವುಗಳು ಮತ್ತು ದೀಪಗಳಿಂದ ತಮ್ಮ ಮನೆಗಳನ್ನು ಅಲಂಕರಿಸಿದ್ದು, ಬೆಳಕಿನ ಹಬ್ಬದ ಅಂಗವಾಗಿ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸುತ್ತಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳನ್ನು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ವೇದಿಕೆ 'ಎಕ್ಸ್' ನಲ್ಲಿ ಸಿದ್ದರಾಮಯ್ಯ, ನಾಡಬಂಧು ಗಳಿಗೆ ದೀಪಾವಳಿ ಹಬ್ಬದ ಶುಭಾಶಯಗಳು. ಕತ್ತಲಿನಿಂದ ಬೆಳಕಿನ ಹಾದಿ ತೋರುವ ಈ ಹಬ್ಬವು ಸಮಾಜವನ್ನು ಬಾಧಿಸುತ್ತಿರುವ ದ್ವೇಷ, ಹಿಂಸೆ, ಅಸತ್ಯ, ಅಶಾಂತಿ, ಬಡತನ, ಅಜ್ಞಾನಗಳ ಅಂಧಕಾರವನ್ನು ಸರಿಸಿ, ಸ್ನೇಹ, ಸಹಬಾಳ್ವೆ, ಸತ್ಯ, ನೆಮ್ಮದಿ, ಸುಜ್ಞಾನದ ಬೆಳಕನ್ನು ಎಲ್ಲೆಡೆ ಬೆಳಗಿಸಲಿ ಎಂದು ಹಾರೈಸುತ್ತೇನೆ ಎಂದು ಹೇಳಿದರು. ಹಬ್ಬದ ಸಂಭ್ರಮದ ಜೊತೆಗೆ ಪರಿಸರ ಕಾಳಜಿಯನ್ನು ಮರೆಯದಿರಿ. ಹಸಿರು ಪಟಾಕಿಗಳನ್ನೇ ಬಳಸಿ, ಎಳೆಯ ಮಕ್ಕಳು ಪಟಾಕಿ ಸಿಡಿಸುವಾಗ ಹಿರಿಯರು ಅವರ ಬಗ್ಗೆ ಜಾಗ್ರತೆ ವಹಿಸಿ. ದೀಪಾವಳಿಯನ್ನು ಸಂಭ್ರಮದಿಂದಲೂ, ಸುರಕ್ಷಿತವಾಗಿಯೂ ಆಚರಿಸಿ ಎಂದು ವಿನಂತಿಸುತ್ತೇನೆ. ಮತ್ತೊಮ್ಮೆ, ನಿಮ್ಮೆಲ್ಲರಿಗೂ ದೀಪಾವಳಿಯ ಶುಭಾಶಯಗಳು ಎಂದು ಹೇಳಿದ್ದಾರೆ.

ನೇಮಕ

ಮೈಸೂರು, ಅ.20– ಮ್ಯಾನ್ಯುಯಲ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯಿದೆ ನಿಯಮಗಳನ್ವಯ ಉಪವಿಭಾಗದ ಮಟ್ಟದ ಜಾಗೃತಿ ಸಮಿತಿಗೆ ಬೋಗಾದಿಯ ರೂಪಾನಗರದ ನಿವಾಸಿ ಮಂಜುನಾಥ್ ಹಾಗೂ ಮಾನಸನಗರದ ನಿವಾಸಿ ಆರ್. ಅಂಜಲಿ ಅವರನ್ನು ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ.





11 ಮಂದಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಗಳಿಗೆ ಬಡ್ತಿ

ಮೈಸೂರು, ಅ.20(ಎಸ್‌ಪಿಎನ್)– ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆ ಯಿಂದ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ 11 ಮಂದಿ ಅಧಿಕಾರಿಗಳಿಗೆ ಪದೋನ್ನತಿಯನ್ನು ನೀಡಿ ಇಲಾಖೆಯ ಡಿಜಿ ಹಾಗೂ ಐಜಿ ಕಚೇರಿ ಆದೇಶಿಸಿದೆ.

ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಆರ್.ಶಿವಾನಂದಯ್ಯ ಅವರನ್ನು ಮದ್ದೂರು ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ, ಶಿವಾಜಿರಾವ್ ಪವಾರ್ ಚಾಮರಾಜ ನಗರ ಅಗ್ನಿ ಶಾಮಕ ಠಾಣಾಧಿಕಾರಿ ಹುದ್ದೆಗೆ, ಲಕ್ಷ್ಮೀಕಾಂತ ಯಾದವ್ ಅವರನ್ನು ಕೆ.ಆರ್.ನಗರ ಅಗ್ನಿಶಾಮಕ ಠಾಣಾಧಿ ಕಾರಿ ಹುದ್ದೆಗೆ, ಕೆ.ಬಿ.ಪರಮೇಶ್ ಅವರನ್ನು ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ ವರ್ಗಾವಣೆಗೊಳಿಸಿದ್ದು, ಒಟ್ಟು 11 ಮಂದಿಗೆ ಬಡ್ತಿ ನೀಡಿ ಡಿಜಿ ಮತ್ತು ಐಜಿ ಕಚೇರಿಯ ನಿರ್ದೇಶಕ ಟಿ.ಎನ್.ಶಿವಶಂಕರ್ ಆದೇಶಿಸಿದ್ದಾರೆ.

ವಿಕ್ರಾಂತ್ ಯುದ್ಧ ನೌಕೆಯಲ್ಲಿ ಸೈನಿಕರೊಂದಿಗೆ ಪ್ರಧಾನಿ ಮೋದಿ ದೀಪಾವಳಿ ಹಬ್ಬ ಆಚರಣೆ

● ಬ್ರಹ್ಮೋಸ್, ಆಕಾಶ್ ಕ್ಷಿಪಣಿಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಬಂದಿದೆ ● ಆಪರೇಷನ್ ಸಿಂಧೂರ ಕುರಿತು ಪ್ರಧಾನಿ ಮೆಚ್ಚುಗೆ



ಐಎನ್‌ಎಸ್ ವಿಕ್ರಾಂತ್ ಯುದ್ಧ ನೌಕೆಯಲ್ಲಿ ದೀಪಾವಳಿ ಆಚರಣೆ ವೇಳೆ ಸೈನಿಕನಿಗೆ ಸಿಹಿ ತಿನ್ನಿಸಿ ಸಂಭ್ರಮಿಸಿದ ಪ್ರಧಾನಿ ಮೋದಿ.

ನವದೆಹಲಿ, ಅ.20– ಭಾರತೀಯ ಸೇನೆಯ ಮೂರು ಸೇನಾಪಡೆಗಳ ಅಸಾಧಾರಣ ಸಮನ್ವಯದಿಂದಾಗಿ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ವಿರುದ್ಧ ಭಾರತವು ಗೆಲುವು ಸಾಧಿಸಲು ಸಾಧ್ಯವಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ಇಂದು ಪ್ರಧಾನಿ ನರೇಂದ್ರ ಮೋದಿ ಗೋವಾದಲ್ಲಿರುವ ಐಎನ್‌ಎಸ್ ವಿಕ್ರಾಂತ್ ಯುದ್ಧ ನೌಕೆಯಲ್ಲಿ ಸೈನಿಕರೊಂದಿಗೆ ದೀಪಾವಳಿ ಹಬ್ಬದ ಆಚರಣೆ ಮಾಡಿದರು. ಈ ವೇಳೆ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ ಮೋದಿ, ನಮ್ಮ ಸರ್ಕಾರವು ಭಾರತವನ್ನು ಜಗತ್ತಿನ ಅತಿದೊಡ್ಡ ಆಯುಧ ರಫ್ತು ದೇಶವನ್ನಾಗಿಸುವ ಗುರಿಯನ್ನು ಹೊಂದಿದೆ. 2014 ರಿಂದ 40ಕ್ಕೂ ಅಧಿಕ ಯುದ್ಧ ನೌಕೆ ಹಾಗೂ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಪ್ರತಿಯೊಬ್ಬರು ತಮ್ಮ ಕುಟುಂಬದೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸಲು ಬಯಸುತ್ತಾರೆ. ನೀವು ನನ್ನ ಕುಟುಂಬವಿದ್ದಂತೆ. ನಿಮ್ಮೊಂದಿಗೆ ಈ ಹಬ್ಬವನ್ನು ಆಚರಿಸುತ್ತಿರುವುದು ಅತೀವ ಸಂತಸ ತಂದಿದೆ. ನಾನು ನಿಮ್ಮೊಂದಿಗೆ ಉತ್ತಮ ಸಮಯವನ್ನು ಕಳೆದಿದ್ದೇನೆ ಎಂದು ಹೇಳಿದರು.

ಭಾರತದ ಮೊದಲ ಸ್ಥಳೀಯ ವಿಮಾನ ವಾಹಕ ನೌಕೆಯಾದ ಐಎನ್‌ಎಸ್ ವಿಕ್ರಾಂತ್ ಭಾರತದ ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಸ್ವದೇಶಿ ನಿರ್ಮಿತ ಐಎನ್‌ಎಸ್ ವಿಕ್ರಾಂತ್‌ನನ್ನು (ಯುದ್ಧನೌಕೆ) ದೇಶಕ್ಕೆ ಹಸ್ತಾಂತರಿಸುವಾಗ ವಿಕ್ರಾಂತ್ ವಿಶಾಲ, ಅಗಾಧ ಮತ್ತು ಭವ್ಯವಾದದ್ದು ಎಂದು ಹೇಳಿದ್ದೆ. ಇದು ಕೇವಲ ಯುದ್ಧನೌಕೆಯಲ್ಲ, 21ನೇ ಶತಮಾನದಲ್ಲಿ ಭಾರತದ ಕಠಿಣ ಪರಿಶ್ರಮ, ಪ್ರತಿಭೆ, ಸಾಮರ್ಥ್ಯ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಬ್ರಹ್ಮೋಸ್, ಆಕಾಶ್ ಕ್ಷಿಪಣಿಗಳಿಗೆ ಜಗತ್ತಿನಾದ್ಯಂತ ಬೇಡಿಕೆ: ಆಪರೇಷನ್ ಸಿಂಧೂರ್ ಸಮಯದಲ್ಲಿ ಬ್ರಹ್ಮೋಸ್ ಮತ್ತು ಆಕಾಶ್ ನಂತಹ ಕ್ಷಿಪಣಿಗಳು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿವೆ ಎಂದ ಪ್ರಧಾನಿ ಮೋದಿ, ಪ್ರಪಂಚದಾದ್ಯಂತ ಹಲವಾರು ದೇಶಗಳು ಈಗ ಈ ಕ್ಷಿಪಣಿಗಳನ್ನು ಖರೀದಿಸಲು ಆಸಕ್ತಿ ಹೊಂದಿವೆ ಎಂದರು.

ನಾನು ಮಿಲಿಟರಿ ಉಪಕರಣಗಳ ಗಮನಿಸುತ್ತಿದ್ದೆ. ಈ ದೊಡ್ಡ ಹಡಗುಗಳು, ಗಾಳಿಗಿಂತ ವೇಗವಾಗಿ ಚಲಿಸುವ ವಿಮಾನಗಳು, ಜಲಾಂತರ್ಗಾಮಿ ನೌಕೆಗಳು ಪ್ರಭಾವಶಾಲಿಯಾಗಿವೆ, ಆದರೆ ಅವುಗಳನ್ನು ನಿಜವಾಗಿಯೂ ಪ್ರಭಾವಶಾಲಿಯನ್ನಾಗಿಸಿರುವುದು ಯೋಧರ ಧೈರ್ಯ ಎಂದಿದ್ದಾರೆ.

ಜನರು ತಮ್ಮ ಕುಟುಂಬಗಳೊಂದಿಗೆ ದೀಪಾವಳಿಯನ್ನು ಆಚರಿಸಲು ಇಷ್ಟಪಡುತ್ತಾರೆ. ನನಗೂ ಹಾಗೆಯೇ, ಅದಕ್ಕಾಗಿಯೇ ನಾನು ಪ್ರತಿ ವರ್ಷ ನಮ್ಮ ರಾಷ್ಟ್ರವನ್ನು ಸುರಕ್ಷಿತವಾಗಿರಿಸುವ ನಮ್ಮ ಸೈನ್ಯ ಮತ್ತು ಭದ್ರತಾ ಸಿಬ್ಬಂದಿಯನ್ನು ಭೇಟಿಯಾಗುತ್ತೇನೆ. ಐಎನ್‌ಎಸ್ ವಿಕ್ರಾಂತ್ ಅನ್ನು ಫ್ಲ್ಯಾಗ್‌ಶಿಪ್‌ನೊಂದಿಗೆ ಭಾರತೀಯ ನೌಕಾ ಹಡಗುಗಳಲ್ಲಿ ಗೋವಾ ಮತ್ತು ಕಾರವಾರದ ಪಶ್ಚಿಮ ಸಮುದ್ರತೀರದಲ್ಲಿ ನಮ್ಮ ಧೈರ್ಯಶಾಲಿ ನೌಕಾ ಸಿಬ್ಬಂದಿಗಳಲ್ಲಿ ಒಬ್ಬರಾಗಲು ಸಂತೋಷವಾಗಿದೆ" ಎಂದು ಅವರು ಹೇಳಿದರು.

ಮೈಸೂರು ಮಿತ್ರ ಮಂಗಳವಾರ 21 ಅಕ್ಟೋಬರ್ 2025

ಸಂಪಾದಿಸಿದ ಒಂದಿಷ್ಟು ಹಣ ಸಮಾಜ ಸೇವೆಗೆ ಮೀಸಲಿಡಿ

ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ವಿ.ಗೋಪಾಲಗೌಡ



ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

ಮಂಡ್ಯ, ಅ.20– ಹಣ ಸಂಪಾದಿಸುವುದಷ್ಟೇ ಮುಖ್ಯವಲ್ಲ. ಅದನ್ನು ಸಮಾಜ ಸೇವೆಗೆ ಬಳಸುವ ಮೂಲಕ ಅಶಕ್ತರಿಗೆ ನೆರವಾಗಬೇಕು. ಸ್ವಾರ್ಥ ಬಿಟ್ಟು ನಿಸ್ವಾರ್ಥದಿಂದ ಸೇವೆ ಸಲ್ಲಿಸಿದಾಗ, ಸಮಾಜ ಅವರನ್ನು ಗೌರವಿಸುತ್ತದೆ. ಜೊತೆಗೆ ಉನ್ನತ ಸ್ಥಾನಮಾನಗಳನ್ನು ದೊರಕಿಸಿ ಕೊಡುತ್ತದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ವಿ.ಗೋಪಾಲಗೌಡ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಎಂ.ಎಂ.ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ರೈತರಿಗೆ ತೆಂಗಿನ ಸಸಿ ವಿತರಣೆ, ಒಂದು ಸಾವಿರ ಹೆಲ್ಮೆಟ್ ವಿತರಣೆ, 50ಕ್ಕೂ ಹೆಚ್ಚು ಸಂಸ್ಥೆಗಳಿಂದ ಉದ್ಯೋಗ ಮೇಳ, ನಗರದ ಪಶ್ಚಿಮ ಠಾಣೆ ಪೊಲೀಸರಿಗೆ ಜರ್ಕಿನ್ ವಿತರಣೆ, ಪ್ರಗತಿಪರ ರೈತರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ, ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಓರ್ವ ವ್ಯಕ್ತಿ ತಾನು ಬೆಳವಣಿಗೆಯಾಗುವುದು ಮುಖ್ಯವಲ್ಲ, ಬದಲಾಗಿ ಅಕ್ಕಪಕ್ಕದವರನ್ನು ಸಾಮಾಜಿಕವಾಗಿ ಮೇಲೆತ್ತುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

ಸ್ಪಟಿಕಪುರಿ ಮಹಾಸಂಸ್ಥಾನದ ಮಠದ ಶ್ರೀನಂಜಾವಧೂತ ಸ್ವಾಮೀಜಿ ಮಾತನಾಡಿ, ಗ್ರಾಪಂ ಮಾಜಿ ಅಧ್ಯಕ್ಷ ಮುದ್ದನಘಟ್ಟ ಮಹಾಲಿಂಗೇಗೌಡ ಅವರು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದು, ಇಂತಹ ಕಾರ್ಯಕ್ರಮಗಳನ್ನು ಮಾಡುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಮುದ್ದನಘಟ್ಟ ಮಹಾಲಿಂಗೇಗೌಡ ಮಾತನಾಡಿ, ನನ್ನ ಜೀವನದಲ್ಲಿ ಸಮಾಜ ಸೇವೆಯನ್ನು ಮುಖ್ಯ ಗುರಿಯಾಗಿಸಿಕೊಂಡಿದ್ದೇನೆ. ಅದನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದೇನೆ. ಅದಕ್ಕೆ ಸಮಾಜದ ಎಲ್ಲಾ ವರ್ಗದ ಜನರಿಂದ ನನಗೆ ಉತ್ತಮ ಸಹಕಾರ ದೊರೆಯುತ್ತಿದೆ. ಉದ್ಯಮದಲ್ಲಿ ಬೆಳವಣಿಗೆ ಕಾಣುವ ಜೊತೆಗೆ ಸಮಾಜಕ್ಕೆ ಏನಾದರೂ ಸೇವೆ ಸಲ್ಲಿಸಬೇಕೆಂಬ ಹಂಬಲದೊಂದಿಗೆ ರೈತರು, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ನಿರುದ್ಯೋಗಿಗಳು ಸೇರಿದಂತೆ ಸಮಾಜದ ಹಲವರಿಗೆ ನನ್ನಿಂದಾದ ಸಹಾಯ ಮಾಡುತ್ತಿದ್ದೇನೆ. ಈ ಸೇವೆಯ ಹಿಂದೆ ಯಾವುದೇ ಸ್ವಾರ್ಥ ಇಲ್ಲ ಎಂದು ಹೇಳಿದರು.

ಸಮಾರಂಭದಲ್ಲಿ ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ, ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸೇರಿದಂತೆ ಅನೇಕ ಮಠಾಧೀಶರು ಭಾಗವಹಿಸಿದ್ದರು.

ಕಾಂಕ್ರೀಟ್ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ಕಾಮಗಾರಿಗೆ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

ನಾಗಮಂಗಲ, ಅ.20– ತಾಲೂಕಿನ ಬೆಳ್ಳೂರು ಹೋಬಳಿ ಚಾಮಲಾಪುರ ಗ್ರಾಪಂ ವ್ಯಾಪ್ತಿಯ ಕನ್ನಘಟ್ಟ ಗ್ರಾಮದಲ್ಲಿ ಹೇಮಾವತಿ ಇಲಾಖೆಯ 2.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಸಚಿವರು, ಚುನಾವಣೆ ವೇಳೆ ಗ್ರಾಮಸ್ಥರಿಗೆ ಕೊಟ್ಟಿದ್ದ ಭರವಸೆಯಂತೆ ತಾಲೂಕಿನಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ರಸ್ತೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಕಲ್ಪಿಸುವ ಜೊತೆಗೆ ತಾಲೂಕಿನ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಲ್ಪಿಸಲಾಗುವುದು ಎಂದರು.

ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ರಸ್ತೆಗಳು ಹಾಳಾಗಿವೆ. ಎಲ್ಲಾ ಹಳ್ಳಿಗಳಲ್ಲೂ ಗುಣಮಟ್ಟದ ರಸ್ತೆ ನಿರ್ಮಿಸಬೇಕೆಂಬುದು ನನ್ನ ಉದ್ದೇಶವಾಗಿದ್ದು, ಎಲ್ಲಾ ಕಾಮಗಾರಿಗಳನ್ನು ಒಂದೇ ವೇಳೆಗೆ ಮಾಡಲು ಸಾಧ್ಯವಿಲ್ಲ. ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಂಡು ಮುಂದಿನ 2 ವರ್ಷದೊಳಗೆ ಬಹುತೇಕ ಹಳ್ಳಿಗಳ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಈ ವೇಳೆ ಮುಖಂಡರಾದ ವೆಂಕಟೇಶ್, ಶಿವಮೂರ್ತಿ, ಕುಮಾರ್, ನವೀನ, ಯೋಗೇಶ್, ಕಿರಣ್ ಕುಮಾರ್, ಧನರಾಜ್, ದೇವರಾಜ್, ದೇವರಾಜು ಇತರರಿದ್ದರು.

ನಾಳೆ ಶ್ರೀಲಕ್ಷ್ಮಿದೇವಿ ಜಾತ್ರಾ ಮಹೋತ್ಸವ

ಪಾಂಡವಪುರ, ಅ.20– ದೀಪಾವಳಿ ಹಬ್ಬದ ಅಂಗವಾಗಿ ಅರಳಕುಪ್ಪೆ ಸಮೀಪದ ಚಾಗಟೆ ಮಲ್ಲೇನಹಳ್ಳಿ ಗ್ರಾಮದಲ್ಲಿ ಅ.22 ರಂದು ಶ್ರೀಲಕ್ಷ್ಮಿದೇವಿ ಜಾತ್ರಾ ಮಹೋತ್ಸವ ನಡೆಯಲಿದೆ. ಶ್ರೀಲಕ್ಷ್ಮಿದೇವಿ ಜಾತ್ರಾ ಮಹೋತ್ಸವದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅಂದು ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದ್ದು, ಭಕ್ತರಿಗೆ ಅನ್ನ ಸಂತರ್ಪಣೆಯನ್ನು ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಜಾತ್ರಾ ಮಹೋತ್ಸವಕ್ಕೆ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಭಕ್ತರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಶ್ರೀಲಕ್ಷ್ಮಿದೇವಿ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಶ್ಯಾದನಹಳ್ಳಿ ಪಿ.ಚಲುವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಂಕೇರಮ್ಮ ದೇವಿಗೆ ವಿಶೇಷ ಪೂಜೆ



ಕೆಂಕೇರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಕಿಕ್ಕೇರಿ, ಅ.20– ಇಲ್ಲಿಗೆ ಸಮೀಪದ ಮಾದಾಪುರದ ಗ್ರಾಮದೇವತೆ ಕೆಂಕೇರಮ್ಮ ದೇವಿಗೆ ಸೋಮವಾರ ದೀಪಾವಳಿ ಹಬ್ಬದ ನರಕ ಚತುರ್ದಶಿ ವಿಶೇಷ ಪೂಜೆಗಳು ಜರುಗಿದವು.

ಹಬ್ಬದ ಅಂಗವಾಗಿ ಮಾದಾಪುರ ಹಾಗೂ ಮಾದಾಪುರ ಕೊಪ್ಪಲು ಗ್ರಾಮಗಳ ಮಧ್ಯ ಭಾಗದಲ್ಲಿರುವ ಕೆಂಕೇರಮ್ಮ ದೇವಿ ದೇಗುಲವನ್ನು ಕೆಂಕೇರಮ್ಮ ಚಾರಿಟಬಲ್ ಕಲ್ಚರಲ್ ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ವಿಪ್ರ ವೃಂದದವರು ತಳಿರು ತೋರಣ, ವಿವಿಧ ಪುಷ್ಪಗಳಿಂದ ಅಲಂಕರಿಸಿದರು. ಮಹಿಳೆಯರು ರಂಗೋಲಿ ಬಿಡಿಸಿ ಅಂದ ಹೆಚ್ಚಿಸಿದರು. ದೇಗುಲ ಒಳ, ಹೊರಾಂಗಣ, ಅಶ್ವತ್ಥ ವೃಕ್ಷದ ಕಟ್ಟೆಯನ್ನು ಗೋಮಯ, ಗಂಧೋದಕ, ಪಂಚಗವ್ಯಗಳಿಂದ ಶುಚಿಗೊಳಿಸಿದ ಬಳಿಕ ದೇವಿಗೆ ಪಂಚಾಮೃತ ಅಭಿಷೇಕ ನೆರವೇರಿಸಿ, ಮೂಲದೇವಿ, ಉತ್ಸವ ಮೂರ್ತಿಗೆ ವಸ್ತ್ರಾಭರಣ ತೊಡಿಸಲಾಯಿತು. ಇದೇ ವೇಳೆ ಕುಂಕುಮಾರ್ಚನೆ ನಡೆಯಿತು. ಮಹಿಳೆಯರು ಲಲಿತಾ ಸಹಸ್ರನಾಮ ಪಠಿಸಿದರು. ಗಣಪತಿ ಹೋಮ, ನವಗ್ರಹ ಹೋಮ ಸೇರಿದಂತೆ ಮತ್ತಿತರ ಹೋಮ ಹವನಾದಿಗಳು ಸಾಂಘವಾಗಿ ನಡೆಯಿತು.

ದೀಪಾವಳಿಯ ಬಲಿಪಾಡ್ಯಮಿ ಮರುದಿನದಿಂದ ಒಂದು ತಿಂಗಳು ದೇಗುಲ ಮುಚ್ಚಲ್ಪಡುವುದರಿಂದ ಗ್ರಾಮವಲ್ಲದೆ ಸುತ್ತಮುತ್ತಲ ಗ್ರಾಮ ಹಾಗೂ ವಿವಿಧೆಡೆಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪೂಜಾ ಕಾರ್ಯ ಕೈಗೊಂಡು ದೇವರ ಕೃಪೆಗೆ ಪಾತ್ರರಾದರು. ಇದೇ ವೇಳೆ ಭಕ್ತರಿಗಾಗಿ ವಿಪ್ರ ವೃಂದದಿಂದ ಸಾಮೂಹಿಕ ಭೋಜನ ಹಮ್ಮಿಕೊಳ್ಳಲಾಗಿತ್ತು.

ಆಸ್ಟಿಯೊಪೊರೋಸಿಸ್‌ನ ಜಾಗತಿಕ ಪರಿಣಾಮ ಗಮನಾರ್ಹ

ಥೈರಾಯ್ಡ್ ಮತ್ತು ಡಯಾಬಿಟಿಕ್ ರೋಗ ತಜ್ಞೆ ಡಾ.ಕೆ.ಬಿ.ಶ್ರುತಿ



ಕಾರ್ಯಕ್ರಮವನ್ನು ಥೈರಾಯ್ಡ್ ಮತ್ತು ಡಯಾಬಿಟಿಕ್ ರೋಗ ತಜ್ಞೆಡಾ.ಕೆ.ಬಿ.ಶ್ರುತಿ ಉದ್ಘಾಟಿಸಿದರು.

ಮಂಡ್ಯ, ಅ.20– ಆಸ್ಟಿಯೊಪೊರೋಸಿಸ್‌ನ ಜಾಗತಿಕ ಪರಿಣಾಮ ಗಮನಾರ್ಹವಾಗಿದ್ದು, ಮಹಿಳೆಯರಲ್ಲಿ ಅತಿ ಹೆಚ್ಚು ಕಾಣಿಸಿಕೊಂಡು ಬಾಧಿಸುತ್ತಿದೆ ಎಂದು ಥೈರಾಯ್ಡ್ ಮತ್ತು ಡಯಾಬಿಟಿಕ್ ರೋಗ ತಜ್ಞೆ ಡಾ.ಕೆ.ಬಿ.ಶ್ರುತಿ ತಿಳಿಸಿದರು.

ಇಲ್ಲಿನ ಅಶೋಕ ನಗರದ ಅಸೋಸಿಯೇಷನ್ ಆಫ್ ಅಲಯನ್ಸ್ ಸಂಸ್ಥೆ ಇಂಟರ್‌ನ್ಯಾಷನಲ್ ಮಂಡ್ಯ, ಆಕೃತಿ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ವಿಶ್ವ ಆಸ್ಟಿಯೊಪೊರೋಸಿಸ್ ದಿನ ಪ್ರಯುಕ್ತ ಮೂಳೆ ದ್ರವ್ಯರಾಶಿ ಕಡಿಮೆಯಾಗುವುದು ಮತ್ತು ಮೂಳೆ ಅಂಗಾಂಗಗಳ ನಷ್ಟದಿಂದ ಕಾಯಿಲೆ ಹೆಚ್ಚಾಗುವುದು, ಅರಿವು ಮತ್ತು ಉಚಿತ ತಪಾಸಣೆ ಹಾಗೂ ವೈದ್ಯರೊಡನೆ ಸಮಾಲೋಚನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಟ್ಟು ನಿಂತ ಮಹಿಳೆಯರ ಮಂಡಿ ನೋವು, ಮೂಳೆ ದ್ರವ್ಯರಾಶಿ ಸಮಸ್ಯೆ ಹೆಚ್ಚಾಗಿ ಕಾಣಿಸುತ್ತಿದೆ. 50 ವರ್ಷ ಮೇಲ್ಪಟ್ಟ ಮಹಿಳೆಯರು ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಕಾಲು ಜಾರಿ ಬಿದ್ದರೂ ಮೂಳೆ ಮುರಿತವಾಗುತ್ತದೆ. ಹೆಚ್ಚು ಮಹಿಳೆಯರು ಈ ಸಮಸ್ಯೆ ಎದುರಿಸುತ್ತಿದ್ದಾರೆ ಎಂದರು.

ಮೂಳೆಗಳಿಗೆ ಸಮೃದ್ಧ ಪೋಷಕಾಂಶ ನೀಡುವಂತಹ ಕ್ಯಾಲ್ಸಿಯಂ, ವಿಟಮಿನ್ ಡಿ ಮತ್ತು ಪ್ರೋಟಿನ್‌ಯುಳ್ಳ ಆಹಾರ ಸೇವಿಸುವುದು ಅಗತ್ಯ. ಜೊತೆಗೆ ದೇಹಕ್ಕೆ ಅಗತ್ಯವಾದ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದರಿಂದ ದೇಹಕ್ಕೆ ಕ್ಯಾಲ್ಸಿಯಂ ಲಭ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಆರೋಗ್ಯಯುತ ಜೀವನ ಶೈಲಿ ಅಗತ್ಯ. ಧೂಮಪಾನ, ಮದ್ಯಸೇವನೆಯಿಂದ ದೂರವಾಗಿ ಆರೋಗ್ಯಯುತ ಆಹಾರ ನಿರ್ವಹಣೆ ಅವಶ್ಯವಾಗಿದೆ ಎಂದರು.

ಅಂತರಾಷ್ಟ್ರೀಯ ಅಲಯನ್ಸ್ ಸಂಸ್ಥೆ ಸೌತ್ ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಕೆ.ಟಿ.ಹನುಮಂತು ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆ ಕೂಡ ಆಸ್ಟಿಯೊಪೊರೋಸಿಸ್‌ನ ಬಗ್ಗೆ ಜಾಗೃತಿ ಮೂಡಿಸಲು ಕೈ ಜೋಡಿಸಿದೆ. 1999ರಲ್ಲಿ ಆರಂಭಿಕ ಪತ್ತೆ ಎಂಬ ಧ್ಯೇಯವಾಕ್ಯದಲ್ಲಿ ಆಸ್ಟಿಯೊಪೊರೋಸಿಸ್ ಅನ್ನು ಅದರ ಆರಂಭಿಕ ಹಂತದಲ್ಲಿ ಗುರುತಿಸುವ ಮಹತ್ವ ಸಾರಿದೆ ಎಂದರು.

ಅಂಕಿ ಅಂಶಗಳ ಪ್ರಕಾರ 50 ವರ್ಷಕ್ಕಿಂತ ಮೇಲ್ಪಟ್ಟ ಮೂವರಲ್ಲಿ ಒಬ್ಬರು ಮತ್ತು ಐವರು ಪುರುಷರಲ್ಲಿ ಒಬ್ಬರು ಈ ಸಮಸ್ಯೆಗೆ ಒಳಗಾಗುತ್ತಾರೆ. 2050ರ ವೇಳೆಗೆ ಸೊಂಟ ಮುರಿತದಂತಹ ಸಮಸ್ಯೆಗಳ ಅಂಕಿ ಅಂಶಗಳು ಆಘಾತಕಾರಿಯಾಗಲಿದೆ ಎಂದು ವಿಶ್ವಾರೋಗ್ಯ ಸಂಸ್ಥೆ ತಿಳಿಸಿದೆ ಎಂದರು.

ಪ್ರತಿವರ್ಷ 8.9 ದಶಲಕ್ಷ ಮಂದಿ ಮೂಳೆ ಮುರಿತಕ್ಕೆ ಒಳಗಾಗುತ್ತಿದ್ದು, ಪ್ರತಿ ಸೆಂಕೆಂಡಿಗೆ ಒಬ್ಬರು ಈ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಜಾಗತಿಕವಾಗಿ 500 ಮಿಲಿಯನ್ ಪುರುಷರು ಮತ್ತು ಮಹಿಳೆಯರು ಮೂಳೆ ಅಸ್ವಸ್ಥತೆಗೆ ಒಳಗಾಗಿದ್ದಾರೆ ಎಂದರು.

ಆತಂಕಕಾರಿ ಅಂಶವೆಂದರೆ ಶೇ.80 ರಷ್ಟು ರೋಗಿಗಗಳಿಗೆ ಆಸ್ಟಿಯೊಪೊರೋಸಿಸ್‌ಗೆ ರೋಗ ನಿರ್ಣಯ ಚಿಕಿತ್ಸೆ ನೀಡುವುದಿಲ್ಲ. ಇದು ಈ ಪರಿಸ್ಥಿತಿಯನ್ನು ಮತ್ತಷ್ಟು ಕೆಟ್ಟದಾಗಿಸುತ್ತಿದೆ. ಈ ಹಿನ್ನೆಲೆಯಲ್ಲಿ ಈ ರೋಗದ ಪರಿಣಾಮಕಾರಿ ನಿರ್ವಹಣೆ ಅಗತ್ಯವಾಗಿದೆ ಎಂದರು. ಈ ವೇಳೆ ಅಲಯನ್ಸ್ ಸಂಸ್ಥೆ ರಾಜ್ಯಪಾಲ ಮಾದೇಗೌಡ, 2ನೇ ಉಪರಾಜ್ಯಪಾಲ ಚಂದ್ರಶೇಖರ್, ವೈದ್ಯರಾದ ಡಾ.ಸೋನಾಲಿ ಉಚ್ಚಿಲ್, ಡಾ.ಅವಿನಾಶ್, ಡಾ.ಸುಹಾಸ್, ಜೋಗಿಗೌಡ, ರತ್ನಮ್ಮ, ಪ್ರಮೀಳಕುಮಾರಿ ಸೇರಿದಂತೆ ಮತ್ತಿತರರಿದ್ದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಂಡ್ಯ, ಅ.20– ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದ ಕ್ರೀಡಾ ಇಲಾಖೆಯಿಂದ ಕ್ರೀಡಾ ಸಾಧನೆಗೆ ಸಂಬಂಧಪಟ್ಟಂತೆ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಸಾಧಕರಿಗೆ 2025ನೇ ಸಾಲಿನ ಅರ್ಜುನ ಪ್ರಶಸ್ತಿ, ರಾಷ್ಟ್ರೀಯ ಕ್ರೀಡಾ ಪೋಷಕ ಪ್ರಶಸ್ತಿ, ದ್ರೋಣಾಚಾರ್ಯ ಪ್ರಶಸ್ತಿ ಹಾಗೂ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ನೀಡಲಾಗುತ್ತಿದ್ದು, ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.28 ಕೊನೆ ದಿನ. ಹೆಚ್ಚಿನ ಮಾಹಿತಿಗೆ sportsawards-moyas@gov.in (Tel NO.01123387432 9.00am to 5.30pm,) ಮತ್ತು (Toll free No. 1800-2025155 1800-258-5155 8.00am to 8.00pm) ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಶಿಕ್ಷಕರ ನೇಮಕ ಪ್ರಕ್ರಿಯೆ ಆರಂಭ

ಕಂಪ್ಯೂಟರ್ ಕಲಿಕೆ ಆರಂಭಿಸಲಾಗುವುದು ಎಂದು ತಿಳಿಸಿದ್ದಾರೆ. ಶಾಲಾ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಚಿಂತೆ ನಡೆದಿದೆ. ಇನ್ನು ಮುಂದೆ ಕಟ್ಟಡದ ನಿರ್ಮಾಣ ಮಾಡಿದವರು ಅದರ ಸುರಕ್ಷತೆ ಮತ್ತು ನಿರ್ವಹಣೆ ಹೊಣೆಗಾರಿಕೆ ನಿಭಾಯಿಸಬೇಕು. ಶಿಥಿಲಗೊಂಡಿರುವ ಕಟ್ಟಡಗಳ ಅಂಕಿ– ಅಂಶಗಳನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಎರಡು ವಾರಗಳ ಒಳಗಾಗಿ ಸಂಪುಟದಲ್ಲಿ ಏಕಗವಾಕ್ಷಿ ಪದ್ಧತಿಗೆ ಅನುಮೋದನೆ ಪಡೆದು ಕಟ್ಟಡಗಳನ್ನು ನಿಭಾಯಿಸಲಾಗುವುದು.

ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ವೇಳೆಯಲ್ಲಿ ಶೇ.33ರಷ್ಟು ಅಂಕದೊಂದಿಗೆ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸುವ ನಿರ್ಧಾರಕ್ಕೆ 708 ಮಂದಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನಿನ್ನೆಯಿಂದಲೇ ಶಿಕ್ಷಕರ ಬಳಕೆ ನಿಲ್ಲಿಸಲಾಗಿದೆ. ಶಿಕ್ಷಕರ ಹೊರತುಪಡಿಸಿ ಇತರೆ ಸರ್ಕಾರಿ ಅಧಿಕಾರಿಗಳನ್ನು ಬಳಸಿಕೊಂಡು ಸಮೀಕ್ಷೆ ಮುಂದುವರಿಸಲಾಗುವುದು. ಸಮೀಕ್ಷೆಯಿಂದ ಶೈಕ್ಷಣಿಕ ಚಟುವಟಿಕೆಗೆ ಯಾವುದೇ ತೊಂದರೆಯಾಗುವುದಿಲ್ಲ. ಕಡ್ಡಾಯ ಶಿಕ್ಷಣ ಕಾಯ್ದೆಯಡಿ 220 ಸರ್ಕಾರಿ ದಿನಗಳಿಗೆ ಅವಕಾಶ ಇದೆ. ನಮ್ಮ ಕೈಯಲ್ಲಿ ಈಗಲೂ 242 ಶಾಲಾ ದಿನಗಳಿವೆ ಎಂದರು. ಸಮೀಕ್ಷೆಯಲ್ಲಿ ಭಾಗವಹಿಸದೇ ಇದ್ದವರನ್ನು ಹೊರತು ಪಡಿಸಿ, ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇ.97ರಷ್ಟು ಜನರಿಗೆ ಸರ್ಕಾರದ ಸೌಲಭ್ಯಗಳು ಹಾಗೂ ನಿಯಮಾವಳಿಗಳು ರೂಪುಗೊಳ್ಳುತ್ತವೆ. ನ್ಯಾಯಾಲಯ ಬಲವಂತಾಗಿ ಮಾಹಿತಿ ಪಡೆಯಬೇಡಿ ಎಂದು ಹೇಳಿದೆ. ನಾವು ಯಾರನ್ನೂ ಒತ್ತಾಯ ಪಡಿಸಿ ಸಮೀಕ್ಷೆ ನಡೆಸುತ್ತಿಲ್ಲ, ಶೇ.95ರಷ್ಟು ಜನ ಆಸಕ್ತಿಯಿಂದ ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ. ಅವರಿಗೆ ಅನ್ಯಾಯವಾಗ ಬಾರದು, ಮುಂದಿನ ದಿನಗಳಲ್ಲಿ ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳು ದೊರೆಯಬೇಕಿದೆ ಎಂದರು.

11ಕ್ಕೂ ಅಧಿಕ ಮಂದಿ ಅಸ್ವಸ್ಥ

ಎಂದಿನಂತೆ ಕಾರ್ಯಕ್ರಮ ಮುಗಿದ ಬಳಿಕ ಊಟ ಮತ್ತು ಗಿಫ್ಟ್ ಕೊಡುವುದು ವಾಡಿಕೆ. ಆದರೆ ಸಿಎಂ ಬಂದ ಬಳಿಕ ಬಳಿಕ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರೂ ಮಾತನಾಡಿದರು. ಆನಂತರ ಸಿಎಂ ಸಿದ್ದರಾಮಯ್ಯ ಭಾಷಣ ಮುಗಿಸಿದಾಗ ಮೂರು ಗಂಟೆ ಕಳೆದಿತ್ತು. ದೂರ ದೂರದಿಂದ ಬಂದಿದ್ದ ಜನರನ್ನು ಸಭಾಂಗಣ ಪ್ರವೇಶ ಸಂದರ್ಭದಲ್ಲಿ ಜೊತೆಗೆ ನೀರಿನ ಬಾಟಲ್ ಒಯ್ಯುವುದಕ್ಕೂ ಪೊಲೀಸರು ಬಿಟ್ಟಿರಲಿಲ್ಲ. ಹೀಗಾಗಿ ಶುಗರ್, ಬಿಪಿ ತೊಂದರೆ ಇದ್ದವರು ಮಧ್ಯಾಹ್ನ ಕಳೆದಾಗ ಅಸ್ವಸ್ಥರಾಗಿದ್ದರು. ತಕ್ಷಣ ಪೊಲೀಸರು ಆಂಬುಲೆನ್ಸ್‌ನಲ್ಲಿ ಸರ್ಕಾರಿ ಆಸ್ಪತ್ರೆಗೆ ರವಾನಿಸಿದರು. ಮೂರು ಗಂಟೆಯ ನಂತರ ಊಟ, ಗಿಫ್ಟ್ ಕೊಡಲು ಆರಂಭಿಸಿದಾಗ ಮತ್ತೆ ನೂಕುನುಗ್ಗಲು ಉಂಟಾಯಿತು. ಹಸಿದಿದ್ದವರು ತಾಮುಂದು, ನಾಮುಂದು ಎನ್ನುವಂತೆ ನುಗ್ಗತೊಡಗಿದ್ದು ಪೊಲೀಸರಿಗೂ ನಿಯಂತ್ರಣ ಮಾಡಲಾಗದ ಸ್ಥಿತಿಯಾಗಿತ್ತು. ಇದೇ ವೇಳೆ ಮಕ್ಕಳನ್ನು ಕರೆತಂದವರು ದಿಕ್ಕಾಪಾಲಾದರು. ಹಲವು ತಾಯಂದಿರು ಮಕ್ಕಳು ಕಾಣದೆ ಪ್ರಯಾಸಪಟ್ಟರು. ಮುಖ್ಯಮಂತ್ರಿ ಸ್ಥಳದಿಂದ ನಿರ್ಗಮಿಸುತ್ತಲೇ 3.30ರ ಸುಮಾರಿಗೆ ಭಾರೀ ಮಳೆಯಾಗಿದ್ದರಿಂದ ಜನರು ಶೀಟ್ ಹಾಕಿದ್ದ ಸಭಾಂಗಣದಿಂದ ಹೊರಕ್ಕೆ ಹೋಗಲಾಗದೆ ಪರದಾಡಿದರು.

ಇದರ ನಡುವೆಯೂ ಊಟ ಮತ್ತು ಗಿಫ್ಟ್ ಪಡೆಯಲು ಜನರು ಸರತಿ ಸಾಲಿನಲ್ಲಿ ನಿಂತಿರುವಾಗಲೇ ನೂಕುನುಗ್ಗಲು, ತಳ್ಳಾಟ ಉಂಟಾಗಿದ್ದು, ಪೊಲೀಸರು ಲಾಠಿ ಬೀಸಿದರಲ್ಲದೆ, ಒಮ್ಮೆ ಗಿಫ್ಟ್ ಕೊಡುವುದನ್ನೇ ನಿಲ್ಲಿಸಿದ್ದರು. ನೂಕಾಟ ತಪ್ಪಿಸಲು ಪೊಲೀಸರು ಲಾಠಿ ಬೀಸಿದ್ದರಿಂದ ಕೆಲವರು ಏಟಿನ ರುಚಿ ಕಂಡರು. ಸಿಎಂ ನಿರ್ಗಮಿಸುವ ಮೊದಲೇ ಅಸ್ವಸ್ಥಕ್ಕೀಡಾದವರನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಯಿತು. ಪೊಲೀಸರ ಮಾಹಿತಿ ಪ್ರಕಾರ, ಊಟ ತಡವಾಗಿದ್ದರಿಂದ ಡಿಹೈಡ್ರೇಶನ್ ಉಂಟಾಗಿ ವೃದ್ಧ ಮಹಿಳೆಯರು ಅಸ್ವಸ್ಥರಾಗಿದ್ದಾರೆ. 8 ಮಂದಿ ಮಹಿಳೆಯರು ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ಮೂವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಫ್ಲೂಯಿಡ್ಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಾರ್ಥನೆಗೂ ಅನುಮತಿ ಅಗತ್ಯ

ಹಸ್ತಕ್ಷೇಪ ಮಾಡುವುದಿಲ್ಲ: ಪಥಸಂಚಲನ ನಡೆಸಲು ಹೈಕೋರ್ಟ್ ಆದೇಶದಂತೆ ಆರ್‌ಎಸ್‌ಎಸ್ ಹೊಸದಾಗಿ ಅರ್ಜಿ ಸಲ್ಲಿಸಲಿ. ಅನುಮತಿ ನೀಡುವ ಕುರಿತು ಜಿಲ್ಲಾಡಳಿತ ತೀರ್ಮಾನ ಮಾಡಲಿದೆ. ನಾವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಸತ್ಯೇಂದ್ರ ಸಾಹ್ 2010ರ ಚುನಾವಣೆಯಲ್ಲಿ ಕಾಂಗ್ರೆಸ್ (ಜೆ) ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದರು. ಇದಕ್ಕೂ ಮುನ್ನ ತಮ್ಮ ಪತ್ನಿಯನ್ನ ಸಸಾರಂ ಮುನ್ಸಿಪಲ್ ಕಾರ್ಪೊರೇಷನ್‌ನ ಮೇಯರ್ ಚುನಾವಣೆಯಲ್ಲಿ ಕಣಕ್ಕಿಳಿಸಿದ್ದರು. ಸಾಹ್ ಪ್ರಭಾವ ಗಮನಿಸಿದ್ದ ಆರ್‌ಜೆಡಿ ಈ ಬಾರಿ ಹಾಲಿ ಶಾಸಕ ರಾಜೇಶ್‌ಗುಪ್ತಾಗೆ ಕೊಕ್ ನೀಡಿ ಸತ್ಯೇಂದ್ರ ಸಾಹಾ ಅವರನ್ನ ಕಣಕ್ಕಿಳಿಸಿತ್ತು.

ಭಾರೀ ಪೊಲೀಸ್ ಭದ್ರತೆ ನಡುವೆ ಬಂಧನ: ನಾಮಪತ್ರ ಸಲ್ಲಿಸಿದ ಬಳಿಕ ಭಾರೀ ಪೊಲೀಸ್ ಭದ್ರತೆಯ ನಡುವೆ ಸಾಹಾ ಅವರನ್ನ ಬಂಧಿಸಲಾಗಿದೆ. ಇದರಿಂದ ಆರ್‌ಜೆಡಿ ನಾಯಕರು ಆಕ್ರೋಶ ಹೊರಹಾಕಿದ್ದಾರೆ. ಆಡಳಿತ ಪಕ್ಷ ನಡೆಸುತ್ತಿರುವ ರಾಜಕೀಯ ಪಿತೂರಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ.

ರೈತರು 4 ಕೋಟಿಗೆ ಡಿಮ್ಯಾಂಡ್

ಸಭೆಯಲ್ಲಿ ಪಾಲ್ಗೊಂಡಿದ್ದ ಕೋಚನಹಳ್ಳಿ ಗ್ರಾಮದ ರೈತ ಶಿವಣ್ಣ ಅವರು 'ಮೈಸೂರು ಮಿತ್ರ'ಗೆ ತಿಳಿಸಿದರು.

ಯಾವುದೇ ಕಾರಣಕ್ಕೂ ಇದಕ್ಕೆ ನಮ್ಮ ಸಮ್ಮತಿಯಿಲ್ಲ. ಸರ್ಕಾರ ನಮಗೆ 1.25 ಕೋಟಿ ಕೊಡುವುದು ಬೇಡ, ನಾವು ಜಮೀನು ಬಿಟ್ಟು ಕೊಡುವುದು ಬೇಡ. ನಮ್ಮ ಊರಿನ ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಿ ಎಂದು ತಿಳಿಸಿದೆವು ಎಂದು ಹೇಳಿದರು.

ನಿಮ್ಮ ಬೇಡಿಕೆ ಬಗ್ಗೆ ನಮ್ಮ ತಂದೆಯವರಿಗೆ ತಿಳಿಸುತ್ತೇನೆ. ಅವರು ಏನು ತೀರ್ಮಾನ ಮಾಡುತ್ತಾರೋ ನೋಡೋಣ ಎಂದು ವಿಧಾನಪರಿಷ್ ಸದಸ್ಯ ಡಾ.ಯತೀಂದ್ರ ಭರವಸೆ ನೀಡಿದರು ಎಂದು ಶಿವಣ್ಣ ಹೇಳಿದರು.

ಯತೀಂದ್ರ ನಡೆಸಿದ ಸಭೆಯಲ್ಲಿ ಕೋಚನಹಳ್ಳಿ ಗ್ರಾಮದ ಕೆ.ಎಂ.ಪುಟ್ಟಸ್ವಾಮಿ, ಮಾದೇಗೌಡ, ಮಾದಪ್ಪ, ಚೇತನ್, ಶಿವರಾಜ್, ಸ್ವಾಮಿ, ಕುಮಾರ್, ಮಹೇಶ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಭಾರೀ ಲಾಭಕ್ಕೆ ಪ್ಲಾನ್

ಕೈಗಾರಿಕಾ ಉದ್ದೇಶಕ್ಕೆಂದು ಪಡೆದಿರುವ ಭೂಮಿಯನ್ನು ರಿಯಲ್ ಎಸ್ಟೇಟ್ ವ್ಯವಹಾರದ ಮೂಲಕ ಲಾಭ ಮಾಡಲು ಮುಂದಾಗಿದ್ದಾರೆ. ಇದೇ ಕಡಕೊಳದಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ ನಿರ್ಮಾಣಕ್ಕೆ ಸರ್ಕಾರ ರೈತರಿಂದ 250 ಎಕರೆ ಭೂಮಿ ಸ್ವಾಧೀನ ಮಾಡಿಕೊಂಡಿದೆ.

ಇಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ ಮಾಡಲು ಕೇನ್ಸ್ ಟೆಕ್ನಾಲಜಿ ಈಗಾಗಲೇ ಸರ್ಕಾರದ ಜೊತೆ ಒಪ್ಪಂದ ಕೂಡ ಮಾಡಿಕೊಂಡಿದೆ. ಸೆಮಿ ಕಂಡಕ್ಟರ್ ಅಸೆಂಬ್ಲಿ ಮತ್ತು ಟೆಸ್ಟಿಂಗ್ (ಒಎಸ್‌ಎಟಿ) ಘಟಕ ಸ್ಥಾಪಿಸಿ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ (ಪಿಸಿಬಿ) ತಯಾರಿಸಲು ನಿರ್ಧರಿಸಿದೆ. ಆದರೆ ಕೇನ್ಸ್ ಟೆಕ್ನಾಲಜಿ ಕಡಕೊಳದಲ್ಲಿ ಸೆಮಿ ಕಂಡಕ್ಟರ್ ಸ್ಥಾಪಿಸುವ ಬದಲು ಆಂಧ್ರ ಪ್ರದೇಶಕ್ಕೆ ಹೋಗಿದೆ. ಭೂಮಿ ಹಸ್ತಾಂತರದ ಪ್ರಕ್ರಿಯೆಯನ್ನು ಕರ್ನಾಟಕ ಸರ್ಕಾರ ಗಂಭೀರವಾಗಿ ಪರಿಗಣಿಸದ ಕಾರಣ ಕೇನ್ಸ್ ಟೆಕ್ನಾಲಜಿ ಹೀಗೆ ಸ್ಥಳಾಂತರಗೊಂಡಿದೆ ಎನ್ನಲಾಗಿದೆ.

ಇದರಿಂದ ಕಡಕೊಳದ ಸೆಮಿ ಕಂಡಕ್ಟರ್ ಪಾರ್ಕ್ ನೆನೆಗುದಿಗೆ ಬಿದ್ದಿದೆ. ಉದ್ದೇಶಿತ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆಯಾಗಿದ್ದರೆ ಮೈಸೂರಿನ ನೂರಾರು ಜನರಿಗೆ ಉದ್ಯೋಗ ದೊರೆಯುತ್ತಿತ್ತು.

ಆರೋಗ್ಯಕರ ಜೀವನಕ್ಕೆ ಬಲಿಷ್ಠ ಮೂಳೆಗಳು ಅತ್ಯವಶ್ಯ

ನಾರಾಯಣ ಆಸ್ಪತ್ರೆ ಮೂಳೆ ಶಸ್ತ್ರಚಿಕಿತ್ಸಕ ಡಾ.ಎ.ಎಸ್.ಸುನೀಲ್‌ಕುಮಾರ್

ಮೈಸೂರು,ಅ.20(ಪಿಎಂ)– ಆರೋಗ್ಯಕರ ಜೀವನಕ್ಕಾಗಿ ಬಲಿಷ್ಠ ಮೂಳೆಗಳು ಮಹತ್ವದ ಪಾತ್ರ ವಹಿಸಲಿವೆ. ಹಾಗಾಗಿ ನಿಯಮಿತ ವ್ಯಾಯಾಮ, ದೇಹಕ್ಕೆ ಸೂರ್ಯನ ಬೆಳಕು ಸಮರ್ಪಕವಾಗಿ ದೊರೆಯುವಂತೆ ನೋಡಿಕೊಳ್ಳುವುದು ಮತ್ತು ಆರೋಗ್ಯಕರ ಆಹಾರ ಸೇವನೆಯಂತಹ ಅಭ್ಯಾಸಗಳು ನಮ್ಮ ಮೂಳೆಗಳ ಬಲಕ್ಕೆ ಸಹಕಾರಿ ಎಂದು ಮೈಸೂರಿನ ನಾರಾಯಣ ಆಸ್ಪತ್ರೆ ಮೂಳೆ ಶಸ್ತ್ರಚಿಕಿತ್ಸಕ ಡಾ.ಎ.ಎಸ್.ಸುನೀಲ್‌ಕುಮಾರ್ ತಿಳಿಸಿದ್ದಾರೆ.

ಸಮಗ್ರ ಆರೋಗ್ಯಕ್ಕಾಗಿ ಬಾಲ್ಯದಿಂದ ವೃದ್ಧಾಪ್ಯದವರೆಗೆ ನಮ್ಮ ಮೂಳೆಗಳನ್ನು ಬಲಿಷ್ಠತೆಯಿಂದ ಕಾಪಾಡಿಕೊಳ್ಳುವುದು ಅಗತ್ಯ. ನಮಗೆ ವಯಸ್ಸಾದಂತೆ ಮೂಳೆಗಳು ಸ್ವಾಭಾವಿಕವಾಗಿ ದುರ್ಬಲಗೊಳ್ಳುತ್ತವೆ. ಇದರಿಂದ ದೇಹದ ಆಯಾಸ, ನೋವು, ಬೆನ್ನು ಅಥವಾ ಕಾಲುಗಳು ಬಾಗುವುದು ಮತ್ತು ಮೂಳೆ ಮುರಿತದಂತಹ ಅಪಾಯಗಳಿಗೆ ಕಾರಣವಾಗುತ್ತದೆ. ಅನಾರೋಗ್ಯಕರ ಆಹಾರ ಪದ್ಧತಿ, ದೈಹಿಕ ಚಟುವಟಿಕೆಯ ಕೊರತೆ ಮತ್ತು ಮಧುಮೇಹ ಅಥವಾ ಥೈರಾಯ್ಡ್ ಸಮಸ್ಯೆಗಳು ಮೂಳೆಗಳನ್ನು ಇನ್ನಷ್ಟು ದುರ್ಬಲಗೊಳಿಸುತ್ತವೆ.



ಡಾ.ಸುನಿಲ್‌ಕುಮಾರ್


ಬಲವಾದ ಮೂಳೆಗಳು ಒಂದೇ ದಿನದಲ್ಲಿ ನಿರ್ಮಾಣವಾಗುವುದಿಲ್ಲ. ಆರೋಗ್ಯಕರ ಆಹಾರ, ದೇಹಕ್ಕೆ ಸೂಕ್ತ ರೀತಿಯಲ್ಲಿ ಸೂರ್ಯನ ಬೆಳಕು ದೊರಕುವಂತೆ ನೋಡಿಕೊಳ್ಳುವುದು, ನಿಯಮಿತ ವ್ಯಾಯಾಮ ಮತ್ತು ಹಾನಿಕಾರಕ ಅಭ್ಯಾಸಗಳನ್ನು ತಪ್ಪಿಸುವುದು ಅಗತ್ಯ ಜೊತೆಗೆ ಮೂಳೆಗಳ ಸಮಸ್ಯೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ ಸಕಾಲಕ್ಕೆ ಚಿಕಿತ್ಸೆ ಪಡೆದುಕೊಳ್ಳುವ ಮೂಲಕ ಮೂಳೆಗಳ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. 'ಚಿಕಿತ್ಸೆಗಿಂತ ತಡೆಗಟ್ಟುವಿಕೆ ಉತ್ತಮ' ಎಂಬಂತೆ ಮೂಳೆಗಳ ಸಮಗ್ರ ಆರೈಕೆಯೇ ಸೂಕ್ತ. ಅದಕ್ಕಾಗಿ ಕೆಲ ಸರಳ ಸೂತ್ರಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಮುಖ್ಯ. ಕ್ಯಾಲ್ಸಿಯಂಯುಕ್ತ ಆಹಾರಗಳಿಗೆ ಆದ್ಯತೆ ನೀಡಬೇಕು. 'ವಿಟಮಿನ್ ಡಿ' ನಮ್ಮ ದೇಹವು ಕ್ಯಾಲ್ಸಿಯಂ ಹೀರಿಕೊಳ್ಳಲು ಸಹಾಯ ಮಾಡುತ್ತದೆ. ಮೀನು, ಮೊಟ್ಟೆ ಮತ್ತು ಬಲವರ್ಧಿತ ಆಹಾರವನ್ನು ಸೇವಿಸುವ ಮೂಲಕ ಉತ್ತಮ 'ವಿಟಮಿನ್ ಡಿ' ಮಟ್ಟ ಕಾಪಾಡಿಕೊಳ್ಳಬಹುದು. ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ಮಹಿಳೆಯರು, ವೃದ್ಧರು ಮತ್ತು ಮೂಳೆ ಸಾಂದ್ರತೆ ಕಡಿಮೆ ಇರುವವರು ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ದೊರೆಯುವ ಆಹಾರ ಸೇವನೆಗೆ ವಿಶೇಷ ಗಮನ ಹರಿಸಬೇಕು.

ದೈನಂದಿನ ಬದುಕಿನಲ್ಲಿ ವ್ಯಾಯಾಮ ಮಾಡಬೇಕು. ಧೂಮಪಾನ ತ್ಯಜಿಸಿ, ಮದ್ಯಪಾನವನ್ನು ಮಿತಿಗೊಳಿಸಬೇಕು. ಋತು ಚಕ್ರ ನಿಂತಿರುವಂತಹ ಮಹಿಳೆಯರು, 60 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು ಮತ್ತು ಮಧುಮೇಹ, ಮೂತ್ರಪಿಂಡ ಕಾಯಿಲೆ ಅಥವಾ ಹೃದಯ ಸಮಸ್ಯೆಗಳಂತಹ ದೀರ್ಘಕಾಲೀನ ಕಾಯಿಲೆಗಳನ್ನು ಹೊಂದಿದ್ದರೆ, ನಿಯಮಿತವಾಗಿ ಮೂಳೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಅವರು ಸಲಹೆಗಳನ್ನು ನೀಡಿದ್ದಾರೆ.



ಮಂಗಳೂರು ನಗರದಲ್ಲಿ ನಡೆದ ಸಿಂಡಿಕೇಟ್ ಬ್ಯಾಂಕ್‌ನ ಶತಮಾನೋತ್ಸವ ಸಮಾರಂಭದಲ್ಲಿನ ಮೈಸೂರಿನ ನಿವಾಸಿ ಹಾಗೂ ಕೇಂದ್ರ ಸರ್ಕಾರದ ಡಿಆರ್‌ಡಿಓ ಸಂಸ್ಥೆಯ ಮಾಜಿ ಪ್ರಧಾನ ಸಾರ್ವಜನಿಕ ಸಂಪರ್ಕ ಅಧಿಕಾರಿ ಜಯಪ್ರಕಾಶ್ ರಾವ್ ಅವರನ್ನು ಸನ್ಮಾನಿಸಲಾಯಿತು. ಬ್ಯಾಂಕ್‌ನ ಮಾಜಿ ಪ್ರಧಾನ ವ್ಯವಸ್ಥಾಪಕ ಅಲ್ಲನ ಪೆರೇರಾ, ಕೆನರಾ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಮಂಜುನಾಥ ಶಿನಗಿ ಹಾಗೂ ಸಂಘಟನೆ ಅಧ್ಯಕ್ಷ ಎಂ.ಎಸ್.ಭಟ್ ಮತ್ತಿತರರಿದ್ದರು.

ಸಂಬಳ ನೀಡದೇ ಕಿರುಕುಳ: ಡೆತ್ ನೋಟ್ ಬರೆದು ಬೆಂಗಳೂರಿನಲ್ಲಿ ಓಲಾ ಎಂಜಿನಿಯರ್ ಆತ್ಮಹತ್ಯೆ



ಬೆಂಗಳೂರು,ಅ.20–ದೇಶದ ಪ್ರತಿಷ್ಠಿತ ಓಲಾ ಕಂಪನಿಗೆ ಸಂಕಷ್ಟ ಎದುರಾಗಿದ್ದು, ಸಂಸ್ಥೆಯ ಎಂಜಿನಿಯರ್ ಒಬ್ಬರು ಸಂಬಳ ನೀಡದೇ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಓಲಾ ಸಂಸ್ಥೆಯ ಹೋಮೋಲೋಗೇಷನ್ ವಿಭಾಗದ ಅರವಿಂದ್ ಕೆ(38) ಅವರು ಬೆಂಗಳೂರಿನ ಚಿಕ್ಕಲಸಂದ್ರ ದಲ್ಲಿರುವ ಮಂಜುನಾಥನಗರದಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ ಸೆ.28 ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಇದೀಗ ಅರವಿಂದ್ ಸಾವಿಗೆ ಸಂಸ್ಥೆಯ ಕಿರುಕುಳವೇ ಕಾರಣ ಎಂದು ಹೇಳಲಾಗಿದೆ. ಮೂಲಗಳ ಪ್ರಕಾರ ಅರವಿಂದ್ ಆತ್ಮಹತ್ಯೆ ಮಾಡಿಕೊಂಡ ಎರಡು ದಿನದ ಬಳಿಕ ಅರವಿಂದ್ ಬ್ಯಾಂಕ್ ಅಕೌಂಟ್‌ಗೆ 17.46 ಲಕ್ಷ ರೂ. ಹಣ ಜಮೆಯಾಗಿತ್ತು. ಹಣ ಜಮೆಯಾದ ಬಗ್ಗೆ ಅನುಮಾನದಿಂದ ಕಂಪನಿಯವರನ್ನು ಕುಟುಂಬಸ್ಥರು ಪ್ರಶ್ನಿಸಿದ್ದರು. ಆದರೆ ಕಂಪನಿಯಿಂದ ಸರಿಯಾದ ಸ್ಪಷ್ಟನೆ ಸಿಕ್ಕಿರಲಿಲ್ಲ. ಹೀಗಾಗಿ ಅನುಮಾನ ಹೆಚ್ಚಾದ ನಂತರ ಮನೆಯನ್ನು ಪರಿಶೀಲಿಸಿದಾಗ 28 ಪುಟಗಳ ಡೆತ್ ನೋಟ್ ಪತ್ತೆಯಾಗಿತ್ತು.

ಸಂಬಳ ನೀಡದೇ ಕಿರುಕುಳ: ಅರವಿಂದ್ ಡೆತ್‌ನೋಟ್‌ನಲ್ಲಿ ಸಂಸ್ಥೆಯಲ್ಲಿನ ಕಿರುಕುಳದ ಕುರಿತು ಆರೋಪಿಸಿದ್ದಾರೆ ಎನ್ನಲಾಗಿದೆ. ಕಂಪನಿಯ ಹೆಡ್ ಆಫ್ ಹೋಮೋರೋಗೇಷನ್ ಎಂಜಿನಿಯರ್ ಸಂಬ್ರತ್‌ಕುಮಾರ್ ದಾಸ್ ಮತ್ತು ಕಂಪನಿ ಮಾಲೀಕ ಬಾವೀಶ್ ಅಗರ್‌ವಾಲ್ ಕೆಲಸದಲ್ಲಿ ಒತ್ತಡ ನೀಡುತ್ತಿದ್ದಾರೆ. ಅಷ್ಟೇ ಅಲ್ಲದೇ ತನಗೆ ನೀಡಬೇಕಾಗಿರುವ ವೇತನ ಮತ್ತು ಇತರೆ ಭತ್ಯೆ ನೀಡದೇ ಕಿರುಕುಳ ನೀಡುತ್ತಿದ್ದರಿಂದ ತಾನು ಬೇಸತ್ತು ವಿಷ ಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅರವಿಂದ್ ಉಲ್ಲೇಖಿಸಿದ್ದಾರೆ. ಹೀಗಾಗಿ ತನ್ನ ತಮ್ಮನ ಆತ್ಮಹತ್ಯೆಗೆ ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಅರವಿಂದ್ ಸಹೋದರ ದೂರಿನಲ್ಲಿ ನೀಡಿದ್ದಾರೆ.

ಮಕ್ಕಳ ಕೊಂದು ಆತ್ಮಹತ್ಯೆಗೆ ಶರಣಾದ ತಾಯಿ

ನಲ್ಗೊಂಡ: ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯಲ್ಲಿ ಹಬ್ಬದ ದಿನವೇ ಮಹಿಳೆಯೊಬ್ಬರು ಇಬ್ಬರು ಮಕ್ಕಳ ಪ್ರಾಣವನ್ನು ತೆಗೆದು ತಾನು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಳಕಿಗೆ ಬಂದಿದೆ. ಸ್ಥಳೀಯರ ಮಾಹಿತಿಯ ಮೇರೆಗೆ ಸ್ಥಳಕ್ಕೆ ತಲುಪಿದ ಪೊಲೀಸರು, ಶವಗಳನ್ನು ವಶಪಡಿಸಿಕೊಂಡು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ. ಘಟನೆಯ ಕುರಿತು ಪ್ರಕರಣ ದಾಖಲಿಸಲಾಗಿದ್ದು, ಅವರ ಸಾವಿಗೆ ಕಾರಣ ತಿಳಿದು ಬಂದಿದೆ.

ಸೋಮವಾರ ನಲ್ಗೊಂಡ ಜಿಲ್ಲೆಯ ಕೊಂಡಮಲ್ಲೆಪಲ್ಲಿಯಲ್ಲಿ ಈ ದುರಂತ ಬೆಳಕಿಗೆ ಬಂದಿದೆ. ಮೃತರನ್ನು ಕುಂಚಲ ನಾಗಲಕ್ಷ್ಮಿ (27), ಮಗಳು ಅವಂತಿಕಾ (9) ಮತ್ತು ಮಗ ಭುವನ್ ಸಾಯಿ (7) ಎಂದು ಪೊಲೀಸರು ಗುರುತಿಸಿದ್ದಾರೆ. ಆದಾಗ್ಯೂ, ಅವರ ಊರು ಆಂಧ್ರಪ್ರದೇಶದ ಬಾಪಟ್ಲಾ ಜಿಲ್ಲೆಯ ಜನಕರಂ ಗ್ರಾಮ. ಆದರೆ ಅವರು ಕಳೆದ ಕೆಲವು ವರ್ಷಗಳಿಂದ ನಲ್ಗೊಂಡ ಜಿಲ್ಲೆಯ ಕೊಂಡಮಲ್ಲೆಪಲ್ಲಿಯಲ್ಲಿ ವಾಸಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅವರ ಸಾವಿಗೆ ಕೌಟುಂಬಿಕ ಕಲಹ ಕಾರಣ ಎಂದು ಪೊಲೀಸರು ಶಂಕಿಸಿದ್ದಾರೆ.

ಲಯನ್ಸ್ ಕ್ಲಬ್‌ನಿಂದ ಹಂಗರ್ ಫೀಡ್ ಕಾರ್ಯಕ್ರಮ



ಮೈಸೂರು: ಮೈಸೂರು ರೆಲಿಷ್ ಲಿಯೋ ಲಯನ್ಸ್ ಕ್ಲಬ್, ಎಲ್‌ಸಿಎಂ ಕ್ರೌನ್, ಎಲ್‌ಸಿಎಂ ವಿವಿ ಸಿಇ ಕ್ಯಾಂಪಸ್ ಮತ್ತು ಮೈಸೂರು ಕ್ಲಾಸಿಕ್ ಲಿಯೋ ಕ್ಲಬ್‌ಗಳ ಸಹಯೋಗದಲ್ಲಿ ಹಂಗರ್ ಫೀಡ್ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿತು. ಸದರಿ ಕಾರ್ಯಕ್ರಮವನ್ನು ಪ್ರತಿ ವಾರಾಂತ್ಯ ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆ ಬಳಿ ಆಯೋಜಿಸಲಾಗುತ್ತದೆ.

ಕಾರ್ಯಕ್ರಮದಲ್ಲಿ ವಲಯ ಅಧ್ಯಕ್ಷ ಲಯನ್. ಅರುಣ್ ಮಂಡಲ್ ಹಾಗೂ ಶಾಂತಿ ಪೋಸ್ಟರ್ ಜಿಲ್ಲಾ ಅಧ್ಯಕ್ಷ ಲಯನ್ ದಿನೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಜಿಲ್ಲಾ ಲಿಯೋ ಅಧ್ಯಕ್ಷ ಲಿಯೋ ಆರ್ಯವ್ ಮಾನಿಕ್ಯ ಮಂಡಲ್, ಜಿಲ್ಲಾ ಲಿಯೋ ಕಾರ್ಯದರ್ಶಿ ಲಿಯೋ ಕೀರ್ತಿಕುಮಾರ್, ಎಲ್‌ಸಿಎಂ ರೆಲಿಷ್ ಅಧ್ಯಕ್ಷೆ ಲಯನ್ ಸಿಂಥಿಯಾ ಡಿಮೆಲ್ಲೋ, ಎಲ್‌ಸಿಎಂ ವಿವಿ ಸಿಇ ಕ್ಯಾಂಪಸ್ ಅಧ್ಯಕ್ಷೆ ಲಯನ್ ಕೀರ್ತನಾ, ಎಲ್‌ಸಿಎಂ ಕ್ರೌನ್ ಅಧ್ಯಕ್ಷ ಲಯನ್ ಇಮಾದ್ ಮತ್ತು ಖಜಾಂಚಿ ಲಯನ್ ಮಂದಾರ ನೇತೃತ್ವ ನೀಡಿದರು.

ಹಂಗರ್ ಫೀಡ್ ಡ್ರೈವ್‌ನ್ನು ದರ್ಶಿನಿ ಪ್ರಾಯೋಜಿಸಿದ್ದರು. ಲಯನ್ ಆಲೆನ್ ಸ್ಟೀಫನ್, ಲಯನ್ ರಿಷಬ್, ಲಯನ್ ಅನಘಾ ಆಚಾರ್ಯ, ಲಯನ್ ಬೆಣಕ, ಲಯನ್ ಜೀವನ್, ಲಯನ್ ತನ್ಮಯಿ ಇದ್ದರು.

ಮೈಸೂರು ಮಿತ್ರ

ಯಾದವಗಿರಿಯಲ್ಲಿ ಸರಣಿ ಅಪಘಾತ

ಎರಡು ಕಾರು, ಸ್ಕೂಟರ್‌ಗೆ ಡಿಕ್ಕಿ ಹೊಡೆದ ಕಾರು ಚಾಲಕಿ







ಮೈಸೂರು,ಅ.20(ಎಂಕೆ)– ಮೈಸೂರಿನ ಯಾದವಗಿರಿ ಮುಖ್ಯರಸ್ತೆಯಲ್ಲಿ ಮಹಿಳೆಯೊಬ್ಬರು ಅಜಾಗರೂಕತೆಯಿಂದ ಅಡ್ಡಾದಿಡ್ಡಿ ಕಾರು ಚಲಾಯಿಸಿದ ಪರಿಣಾಮ ಸರಣಿ ಅಪಘಾತ ಸಂಭವಿಸಿ, ಸ್ಕೂಟರ್ ಸವಾರರಿಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಸೋಮವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಚೆಲುವಾಂಬ ಪಾರ್ಕ್ ಸರ್ಕಲ್ ಕಡೆ ಯಿಂದ ಯಾದವಗಿರಿಯತ್ತ ಸುಜುಕಿ ಶಿಫ್ಟ್ ಕಾರು(ಕೆಎ.09.ಎಂಎಫ್–9068) ಅನ್ನು ವೇಗವಾಗಿ ಚಲಾಯಿಸಿಕೊಂಡು ತಮ್ಮ ಮಗಳೊಂದಿಗೆ ಬಂದ ಒಂಟಿಕೊಪ್ಪಲು ನಿವಾಸಿ ಹೇಮ, ಎಂಬುವರು (ಹೋಟೆಲ್ ಕಂಫರ್ಟ್ ಎದುರು) ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಎರಡು ಕಾರ್‌ಗಳಿಗೆ ಡಿಕ್ಕಿ ಹೊಡೆದು, ಕೆಲಸ ಮುಗಿಸಿಕೊಂಡು ಮನೆಗೆ ಸ್ಕೂಟರ್(ಕೆಎ.09.ಹೆಚ್‌ಕೆ–5352)ನಲ್ಲಿ ತೆರಳುತಿದ್ದ ಯಾದವಗಿರಿಯ ಮೋಹನ್ ಮತ್ತು ನಿರಂಜನ್ ಎಂಬುವರಿಗೂ ಡಿಕ್ಕಿ ಹೊಡೆದು ನಂತರ ರಸ್ತೆ ಬದಿಯ ಫುಟ್‌ಪಾತ್ ಮೇಲೆ ಹಾರಿಸಿ, ವಿದ್ಯುತ್ ಕಂಬಕ್ಕೂ ಡಿಕ್ಕಿ ಹೊಡೆದಿದ್ದಾರೆ.

ಪರಿಣಾಮ ಸ್ಕೂಟರ್ ಸವಾರರಿಬ್ಬರಿಗೂ ಕೈಕಾಲು ತರಚಿ, ಗಂಭೀರ ಗಾಯಗಳಾಗಿದ್ದು, ರೈಲ್ವೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಎರಡು ಕಾರುಗಳಿಗೂ ತಾಕಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಫುಟ್‌ಪಾತ್ ಮೇಲೆ ಹಾರಿಸಿ, ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದರಿಂದ ಶಿಫ್ಟ್ ಕಾರಿನ ಮುಂಭಾಗ ಜಖಂಗೊಂಡಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಿವಿಪುರಂ ಸಂಚಾರ ಠಾಣೆ ಪೊಲೀಸರು, ಸ್ಥಳ ಪರಿಶೀಲನೆ ನಡೆಸಿ, ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಶ್ರೀ ದುರ್ಗಾ ಫೌಂಡೇಶನ್‌ನಿಂದ ಅರಿಶಿನ, ಕುಂಕುಮ ವಿತರಣೆ



ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ದೀಪಾವಳಿ ಅಂಗವಾಗಿ ಅರ್ಚಕ ಸಿಬ್ಬಂದಿಗೆ, ಪೌರಕಾರ್ಮಿಕರಿಗೆ ಹಾಗೂ ಮಹಿಳೆಯರಿಗೆ ಅರಿಶಿಣ, ಕುಂಕುಮ, ಹೂವು, ರವಿಕೆ ವಿತರಿಸಲಾಯಿತು. ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ರೇಖಾ ಶ್ರೀನಿವಾಸ್, ಕಾವ್ಯ ವಿನಯ್, ರಮ್ಯ, ರಶ್ಮಿ, ಗೌರಮ್ಮ, ಸುವರ್ಣಮ್ಮ, ಮಂಜುಳಾ ಸೋಮಣ್ಣ, ಕೋಮಲಾಮಣಿ, ಕಾವ್ಯ, ಶ್ರುತಿ, ದರ್ಶನ ಇನ್ನಿತರರು ಹಾಜರಿದ್ದರು.

ಮೈಸೂರಲ್ಲಿ ಪಟಾಕಿ ಖರೀದಿ ಜೋರು

ಬೆಲೆ ಹೆಚ್ಚಳವಾದರೂ ಗ್ರಾಹಕರಲ್ಲಿ ಉತ್ಸಾಹ; ತಹರೇವಾರಿ ಪಟಾಕಿ ಖರೀದಿ



ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಬಡಾವಣೆಯಲ್ಲಿರುವ ಪಟಾಕಿ ಮಳಿಗೆಗಳಲ್ಲಿ ಪಟಾಕಿ ಖರೀದಿಗೆ ಮುಗಿಬಿದ್ದಿರುವ ಗ್ರಾಹಕರು.

ಮೈಸೂರು,ಅ.20(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಆಚರಣೆಗಾಗಿ ಮೈಸೂರಿನ ವಿವಿಧೆಡೆ ಸೋಮವಾರ ಪಟಾಕಿ ಖರೀದಿ ಭರಾಟೆ ಬಿರುಸಾಗಿ ಸಾಗಿತು.

ನರಕ ಚತುರ್ದಶಿ ದಿನವಾದ ಸೋಮವಾರ ಸಂಜೆ ದೀಪಾವಳಿ ಹಬ್ಬದ ಸಂಭ್ರಮ ಮನೆ ಮಾಡಿದ್ದ ಹಿನ್ನೆಲೆಯಲ್ಲಿ ಬೆಳಗ್ಗಿನಿಂದಲೇ ಪಟಾಕಿ ಖರೀದಿ ಅರ್ಭಟ ಹೆಚ್ಚಾಗಿತ್ತು. ಅದರಲ್ಲೂ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಹೋಲ್‌ಸೇಲ್ ಪಟಾಕಿ ಮಾರಾಟ ಮಳಿಗೆಗಳಲ್ಲಿ ಪಟಾಕಿ ಖರೀದಿ ಮಾಡಲು ಜನ ಮುಗಿಬಿದ್ದಿದ್ದರು. ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ 20ಕ್ಕೂ ಅಧಿಕ ಮಳಿಗೆಗಳಿದ್ದು, ಚಿಲ್ಲರೆ ವ್ಯಾಪಾರಿಗಳಿಗಿಂತ ಕಡಿಮೆ ದರದಲ್ಲಿ ವಿವಿಧ ಬಗೆಯ ಪಟಾಕಿ ದೊರೆಯುತ್ತವೆ ಎಂಬ ನಂಬಿಕೆಯಿಂದ ಮೈಸೂರಿನ ವಿವಿಧೆಡೆಯಿಂದ ನೂರಾರು ಮಂದಿ ಗ್ರಾಹಕರು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪಟಾಕಿ ಮಳಿಗೆಗಳತ್ತ ಬೆಳಗ್ಗಿನಿಂದಲೇ ಹೆಚ್ಚಿನ ಸಂಖ್ಯೆಯ ಜನ ಆಗಮಿಸಿದ್ದರಿಂದ, ಆ ಭಾಗದಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಬೆಳಗ್ಗಿನಿಂದ ರಾತ್ರಿವರೆಗೂ ಪಟಾಕಿಯ ವ್ಯಾಪಾರ ಬಿರುಸಾಗಿ ಸಾಗಿತು.

ಜೆ.ಕೆ.ಮೈದಾನದಲ್ಲೂ: ಮೈಸೂರಿನ ಜೆ.ಕೆ.ಮೈದಾನದಲ್ಲಿ ವ್ಯವಸ್ಥೆ ಮಾಡಿರುವ ಪಟಾಕಿ ಅಂಗಡಿಗಳಲ್ಲೂ ಪಟಾಕಿ ಮಾರಾಟ ಜೋರಾಗಿತ್ತು. ಮೈಸೂರು ನಗರ ಮಾತ್ರವಲ್ಲದೆ, ಗ್ರಾಮೀಣ ಪ್ರದೇಶದಿಂದ ಆಗಮಿಸಿದ್ದ ಗ್ರಾಹಕರು ದೀಪಾವಳಿ ಹಬ್ಬಕ್ಕಾಗಿ ಪಟಾಕಿ ಖರೀದಿಸಿ ಸಂಭ್ರಮಿಸಿದರು.

ವಿವಿಧೆಡೆ: ಮೈಸೂರಿನ ಚಾಮುಂಡಿಪುರಂ, ಕುವೆಂಪುನಗರ, ವಿವೇಕಾನಂದ ನಗರ, ಪಡುವಾರಹಳ್ಳಿ, ಇಟ್ಟಿಗೆಗೂಡು, ಸಿದ್ದಾರ್ಥನಗರ, ಶ್ರೀರಾಂಪುರ, ಜೆ.ಪಿ.ನಗರ ಸೇರಿದಂತೆ ವಿವಿಧೆಡೆ ಇರುವ ಪಟಾಕಿ ಮಳಿಗೆಗಳಲ್ಲೂ ಪಟಾಕಿ ವ್ಯಾಪಾರ ಜೋರಾಗಿ ನಡೆಯಿತು.

ಹಸಿರು ಪಟಾಕಿ: ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಮೈಸೂರಲ್ಲಿ ಹಸಿರು ಪಟಾಕಿಗಳನ್ನೇ ಮಾರಾಟ ಮಾಡಲು ಅವಕಾಶ ನೀಡಿದ್ದು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮೈಸೂರು ಮಹಾನಗರಪಾಲಿಕೆಯ ಪರಿಸರ ವಿಭಾಗದ ಅಧಿಕಾರಿಗಳು ಪಟಾಕಿ ಮಳಿಗೆಗಳಲ್ಲಿ ಮಾರಾಟಕ್ಕಿಡಲಾಗಿರುವ ಪಟಾಕಿಗಳನ್ನು ಪರಿಶೀಲಿಸಿ, ಹಸಿರು ಪಟಾಕಿಯಾಗಿರುವುದನ್ನು ಖಚಿತಪಡಿಸಿಕೊಂಡು ಮಾರಾಟಕ್ಕೆ ಅವಕಾಶ ನೀಡಿದ್ದಾರೆ.

ಗ್ರಾಹಕರ ಸಂಖ್ಯೆ ಹೆಚ್ಚು: ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ದೀಪಾವಳಿಯ ಮೊದಲ ದಿನವೇ ಪಟಾಕಿ ಖರೀದಿಸಲು ಬಂದ ಗ್ರಾಹಕರ ಸಂಖ್ಯೆ ಹೆಚ್ಚಾಗಿದೆ. ಸೋಮವಾರ ಪಟಾಕಿ ಖರೀದಿಸಲು ಬಂದ ಗ್ರಾಹಕರಲ್ಲಿ ಬಹುತೇಕ ಮಂದಿ ಸಾವಿರಾರು ರೂ. ಮೌಲ್ಯದ ಪಟಾಕಿ ಖರೀದಿಸುತ್ತಿದ್ದ ದೃಶ್ಯ ಕಂಡು ಬಂದಿತು. ಅಲ್ಲದೆ, ಕೆಲವು ಕಚೇರಿ ಅಥವಾ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಪಟಾಕಿ ಬಾಕ್ಸ್ ನೀಡುವುದಕ್ಕೆ ಭಾರಿ ಪ್ರಮಾಣದಲ್ಲಿ ಗಿಫ್ಟ್ ಪ್ಯಾಕ್‌ಗಳನ್ನು ಖರೀದಿಸುತ್ತಿದ್ದವರ ಸಂಖ್ಯೆಯೂ ಹೆಚ್ಚಾಗಿತ್ತು.

ಎಲ್ಲಾ ಮಳಿಗೆಗಳಲ್ಲೂ ಕಳೆದ ಎರಡು ದಿನದಿಂದ ಪಟಾಕಿ ಮಾರಾಟ ಭರ್ಜರಿಯಾಗಿ ನಡೆಯುತ್ತಿರುವುದರಿಂದ ವ್ಯಾಪಾರಿಗಳ ಮುಖದಲ್ಲಿ ಮಂದಹಾಸ ಉಂಟಾಗಿದೆ.

ದರವೂ ಹೆಚ್ಚು: ಪಟಾಕಿಗಳ ಬೆಲೆಯಲ್ಲಿ ಹೆಚ್ಚಳವಾಗಿದೆ. ಕಳೆದ ಬಾರಿಗೆ ಹೋಲಿಸಿದರೆ, ಈ ಬಾರಿ ಪಟಾಕಿ ಬೆಲೆಯಲ್ಲಿ ಶೇ.5ರಿಂದ 10ರಷ್ಟು ಬೆಲೆ ಹೆಚ್ಚಾಗಿದೆ. ಅದರಲ್ಲೂ ಗಿಫ್ಟ್ ಬಾಕ್ಸ್ ಬೆಲೆ 1500ರಿಂದ 10 ಸಾವಿರ ರೂ.ವರೆಗೆ ದರ ನಿಗದಿ ಮಾಡಲಾಗಿದೆ. ಉಳಿದಂತೆ ಇನ್ನಿತರ ಪಟಾಕಿಗಳ ಬೆಲೆಯೂ ಹೆಚ್ಚಾಗಿದ್ದರೂ, ಪಟಾಕಿ ಖರೀದಿಸುವವರ ಉತ್ಸಾಹ ಮಾತ್ರ ಹೆಚ್ಚಾಗಿ ಇತ್ತು.

ಆಕಾಶ ಬುಟ್ಟಿ: ಪಟಾಕಿ ಸಿಡಿತದ ಹೊಗೆಯಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರದಂತೆ ತಡೆಗಟ್ಟುವ ನಿಟ್ಟಿನಲ್ಲಿ ಕೆಲವರು ಸುರ್ ಸುರ್ ಬತ್ತಿ, ಹೂಕುಂಡ ಹಾಗೂ ಆಕಾಶಬುಟ್ಟಿಯನ್ನು ಖರೀದಿಸುತ್ತಿದ್ದ ದೃಶ್ಯ ಕಂಡು ಬಂದಿತು. ಅದರಲ್ಲೂ ಆಕಾಶ ಬುಟ್ಟಿ ಖರೀದಿಸುವವರ ಸಂಖ್ಯೆ ಹೆಚ್ಚಾಗಿತ್ತು.

ಮೈಸೂರು ಮೃಗಾಲಯದಲ್ಲಿ ಎರೆಹುಳು ಗೊಬ್ಬರಕ್ಕೆ ಬಾರೀ ಡಿಮ್ಯಾಂಡ್

● ರಾಜ್ಯದ ನಾನಾ ಭಾಗದ ರೈತರಿಂದ ಗೊಬ್ಬರ ಖರೀದಿ ● ಕಳೆದ ವರ್ಷ 14.71 ಲಕ್ಷ ರೂ. ಆದಾಯ





ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ತಯಾರಾಗುತ್ತಿರುವ ರೈತನ ಮಿತ್ರ ಎಂದೇ ಕರೆಯುವ 'ಎರೆಹುಳು ಗೊಬ್ಬರ' ಕೇಂದ್ರ.

ಮೈಸೂರು, ಅ.20(ಎಂಕೆ)– ಪ್ರಾಣಿ–ಪಕ್ಷಿಗಳ ನಡುವೆ ರೈತನ ಮಿತ್ರನಿಗೆ ಬಾರೀ ಡಿಮ್ಯಾಂಡ್... ಕೆ.ಜಿಗೆ ಬರೀ 15 ರೂ. ಅಷ್ಟೇ...!



ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ತಯಾರಾಗುತ್ತಿರುವ ರೈತನ ಮಿತ್ರ ಎಂದೇ ಕರೆಯುವ 'ಎರೆಹುಳು ಗೊಬ್ಬರ'ಕ್ಕೆ ದಿನೇ ದಿನೆ ಡಿಮ್ಯಾಂಡ್ ಹೆಚ್ಚಾಗುತ್ತಿದೆ. ರಾಸಾಯನಿಕ ಗೊಬ್ಬರ ಬಳಕೆ ಮಾಡಿ ಮಣ್ಣಿನ ಫಲವತ್ತತೆ ಹಾಳು ಮಾಡುವ ಬದಲು ಮಣ್ಣಿನ ಫಲವತ್ತತೆ ಮತ್ತು ಬೆಳೆಯ ಇಳುವರಿ ಹೆಚ್ಚಿಸುವ ಎರೆಹುಳು ಸಾವಯುವ ಗೊಬ್ಬರ ಹಲವು ರೈತರ ನೆಚ್ಚಿನದ್ದಾಗಿದೆ.

ಮೃಗಾಲಯದ ಆವರಣದಲ್ಲಿ ಹಲವು ವರ್ಷಗಳಿಂದ ಎರೆಹುಳು ಗೊಬ್ಬರದ ತಯಾರಿಕಾ ಘಟಕ ನಡೆಸಲಾಗುತ್ತಿದ್ದು, ಪ್ರತಿ ನಿತ್ಯ ಪ್ರಾಣಿ–ಪಕ್ಷಿಗಳಿಂದ ಸಂಗ್ರಹವಾಗುವ ತ್ಯಾಜ್ಯ(ಲದ್ದಿ) ವನ್ನು ಬರೋಬ್ಬರಿ 40 ದಿನಗಳ ಕಾಲ ಸಂಸ್ಕರಿಸಿ, ಎರೆಹುಳು ಗೊಬ್ಬರವನ್ನಾಗಿ ತಯಾರು ಮಾಡಲಾಗುತ್ತಿದೆ.

ಮೃಗಾಲಯ ಸಿಬ್ಬಂದಿಗಳಾದ ಸಿದ್ದರಾಜು, ಆರ್.ಶ್ರೀನಿವಾಸ್ ಮತ್ತು ಭರತ್ ಬೆಳಗ್ಗೆ 8ರಿಂದ ಸಂಜೆ 6ರವರೆಗೆ ಗೊಬ್ಬರ ತಯಾರಿಕ ಘಟಕದಲ್ಲಿ ಕಾರ್ಯನಿರ್ವಹಿಸಲಿದ್ದು, ಎರೆಹುಳುಗಳ ಪೋಷಣೆ ಮತ್ತು ರಕ್ಷಣೆ ಜೊತೆಗೆ ಗೊಬ್ಬರ ತಯಾರಿಕೆಯಲ್ಲಿ ತಲ್ಲೀನರಾಗಿದ್ದಾರೆ. ಪ್ರತಿದಿನ ಅದರಲ್ಲೂ ಮುಖ್ಯವಾಗಿ ಆನೆ, ಘೇಂಡಾ ಮೃಗ, ನೀರು ಕುದುರೆ ಮತ್ತು ಕಾಡೆಮ್ಮೆಯ ಸುಮಾರು 2 ಟನ್ ಲದ್ದಿ ಸಂಗ್ರಹಿಸಿ, ಘಟಕಕ್ಕೆ ತಂದು ಹಲ್ಲಿನ ಗುದ್ದಲಿಗಳಲ್ಲಿ ಲದ್ದಿಯಲ್ಲಿದ್ದ ಕಸ ತೆಗೆದು ಗುಡ್ಡೆ ಮಾಡಲಾಗುತ್ತದೆ. ನಂತರ ಎರಡು ದಿನ ನೀರು ಹಾಯಿಸಿ, ಲದ್ದಿಯಲ್ಲಿನ ಉಷ್ಣಾಂಶ ಕಡಿಮೆಯಾದ ಬಳಿಕ ಎರೆಹುಳುಗಳನ್ನು ಬಿಡಲಾಗುತ್ತದೆ. ಬಳಿಕ 38 ದಿನಗಳ ಕಾಲ ಅಗತ್ಯಕ್ಕೆ ತಕ್ಕಂತೆ ನೀರು ಹಾಯಿಸಿ, ಕಡೆಗೆ ಒಂದು ವಾರ ಡ್ರೈ ಮಾಡಿ ಕೈಯಿಂದಲೇ ಎರೆಹುಳು ಮತ್ತು ಗೊಬ್ಬರ ವನ್ನು ಬೇರ್ಪಡಿಸಿ ಕೆಜಿ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತಿದೆ.

ಡಬಲ್ ಫಲವತ್ತತೆ: 40 ದಿನಗಳ ಕಾಲ ಎರೆಹುಳುಗಳನ್ನು ಕಾದು, ಆಗಾಗ ನೀರು ಹಾಯಿಸಿಕೊಂಡು ಎರೆಹುಳು ಗೊಬ್ಬರ ತಯಾರಿಸಲಾಗುತ್ತದೆ. ಈ ಗೊಬ್ಬರವನ್ನು ಜಮೀನಿಗೆ ಒಂದು ಬಾರಿ ಹಾಕಿದರೆ, ಮೂರು ವರ್ಷಗಳ ಕಾಲ 10 ಪರ್ಸೆಂಟ್ ಇದ್ದ ಇಳುವರಿ ಡಬಲ್ ಆಗುವುದರಲ್ಲಿ ಅನುಮಾನವೇ ಇಲ್ಲ.

ಗೊಬ್ಬರವನ್ನು ಡ್ರೈ ಮಾಡಿ ಕೊಡುವುದರಿಂದ ಗೊಬ್ಬರದ ತೂಕವೂ ಕಡಿಮೆ ಆಗಲಿದ್ದು, ರೈತರಿಗೆ ಅನುಕೂಲಕಾರಿಯಾಗಲಿದೆ. ಅದರಲ್ಲಿಯೂ ಕಾಫಿ, ಶುಂಠಿ, ಬಾಳೆ, ತೆಂಗು ಬೆಳೆಗೆ ಎ1 ಗೊಬ್ಬರ ಇದಾಗಿದ್ದು, ಕೊಡಗಿನವರೇ ಹೆಚ್ಚಾಗಿ ಬಂದು ಖರೀದಿಸುತ್ತಾರೆ ಎಂದು ಘಟಕದ ಸಿಬ್ಬಂದಿ ಸಿದ್ದರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



> ರಾಸಾಯನಿಕ ಗೊಬ್ಬರಕ್ಕಿಂತ ಎರೆಹುಳು ಸಾವಯುವ ಗೊಬ್ಬರದ ಅನುಕೂಲತೆ ಹೆಚ್ಚು. ಈ ನಿಟ್ಟಿನಲ್ಲಿ ರೈತರಿಗಾಗಿ ಹಾಗೂ ಮೃಗಾಲಯದಲ್ಲಿ ಬೆಳೆಸುತ್ತಿರುವ ಗಿಡಗಳಿಗಾಗಿ ಎರೆಹುಳು ಗೊಬ್ಬರ ತಯಾರಿಕೆ ಮಾಡಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಎರೆಹುಳು ಗೊಬ್ಬರದ ಬೇಡಿಕೆ ಹೆಚ್ಚಾಗುತ್ತಿದ್ದು, ಅಷ್ಟೇ ಮುತುವರ್ಜಿ ವಹಿಸಿ ಎರೆಹುಳು ಸಾವಯವ ಗೊಬ್ಬರ ತಯಾರಿಸಲಾಗುತ್ತಿದೆ.
>
> –ಪಿ.ಅನುಷಾ, ಇಡಿ, ಮೈಸೂರು ಮೃಗಾಲಯ

ಎರೆಹುಳು ಕಾಯುವುದೇ ಸವಾಲು: ಗೊಬ್ಬರ ತಯಾರಿಕೆಗೆಂದೇ ಶಿವ ಮೊಗ್ಗದಿಂದ ಎರೆಹುಳುಗಳನ್ನು ತರಿಸಿ ಕೊಳ್ಳಲಾಗುತ್ತದೆ. ಎರೆಹುಳುಗಳು ಮರಿ ಹಾಕುವುದರಿಂದ ಎರೆಹುಳು ಸಂಖ್ಯೆಯೂ ಹೆಚ್ಚಾಗಿ ಗೊಬ್ಬರದಲ್ಲಿನ ಫಲವತ್ತತೆ ಹೆಚ್ಚಾಗುತ್ತದೆ. ಅಲ್ಲದೆ ಇಲಿ–ಹೆಗ್ಗಣಗಳಿಂದ ಎರೆಹುಳು ಕಾಯುವುದು ಕೂಡ ಸವಾಲಾಗಿದ್ದು, ಹೆಗ್ಗಣಗಳು ಬಾರದಂತೆ ಸುತ್ತಲೂ ಬಲೆ ಹಾಗೂ ಬೋನ್ ಇಡಲಾಗಿದೆ ಎಂದು ತಿಳಿಸಿದರು.

ಬೇಡಿಕೆ ಜೊತೆಗೆ ಆದಾಯವೂ ಹೆಚ್ಚಾಗುತ್ತಿದೆ: ವರ್ಷದಿಂದ ವರ್ಷಕ್ಕೆ ಎರೆಹುಳು ಗೊಬ್ಬರಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ರಾಜ್ಯದ ನಾನಾ ಭಾಗಗಳಿಂದ ಬಂದು ಎರೆಹುಳು ಗೊಬ್ಬರ ಖರೀದಿಸುತ್ತಾರೆ. ಕೆ.ಜಿಗೆ 15 ರೂ. ನಂತೆ ಮಾರಾಟ ಮಾಡಲಾಗುತ್ತಿದ್ದು, ಮೃಗಾಲಯದ ಆದಾಯದ ಭಾಗದಲ್ಲಿ ಒಂದಾಗಿದೆ ಎಂದು ಮೃಗಾಲಯದ ಪಿಆರ್‌ಓ ನಿಶ್ಚಲ್ ತಿಳಿಸಿದರು.

98 ಸಾವಿರ ಕೆಜಿ ಮಾರಾಟ, 14.71 ಲಕ್ಷ ಆದಾಯ: 2024ರ ಏಪ್ರಿಲ್‌ನಿಂದ 2025ರ ಮಾರ್ಚ್‌ವರೆಗೆ 98,085 ಕೆ.ಜಿ ಎರೆಹುಳು ಗೊಬ್ಬರ ಮಾರಾಟ ಮಾಡಲಾಗಿದ್ದು, 14,71,275 ರೂ. ಆದಾಯ ಸಂಗ್ರಹವಾಗಿದೆ. ಇದು ಮೃಗಾಲಯದ ಮುಖ್ಯ ಆದಾಯ ಮೂಲವಲ್ಲದಿದ್ದರೂ, ರೈತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಹಾಗೂ ಮೃಗಾಲಯದಲ್ಲಿ ಉತ್ಪನ್ನವಾಗುವ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಎರೆಹುಳು ಗೊಬ್ಬರ ತಯಾರಿಕಾ ಘಟಕ ಕಾರ್ಯನಿರ್ವಹಿಸುತ್ತಿದೆ ಎಂದು ಮೃಗಾಲಯದ ಎಕ್ಸಿಕ್ಯೂಟಿವ್ ಡೈರೆಕ್ಟರ್ ಪಿ.ಅನುಷಾ ತಿಳಿಸಿದರು.

ಇಂದು ಪೊಲೀಸರ ಸಂಸ್ಮರಣಾ ದಿನ



ಬೆಂಗಳೂರು, ಅ.20(ಕೆಎಂಶಿ)– ರಾಷ್ಟ್ರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಾಗ, ರಾಷ್ಟ್ರ ರಕ್ಷಣೆ ಮಾಡುವಾಗ ಮತ್ತು ಇತರೆ ಕರ್ತವ್ಯ ನಿರತ ಅವಧಿಯಲ್ಲಿ ಪ್ರಾಣ ತ್ಯಾಗ ಮಾಡಿದ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು, ಗೌರವ ಪೂರಕವಾಗಿ ಸ್ಮರಿಸಲು ರಾಷ್ಟ್ರಾದ್ಯಂತ ಪ್ರತಿ ವರ್ಷ ಅ.21ನೇ ತಾರೀಖಿನಂದು ಪೊಲೀಸ್ ಸಂಸ್ಮರಣಾ ದಿನಾಚರಣೆಯನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

1959ನೇ ಅ.21ರಂದು ಕೇಂದ್ರ ಮೀಸಲು ಪೊಲೀಸ್ ಪಡೆಯ ಎಸ್.ಐ.ಕರಂಸಿಂಗ್ ನೇತೃತ್ವದ 20 ಜನರ ತಂಡ ಭಾರತ ಮತ್ತು ಚೈನಾ ದೇಶದ ಗಡಿ ಪ್ರದೇಶದ ಲಡಾಕ್ ಹಾಟ್‌ಸ್ಪಿಂಗ್ ಎಂಬ ಸ್ಥಳದಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿರುವಾಗ ನೆರೆಯ ಚೈನಾ ದೇಶದ ಸೈನಿಕರು ಹಠಾತ್ತನೆ ಆಕ್ರಮಣ ಮಾಡಿ ಕರಂಸಿಂಗ್ ಮತ್ತು ಇತರೆ 9 ಸಿಬ್ಬಂದಿಯನ್ನು ಹತ್ಯೆ ಮಾಡಿದ್ದು, ಹುತಾತ್ಮರ ದೇಹಗಳನ್ನು 1959ನೇ ಅ.28ರಂದು ಭಾರತಕ್ಕೆ ಹಸ್ತಾಂತರಿಸಲಾಗಿದ್ದು, ಸಕಲ ಪೊಲೀಸ್ ಗೌರವಗಳೊಂದಿಗೆ ಅಂತಿಮ ಸಂಸ್ಕಾರ ಮಾಡಲಾಗಿತ್ತು.

ಈ ದಾರುಣ ಘಟನೆಯಲ್ಲಿ ಪ್ರಾಣ ತ್ಯಾಗ ಮಾಡಿದವರ ನೆನಪಿನಲ್ಲಿ ರಾಷ್ಟ್ರದಲ್ಲಿ ಮೃತರ ಗೌರವಾರ್ಥ ಪೊಲೀಸ್ ಸಂಸ್ಮರಣಾ ದಿನಾಚರಣೆ ಆಚರಿಸಲಾಗುತ್ತಿದೆ. ಈ ಪರಂಪರೆಯಂತೆ ಅ.21ರಂದು ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನ ಮೈಸೂರು ರಸ್ತೆ ಸಿ.ಎ.ಆರ್ ಕೇಂದ್ರ ಸ್ಥಾನದಲ್ಲಿ ಪೊಲೀಸ್ ಸಂಸ್ಕರಣಾ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ವೇಳೆ ಹುತಾತ್ಮರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಗೌರವ ನಮನ ಸಲ್ಲಿಸಲಿದ್ದಾರೆ. ಗೃಹ ಸಚಿವರಾದ ಡಾ.ಜಿ.ಪರಮೇಶ್ವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು ರಾಜ್ಯದ ಪೊಲೀಸ್ ಮುಖ್ಯಸ್ಥರು, ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿಯವರು ಸೇರಿದಂತೆ ವಿವಿಧ ದರ್ಜೆಯ ಕಾರ್ಯನಿರತ ಅಧಿಕಾರಿಗಳು, ಬೆಂಗಳೂರು ನಗರದಲ್ಲಿನ ಕೇಂದ್ರ ಪೊಲೀಸ್ ಘಟಕಗಳ ಮುಖ್ಯಸ್ಥರು ಗೌರವವನ್ನು ಸಮರ್ಪಿಸಲಿದ್ದಾರೆ.

2024ನೇ ಸೆಪ್ಟೆಂಬರ್ 2ರಿಂದ 2025ನೇ ಆಗಸ್ಟ್ 31ರ ನಡುವಿನ ಅವಧಿಯಲ್ಲಿ ಭಾರತಾದ್ಯಂತ ಒಟ್ಟು 191 ವಿವಿಧ ದರ್ಜೆಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಣೆಯ ಅವಧಿಯಲ್ಲಿ ಮೃತಪಟ್ಟಿದ್ದು, ಕರ್ನಾಟಕ ರಾಜ್ಯದಲ್ಲಿ ಒಟ್ಟು 8 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯ ನಿರ್ವಹಣೆಯ ಅವಧಿಯಲ್ಲಿ ಮೃತಪಟ್ಟಿದ್ದಾರೆ.

ಹಿಟ್ ಅಂಡ್ ರನ್ ನಾಯಕರ ಪಟ್ಟಿಗೆ ಸಂಸದ ರಾಘವೇಂದ್ರ ಸೇರುವುದು ಬೇಡ



ಬೆಂಗಳೂರು, ಅ.20 (ಕೆಎಂಶಿ)– ಸಂಸದ ರಾಘವೇಂದ್ರ ಅವರು ಹಿಟ್ ಅಂಡ್ ರನ್ ನಾಯಕರ ಪಟ್ಟಿಗೆ ಸೇರುವುದು ಬೇಡ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಹಾರ ಚುನಾವಣೆಗೆ ಕರ್ನಾಟಕದಿಂದ ಹಣ ಹೋಗುತ್ತಿದೆ. ಇದಕ್ಕಾಗಿ ಅಧಿಕಾರಿಗಳಿಗೆ ಕಿರುಕುಳ ಹೆಚ್ಚಾಗಿದೆ ಎನ್ನುವ ಬಿ.ವೈ.ರಾಘವೇಂದ್ರ ಅವರ ಆರೋಪದ ಬಗ್ಗೆ ಕೇಳಿದಾಗ, ಅವರ ಬಳಿ ದಾಖಲೆಗಳಿದ್ದರೆ ಅದನ್ನು ಬಿಡುಗಡೆ ಮಾಡಿ ಆರೋಪ ಮಾಡಲಿ. ಹಿಟ್ ಅಂಡ್ ರನ್ ಮಾಡುವ ಒಂದಷ್ಟು ನಾಯಕರಿದ್ದಾರಲ್ಲಾ ಅವರಂತೆ ರಾಘವೇಂದ್ರ ಅವರು ಆಗುವುದು ಬೇಡ. ರಾಘವೇಂದ್ರ ಅವರ ಹೆಸರು ಸುಳ್ಳಿಗೆ ಮತ್ತೊಂದು ಉದಾಹರಣೆಯಂತಾಗುವುದು ಬೇಡ ಎಂದು ತಿರುಗೇಟು ನೀಡಿದರು.

ಆದಷ್ಟು ಜಾಗರೂಕತೆಯಿಂದ ಪಟಾಕಿ ಸಿಡಿಸಬೇಕು. ಹಸಿರ ಪಟಾಕಿ ಮಾತ್ರವೇ ಬಳಸಬೇಕು. ಈಗಾಗಲೇ ಸಣ್ಣಪುಟ್ಟ ಅವಘಡಗಳ ಸುದ್ದಿ ಕೇಳಿಬರುತ್ತಿದೆ. ಯಾವುದೇ ಸಿಡಿಮದ್ದುಗಳನ್ನು ಸಿಡಿಸುವಾಗಲೂ ಎಚ್ಚರವಿರಲಿ. ಈ ವರ್ಷ ರಾಜ್ಯದಲ್ಲಿ ಉತ್ತಮವಾಗಿ ಮಳೆ ಬಂದಿದೆ. ಸಮೃದ್ಧಿಯಾಗಿ ಬೆಳೆ ಬಂದಿದೆ. ಪ್ರತಿವರ್ಷವೂ ಸಮೃದ್ಧಿಯಾಗಿರಲಿ ಎಂದರು.

ದೇಶ – ವಿದೇಶ

ಪಟಾಕಿ ಅವಘಡ: ತ.ನಾಡಿನಲ್ಲಿ 89 ಜನರಿಗೆ ಗಾಯ



ಚೆನ್ನೈ: ಪಟಾಕಿ ಅವಘಡಗಳಿಂದಾಗಿ ರಾಜ್ಯದಾದ್ಯಂತ ಇದುವರೆಗೆ 89 ಜನರು ಗಾಯಗೊಂಡಿದ್ದಾರೆ ಎಂದು ತಮಿಳುನಾಡು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮಾ. ಸುಬ್ರಮಣಿಯನ್ ತಿಳಿಸಿದ್ದಾರೆ.

ಕಿಲ್ಪಾಕ್ ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿ ತುರ್ತು ಸಂದರ್ಭದಲ್ಲಿ ಅಗತ್ಯ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದ್ದಾರೆ. ಪಟಾಕಿ ಅವಘಡಗಳಿಂದಾಗಿ ರಾಜ್ಯದಲ್ಲಿ 89 ಜನರು ಗಾಯಗೊಂಡಿದ್ದಾರೆ. ಈ ಪೈಕಿ 41 ಜನರು ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ. ಉಳಿದ 48 ಜನರಿಗೆ ಚಿಕಿತ್ಸೆ ನಡೆಯುತ್ತಿದೆ. 32 ಜನರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಆದರೆ, ಯಾವುದೇ ಸಾವು ಸಂಭವಿಸಿರುವುದು ವರದಿಯಾಗಿಲ್ಲ ಎಂದು ಹೇಳಿದ್ದಾರೆ. ಪಟಾಕಿ ಅವಘಡಗಳಿಗೆ ತುರ್ತು ಚಿಕಿತ್ಸೆ ನೀಡಲು ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಜಿಲ್ಲಾ ಸರ್ಕಾರಿ ಕೇಂದ್ರ ಆಸ್ಪತ್ರೆಗಳು ಮತ್ತು ಬ್ಲಾಕ್ ಸರ್ಕಾರಿ ಆಸ್ಪತ್ರೆಗಳಲ್ಲಿ ಸುಟ್ಟಗಾಯಗಳ ಚಿಕಿತ್ಸೆಗಾಗಿ ವಿಶೇಷ ವಾರ್ಡ್ ಸ್ಥಾಪಿಸಲಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ 20 ಹಾಸಿಗೆಗಳನ್ನು ಮೀಸಲಿರಿಸಲಾಗಿದೆ.

ರನ್‌ವೇಯಿಂದ ಜಾರಿ ಸಮುದ್ರಕ್ಕೆ ಬಿದ್ದ ಕಾರ್ಗೋ ವಿಮಾನ, ಇಬ್ಬರು ಸಾವು

ಹಾಂಕಾಂಗ್: ದುಬೈನಿಂದ ಹಾಂಕಾಂಗ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸರಕು ಸಾಗಾಣಿಕೆ ವಿಮಾನವೊಂದು ಸೋಮವಾರ ಮುಂಜಾನೆ ಲ್ಯಾಂಡಿಂಗ್ ವೇಳೆ ರನ್‌ವೇಯಿಂದ ಸಮುದ್ರಕ್ಕೆ ಜಾರಿ ಬಿದ್ದು ಇಬ್ಬರು ಮೃತಪಟ್ಟಿದ್ದಾರೆ.



ಸೋಮವಾರ ಮುಂಜಾನೆ 3.50ರ ವೇಳೆಗೆ ಈ ಘಟನೆ ಸಂಭವಿಸಿದ್ದು, ಮೃತಪಟ್ಟ ಇಬ್ಬರು ಈ ದುರಂತದ ಸಮಯದಲ್ಲಿ ವಿಮಾನ ನಿಲ್ದಾಣದ ವಾಹನದಲ್ಲಿದ್ದರು ಎಂದು ಹೇಳಲಾಗಿದೆ. ಎಮಿರೇಟ್ ವಿಮಾನ ಸಂಸ್ಥೆಯಡಿ ಈ ಕಾರ್ಗೋ ವಿಮಾನ ಕಾರ್ಯಾಚರಣೆ ನಡೆಸುತ್ತಿತ್ತು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ವಿಮಾನಯಾನ ಸಂಸ್ಥೆ ತಕ್ಷಣಕ್ಕೆ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ರಾಯ್ಟರ್ಸ್ ವರದಿ ಮಾಡಿದೆ. ವಿಮಾನದಲ್ಲಿದ್ದ ಎಲ್ಲ ನಾಲ್ವರನ್ನು ರಕ್ಷಿಸಿದ್ದು, ವಿಮಾನ ನಿಲ್ದಾಣ ಸಿಬ್ಬಂದಿ ಪೈಕಿ ಒಬ್ಬರನ್ನೂ ರಕ್ಷಿಸಲಾಗಿದೆ. ಮತ್ತೊಬ್ಬರು ನಾಪತ್ತೆಯಾಗಿದ್ದಾರೆ ಎಂದು ವಿಮಾನ ನಿಲ್ದಾಣ ಅಧಿಕಾರಿಗಳು ಹೇಳಿದ್ದಾರೆ.

ಕಾನ್‌ಸ್ಟೇಬಲ್ ಹತ್ಯೆಗೈದು ಪರಾರಿಯಾದವನ ಎನ್‌ಕೌಂಟರ್

ಹೈದರಾಬಾದ್: ನಿಜಾಮಾಬಾದ್ ಪೊಲೀಸ್ ಕಮಿಷನರೇಟ್‌ನ ಕಾನ್‌ಸ್ಟೆಬಲ್ ಒಬ್ಬರಬನ್ನು ಹತ್ಯೆ ಮಾಡಿ ಪರಾರಿಯಾಗಿದ್ದ ಕಳ್ಳತನದ ಆರೋಪಿ ಶೇಖ್ ರಿಯಾಜ್ (24) ಎಂಬುವನನ್ನು ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ನಿಜಾಮಾಬಾದ್‌ನ ಸಾರಂಗಪುರ ಬಳಿ ಎನ್‌ಕೌಂಟರ್ ನಡೆದಿದೆ. ಈ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ರಿಯಾಜ್‌ನನ್ನು ಆಸ್ಪತ್ರೆಗೆ ದಾಖಲಿಸಿತಾದರೂ ಆತ ಬದುಕುಳಿಯಲಿಲ್ಲ ಎಂದು ಹೈದರಾಬಾದ್‌ನಲ್ಲಿರುವ ಡಿಜಿಪಿ ಕಚೇರಿ ತಿಳಿಸಿದೆ. ಸಾರಂಗಪುರ ಬಳಿ ರಿಯಾಜ್ ಅವಿತಿರುವ ಮಾಹಿತಿ ಆಧರಿಸಿ ಪೊಲೀಸರು ಬಂಧಿಸಲು ಹೋದ ವೇಳೆ ಪೊಲೀಸರ ಬಳಿ ಪಿಸ್ತೂಲ್ ಕಸಿದು ಗುಂಡು ಹಾರಿಸಲು ಪ್ರಯತ್ನಿಸಿದ್ದ. ಇದಕ್ಕೆ ಪ್ರತಿಯಾಗಿ ಪೊಲೀಸರು ಗುಂಡಿನ ದಾಳಿ ನಡೆಸಿದ್ದಾಗ ಆತ ಸಾವನ್ನಪ್ಪಿದ್ದಾನೆ. ಘಟನೆ ವೇಳೆ ಕೆಲ ಪೊಲೀಸರು ಗಾಯಗೊಂಡಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವಾಹನ ಕಳ್ಳತನದ ಪ್ರಕರಣದಲ್ಲಿ ಬಂಧಿತನಾಗಿದ್ದ ಶೇಖ್ ರಿಯಾಜ್ ಎಂಬಾತನನ್ನು ಕಳೆದ ಶುಕ್ರವಾರ ನಿಜಾಮಾಬಾದ್ ಪೊಲೀಸ್ ಠಾಣೆಗೆ ದ್ವಿಚಕ್ರ ವಾಹನದಲ್ಲಿ ಕರೆದೊಯ್ಯುತ್ತಿದ್ದ ಕಾನ್‌ಸ್ಟೆಬಲ್ ಇ. ಪ್ರಮೋದ್ ಎನ್ನುವರ (42) ಎದೆಗೆ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ.


ರಷ್ಯಾದಿಂದ ತೈಲ ಖರೀದಿ ಮುಂದುವರಿದರೆ ಭಾರೀ ಸುಂಕ ಹಾಕ್ತೇವೆ



ವಾಷಿಂಗ್ಟನ್: ರಷ್ಯಾದಿಂದ ತೈಲ ಖರೀದಿಸುವುದನ್ನು ಭಾರತ ಮುಂದುವರಿಸಿದರೆ ಭಾರಿ ಸುಂಕ ತೆರಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಏರ್‌ಫೋರ್ಸ್ ಒನ್ ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ಸ್ಥಗಿತ ಗೊಳಿಸಲಿದೆ ಎನ್ನುವ ಭರವಸೆಯನ್ನು ಪ್ರಧಾನಿ ನರೇಂದ್ರ ಮೋದಿ ನೀಡಿದ್ದಾರೆ ಎಂದೂ ಟ್ರಂಪ್ ಪುನರುಚ್ಚರಿಸಿದ್ದಾರೆ. ಮಾರುಕಟ್ಟೆಯ ಬೇಡಿಕೆ ಆಧರಿಸಿ ವಿವಿಧ ಮೂಲಗಳಿಂದ ಇಂಧನ ಖರೀದಿಸಲು ಆದ್ಯತೆ ನೀಡಲಾಗುವುದು ಎಂಬ ಭಾರತದ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಟ್ರಂಪ್, ಭಾರತ ಅಂತಹ ಹೇಳಿಕೆಗಳನ್ನು ನೀಡಿದೆ ಎಂದು ನಾನು ನಂಬುವುದಿಲ್ಲ. ಮೋದಿ ಅವರೊಂದಿಗೆ ಮಾತನಾಡಿದೆ. ಅವರು ರಷ್ಯಾದೊಂದಿಗೆ ತೈಲ ಖರೀದಿಸುವ ವ್ಯವಹಾರ ಮಾಡುವುದಿಲ್ಲ ಎಂದು ಭರವಸೆ ನೀಡಿದರು ಎಂದು ತಿಳಿಸಿದ್ದಾರೆ. ರಷ್ಯಾದಿಂದ ಕಚ್ಚಾ ತೈಲ ಖರೀದಿಯ ಮೂಲಕ ಭಾರತವು ರಷ್ಯಾಗೆ ಯುದ್ಧಕ್ಕೆ ಹಣಕಾಸು ಒದಗಿಸಲು ಸಹಾಯ ಮಾಡುತ್ತಿದೆ ಎಂದು ಅಮೆರಿಕ ಹೇಳುತ್ತಲೇ ಬಂದಿದೆ.

ಬಿಹಾರದಲ್ಲಿ 64 ಕೋಟಿ ಮೌಲ್ಯದ ಮದ್ಯ, ನಗದು ವಶ



ಪಟ್ನಾ(ಬಿಹಾರ): ಅಕ್ಟೋಬರ್ 6ರಂದು ವಿಧಾನಸಭೆ ಚುನಾವಣಾ ವೇಳಾಪಟ್ಟಿ ಘೋಷಣೆಯಾದಂದಿನಿಂದ ಬಿಹಾರದಾದ್ಯಂತ 64.13 ಕೋಟಿ ಮೌಲ್ಯದ ಮದ್ಯ, ನಗದು, ಮಾದಕ ದ್ರವ್ಯ ಮತ್ತು ಉಚಿತವಾಗಿ ನೀಡಲು ಸಂಗ್ರಹಿಸಲಾಗಿದ್ದ ವಸ್ತುಗಳನ್ನು ತನಿಖಾ ಸಂಸ್ಥೆಗಳು ವಶಕ್ಕೆ ಪಡೆದಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಮದ್ಯ ಮುಕ್ತ ರಾಜ್ಯವಾದ ಬಿಹಾರದಲ್ಲಿ ವಶಪಡಿಸಿಕೊಂಡಿರುವ ಈ ವಸ್ತುಗಳಲ್ಲಿ ಮದ್ಯದ ಮೌಲ್ಯವೇ 23.41 ಕೋಟಿ ಆಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿ ಇತ್ತೀಚೆಗೆ ಒದಗಿಸಿದ ಮಾಹಿತಿಯ ಪ್ರಕಾರ, ಉಚಿತವಾಗಿ ನೀಡಲು ಸಂಗ್ರಹಿಲಾದ 14 ಕೋಟಿ ಮೌಲ್ಯದ ವಸ್ತುಗಳು, 4.19 ಕೋಟಿ ನಗದು ಮತ್ತು 16.88 ಕೋಟಿ ಮೌಲ್ಯದ ಮಾದಕ ದ್ರವ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ಅ.6ರಿಂದ ಪೊಲೀಸ್ ಮತ್ತು ಇತರ ತನಿಖಾ ಸಂಸ್ಥೆಗಳು ರಾಜ್ಯದಲ್ಲಿ 753 ಜನರನ್ನು ಬಂಧಿಸಿದ್ದು, 13,587 ಜಾಮೀನುರಹಿತ ವಾರಂಟ್‌ಗಳನ್ನು ಜಾರಿ ಮಾಡಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೀದಿ ನಾಯಿಗಳ ದಾಳಿಗೆ ಜಿಂಕೆ ಬಲಿ



ಕುಶಾಲನಗರ, ಅ.20–ಸಮೀಪದ ಏಳನೇ ಹೊಸಕೋಟೆ ಗ್ರಾಮ ಪಂಚಾಯತಿ ವ್ಯಾಪ್ತಿಯ ತೊಂಡೂರಿನಲ್ಲಿ ಬೀದಿ ನಾಯಿಗಳ ದಾಳಿಗೆ ಜಿಂಕೆಯೊಂದು ಮೃತಪಟ್ಟ ಘಟನೆ ನಡೆದಿದೆ.

ಅಂದಾಜು 20 ವರ್ಷ ಪ್ರಾಯದ ಗಂಡು ಜಿಂಕೆಯನ್ನು ಐದಾರು ನಾಯಿಗಳು ಅಟ್ಟಾಡಿಸಿ ಕೊಂದು ಹಿಂಭಾಗದ ಮಾಂಸವನ್ನು ಭಕ್ಷಿಸಿವೆ. ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಆರ್.ಕೆ.ಚಂದ್ರ ಅವರು, ಘಟನೆಗೆ ಸಂತಾಪ ವ್ಯಕ್ತಪಡಿಸಿ, ವನ್ಯಜೀವಿಗಳ ಜೀವ ಹಾನಿ ತಡೆಗಟ್ಟಲು ಅರಣ್ಯ ಇಲಾಖೆ ಸೂಕ್ತ ಕ್ರಮವಹಿಸಬೇಕು ಎಂದರು.

ಉಪ ವಲಯ ಅರಣ್ಯಾಧಿಕಾರಿ ದೇವಯ್ಯ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಜಿಂಕೆ ಕಳೇಬರ ಕೊಂಡೊಯ್ದು ಅಂತ್ಯಸಂಸ್ಕಾರ ನೆರವೇರಿಸಿದರು. ಈ ಸಂದರ್ಭ ಸ್ಥಳೀಯ ಉದ್ಯಮಿ ಬಿ.ಕೆ.ದರ್ಶನ್ ಹಾಗೂ ಗ್ರಾಮಸ್ಥರು ಇದ್ದರು.

ಮರ ಬಿದ್ದು ರಸ್ತೆ ಸಂಚಾರಕ್ಕೆ ಅಡ್ಡಿ

ನಾಪೋಕ್ಲು, ಅ.20–ಸಮೀಪದ ಬೊಳಿಬಾಣೆಯಲ್ಲಿ ರಸ್ತೆಗೆ ಮರ ಬಿದ್ದು ರಸ್ತೆ ಸಂಚಾರಕ್ಕೆ ಅಡ್ಡಿಯಾದ ಘಟನೆ ಸೋಮವಾರ ಬೆಳಿಗ್ಗೆ ಜರುಗಿದೆ.

ಭಾರಿ ಮಳೆಗಾಳಿಯ ಹಿನ್ನೆಲೆಯಲ್ಲಿ ಹೊದ್ದೂರು ಗ್ರಾಮ ಪಂಚಾಯಿತಿಯ ಹೋದವಾಡ ಗ್ರಾಮದ ಬೊಳಿಬಾಣೆಯಲ್ಲಿ ನಾಪೋಕ್ಲು–ಮೂರ್ನಾಡು ಸಂಪರ್ಕ ರಸ್ತೆಗೆ ಅಡ್ಡಲಾಗಿ ಮರ ಬಿದ್ದು ವಾಹನ ಸಂಚಾರಕ್ಕೆ ಕೆಲಕಾಲ ಅಡ್ಡಿಯಾಯಿತು. ಬಳಿಕ ಗ್ರಾಮಸ್ಥರು ಹಾಗೂ ವಾಹನ ಚಾಲಕರು ಮರವನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.



ಹೊದವಾಡದ ಬೊಳಿಬಾಣೆ ಎಂಬಲ್ಲಿ ರಸ್ತೆಗೆ ಮರ ಬಿದ್ದು ರಸ್ತೆ ಸಂಚಾರಕ್ಕೆ ಅಡ್ಡಿ.

ಆರ್‌ಎಸ್‌ಎಸ್ ಪ್ರಗತಿ ಸಹಿಸದೆ ನಿರ್ಬಂಧ ಹೇರಿರುವ ಸರ್ಕಾರ



ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು

ಮಡಿಕೇರಿ, ಅ.20–ರಾಷ್ಟ್ರೀಯ ಸ್ವಯಂ ಸೇವಕ ಸಂಘ ವಿಶಾಲವಾಗಿ ಬೆಳೆದಿದ್ದು ಇದರ ಪ್ರಗತಿಯನ್ನು ಸಹಿಸಲಾಗದ ರಾಜ್ಯ ಕಾಂಗ್ರೆಸ್ ಸರ್ಕಾರ ಸಂಘಟನೆಯ ಮೇಲೆ ನಿರ್ಬಂಧ ಹೇರಲು ಮುಂದಾಗಿದೆ ಎಂದು ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಆರೋಪಿಸಿದ್ದಾರೆ.

ಆರ್‌ಎಸ್‌ಎಸ್ ಎನ್ನುವುದು ಯಾವುದೇ ಒಂದು ವರ್ಗಕ್ಕೆ ಸೀಮಿತವಾದ ಸಂಘಟನೆಯಲ್ಲ. ಇದರಲ್ಲಿ ರಾಷ್ಟ್ರ ಭಕ್ತಿಯನ್ನು ಹೊಂದಿರುವ ಯಾರು ಬೇಕಾದರೂ ಪಾಲ್ಗೊಳ್ಳಬಹುದಾಗಿದೆ. ಆರ್‌ಎಸ್‌ಎಸ್‌ನಲ್ಲಿ ಮುಸ್ಲಿಂ ರಾಷ್ಟ್ರೀಯ ಮಂಚ್ ಎನ್ನುವ ಶಾಖೆಯೂ ಇದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಚಿವ ಪ್ರಿಯಾಂಕ ಖರ್ಗೆಯವರ ಪತ್ರದ ಆಧಾರದ ಮೇಲೆ ಸಂಘದ ಬೆಳವಣಿಗೆಯನ್ನು ಸಹಿಸಲಾಗದೆ ನಿರ್ಬಂಧ ಹೇರಲು ಮುಂದಾಗಿರುವ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ 'ಧಮ್' ಇದ್ದಲ್ಲಿ ಆರ್‌ಎಸ್‌ಎಸ್ ಸಂಘಟನೆಯನ್ನು ಬ್ಯಾನ್ ಮಾಡಲಿ ಎಂದು ಸವಾಲು ಹಾಕಿದರು. ಆರ್‌ಎಸ್‌ಎಸ್ ಸಂಘಟನೆಯನ್ನು 1979, 1992ರಲ್ಲಿ ಬ್ಯಾನ್ ಮಾಡಲಾಗಿತ್ತಾದರೂ ನಂತರದ ದಿನಗಳಲ್ಲಿ ದೇಶ ಭಕ್ತ ಸಂಘಟನೆಗೆ ಮತ್ತೆ ಅವಕಾಶವನ್ನು ಮಾಡಿಕೊಡಲಾಗಿತ್ತು ಎಂದು ನೆನಪಿಸಿದರು.

ಅಪ್ಪನನ್ನು ಮುಖ್ಯಮಂತ್ರಿ ಮಾಡಲಿ : ಆರ್‌ಎಸ್‌ಎಸ್ ಮೇಲೆ ನಿರ್ಬಂಧ ಹೇರಲು ಪತ್ರ ಬರೆಯುವ ಪ್ರಿಯಾಂಕ ಖರ್ಗೆ ಅವರು ತಮ್ಮ ಅಪ್ಪನನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಿ ಆದರೆ ಅದು ಅವರಿಂದ ಸಾಧ್ಯವಿಲ್ಲ ಎಂದು ವ್ಯಂಗ್ಯವಾಡಿದರು. ಖರ್ಗೆಯವರ ಸ್ವಕ್ಷೇತ್ರವಾಗಿರುವ ಗುಲ್ಬರ್ಗ ಜಿಲ್ಲೆಯಲ್ಲಿ ಕನಿಷ್ಟ 100 ಕಿ.ಮೀ. ರಸ್ತೆ ಸಮರ್ಪಕವಾಗಿಲ್ಲ. ಶಿಕ್ಷಣ ವ್ಯವಸ್ಥೆ ಎನ್ನುವುದು ಅಲ್ಲಿ ಸಂಪೂರ್ಣ ಹದತಪ್ಪಿದ್ದು, ಯಾವುದೇ ಪರೀಕ್ಷೆಗಳಲ್ಲಿ ಗುಲ್ಬರ್ಗ ಎನ್ನುವುದು ಕೊನೆಯ ಸ್ಥಾನದಲ್ಲಿರುತ್ತದೆ. ಜನರಿಗೆ ಯೋಗ್ಯ ಶಿಕ್ಷಣವನ್ನು ನೀಡಿದಲ್ಲಿ ತಮಗೇ ಕುತ್ತು ಎನ್ನುವುದು ಖರ್ಗೆಯವರಿಗೆ ತಿಳಿದಿದೆ ಎಂದು ಮೂದಲಿಸಿದರು. ಅಪ್ಪನ ಹೆಸರು ಹೇಳಿ ಪ್ರಿಯಾಂಕ ಖರ್ಗೆ ದರ್ಬಾರು ನಡೆಸುತ್ತಿದ್ದಾರೆಂದು ಟೀಕಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಬೆಂಗಳೂರಿಗೆ ಬರಬೇಕಿದ್ದ ಗೂಗಲ್ ಉದ್ಯಮವು ಮೂಲ ಸೌಲಭ್ಯಗಳ ಕೊರತೆಯ ಕಾರಣಗಳ ಹಿನ್ನೆಲೆ ರಾಜ್ಯದ ಕೈತಪ್ಪಿ ನೆರೆ ರಾಜ್ಯಕ್ಕೆ ಹೋಗಿದೆ ಮೊದಲು ಅಗತ್ಯ ಮೂಲ ಸೌಲಭ್ಯ ಒದಗಿಸುವುದರ ಕಡೆ ಚಿಂತಿಸಬೇಕಿದ್ದ ಐಟಿ ಬಿಟಿ ಸಚಿವ ಪ್ರಿಯಾಂಕ ಖರ್ಗೆ, ಅದನ್ನು ಬಿಟ್ಟು ಆರ್‌ಎಸ್‌ಎಸ್ ನಿರ್ಬಂಧದ ಹಿಂದೆ ಬಿದ್ದಿರುವುದಾಗಿ ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ವಕ್ತಾರ ತಳೂರು ಕಿಶೋರ್ ಕುಮಾರ್, ಪ್ರಧಾನ ಕಾರ್ಯದರ್ಶಿಗಾದ ಮಹೇಶ್ ಜೈನಿ, ವಿ.ಕೆ. ಲೋಕೇಶ್ ಮತ್ತು ನೆಲ್ಲೀರ ಚಲನ್ ಉಪಸ್ಥಿತರಿದ್ದರು.

ದುಬೈಯಲ್ಲಿ ಕೈಲ್ ಮುಹೂರ್ತ ಹಬ್ಬ ಆಚರಣೆ



ಮಡಿಕೇರಿ, ಅ.20–ಅರಬ್ ದೇಶದಲ್ಲಿ ನೆಲೆಸಿರುವ ಕೊಡಗು ಅರೆಭಾಷೆ ಗೌಡ ಕುಟುಂಬಗಳು ಸೇರಿ ಸತತ 4ನೇ ಬಾರಿಗೆ ಕೈಲ್ ಮುಹೂರ್ತ ಹಬ್ಬವನ್ನು ದುಬೈಯ ಇಂಡಿಯ ಕ್ಲಬ್‌ನಲ್ಲಿ ಅದ್ದೂರಿಯಾಗಿ ಆಚರಿಸಿದರು.

ಆಯುಧ ಪೂಜೆಯೊಂದಿಗೆ ದಿನ ಪ್ರಾರಂಭಿಸಿ, ಸ್ವದೇಶದಿಂದ ಆಗಮಿಸಿದ್ದ ಹೇಮಾವತಿ ಅಡ್ಕರ್ ಜ್ಯೋತಿ ಬೆಳಗಿಸಿ ಒಳಾಂಗಣ ಆಟೋಟಗಳಿಗೆ ಚಾಲನೆ ನೀಡಿದರು. ಮಕ್ಕಳಿಗೆ ಕಾಳು ಹೆರಕುವುದು, ಓಟದ ಸ್ಪರ್ಧೆ, ವಯಸ್ಕರಿಗೂ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಪುಟಾಣಿ ಮಕ್ಕಳ ನೃತ್ಯ ಪ್ರದರ್ಶನ ದಿನದ ಅತೀ ದೊಡ್ಡ ಆಕರ್ಷಣೆಯಾಗಿತ್ತು. ಸಾಂಪ್ರದಾಯಿಕ ಭೋಜನದ ನಂತರ, ವಾಲಗ ಕುಣಿತ ಹಾಗೂ ಪ್ರಶಸ್ತಿ ವಿತರಣ ಕಾರ್ಯಕ್ರಮಗಳು ಜರುಗಿದವು. ಉದ್ಯಮಿ, ಮಂಜುನಾಥ ಪೆರುಬಾಯಿಯವರು ಮಾತನಾಡಿದರು. ದುಬೈನ ಹೃದಯಭಾಗದಲ್ಲಿರುವ ಪ್ರಮುಖ ಪ್ರಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಸಂಪೂರ್ಣ ಕಾರ್ಯಕ್ರಮವನ್ನು ಅಚ್ಚಂಡಿರ, ಆನೇರ, ಬೆಳ್ಯನ, ಕಡ್ಲೇರ, ಕಲ್ಲಂಬಿ, ಕರ್ಣೆಯ್ಯನ, ಕತ್ರಿಕೊಲ್ಲಿ, ಕೊಂಪುಳಿರ ಹಾಗೂ ಮೊಟ್ಟನ ಕುಟುಂಬಗಳು ಸುವ್ಯವಸ್ಥಿತವಾಗಿ ಆಯೋಜಿಸಿದ್ದವು.

ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ



ಲೆದರ್‌ಬಾಲ್ ಕ್ರಿಕೆಟ್ ಪಂದ್ಯಗಳನ್ನು ಶಾಸಕ ಅಜ್ಜಕುಟ್ಟಿರ ಎಸ್ ಪೊನ್ನಣ್ಣ ಬ್ಯಾಟ್ ಮಾಡುವುದರ ಮೂಲಕ ಉದ್ಘಾಟಿಸಿದರು.

ವಿರಾಜಪೇಟೆ, ಅ.20–ಮಾನವ ಬದುಕಿನಲ್ಲಿ ಏರಿಳಿತಗಳು ಸಹಜ. ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕಾರ ಮಾಡುವ ಗುಣಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಶಾಸಕ ಅಜ್ಜಕುಟ್ಟಿರ ಎಸ್ ಪೊನ್ನಣ್ಣ ಹೇಳಿದರು.

ಕೊಡವ ಕ್ರಿಕೆಟ್ ಅಕಾಡೆಮಿ ವತಿಯಿಂದ ಅಂತರ ಕೊಡವ ಸಮಾಜಗಳ ನಡುವೆ ಇಲ್ಲಿನ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ ಲೆದರ್‌ಬಾಲ್ ಕ್ರಿಕೆಟ್ ಪಂದ್ಯಾಟವನ್ನು ಉದ್ಘಾಟಿಸಿ, ಕೇವಲ ಕೌಟುಂಬಿಕ ಪಂದ್ಯಗಳಿಗೆ ಮಾತ್ರ ಸೀಮಿತವಾಗಿದ್ದರೆ, ಉತ್ತಮ ಪ್ರತಿಭೆಗಳು ಹೊರಹೊಮ್ಮಲು ಸಾಧ್ಯವಿಲ್ಲ. ಆದರೆ ಲೆದರ್ ಬಾಲ್ ಕ್ರಿಕೆಟ್ ಪಂದ್ಯಗಳನ್ನು ಆಡುವುದರಿಂದ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡು ಜೀವನದಲ್ಲಿ ಉತ್ತಮ ಅವಕಾಶಗಳನ್ನು ಪಡೆಯಬಹುದಾಗಿದೆ. ಇಂತಹ ಪಂದ್ಯಾವಳಿಗಳಿಗೆ ಜನರ ಸಹಕಾರ, ಪ್ರೋತ್ಸಾಹ ಅತ್ಯಾವಶ್ಯಕ. ಕ್ರೀಡೆಗಳಲ್ಲಿ ಸೋತರು ಕ್ರೀಡಾಸ್ಫೂರ್ತಿಯನ್ನು ಕಂಡರೆ, ರಾಜಕೀಯದಲ್ಲಿ ಸೋಲು ಕೋಪಕ್ಕೆ ಮೂಲವಾಗುತ್ತದೆ ಎಂದರು.

ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚೆರಿಯಪಂಡ ಸುರೇಶ್ ನಂಜಪ್ಪ ಮಾತನಾಡಿ, ನಾವು ಎಲ್ಲಾ ರೀತಿಯ ಅವಕಾಶಗಳನ್ನು ಪಡೆದಿದ್ದರು ಅದನ್ನು ಪರಿಪೂರ್ಣತೆ ಎನ್ನಲಾಗದು. ಕೊಡವ ಕ್ರಿಕೇಟ್ ಅಕಾಡೆಮಿ ಯುವಜನತೆಯ ಉತ್ತಮ ಭವಿಷ್ಯಕ್ಕಾಗಿ ಆಯೋಜಿಸಿರುವ ಲೆದರ್‌ಬಾಲ್ ಕ್ರಿಕೆಟ್ ಪಂದ್ಯಾಟಗಳಿಂದ ಉತ್ತಮ ಕ್ರೀಡಾಪಟುಗಳು ಹೊರಬರಲು ಸಾಧ್ಯವಾಗುತ್ತದೆ. ಅತಿಥಿ ಆಟಗಾರರ ಸಂಖ್ಯೆಯನ್ನು ಹೆಚ್ಚಿಸಿದರೆ ಅವರ ಅನುಭವಗಳ ಆಧಾರವು ಇಲ್ಲಿನ ಆಟಗಾರರಿಗೆ ಲಭ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ಬೆಂಗಳೂರು ಕೊಡವ ಸಮಾಜದಲ್ಲಿ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾಟವನ್ನು ಆಯೋಜಿಸಿ ಯುವ ಆಟಗಾರರಿಗೆ ಉತ್ತೇಜನ ನೀಡಲಾಗುವುದು ಎಂದು ಹೇಳಿದರು.

ಚಿತ್ರನಟಿ ಹಾಗು ಸಮಾಜಸೇವಕಿ ಕಾಣತಂಡ ಬೀನಾ ಜಗದೀಶ್ ಮಾತನಾಡಿ, ಲೆದರ್‌ಬಾಲ್ ಕ್ರಿಕೆಟ್ ಪಂದ್ಯಾವಳಿಗಳು ಕ್ರೀಡಾಸ್ಪರ್ಧಿಗಳ ಭವಿಷ್ಯಕ್ಕೆ ಸ್ಫೂರ್ತಿಯಾಗಲಿದೆ. ಕೊಡಗಿನಲ್ಲಿ ಅನೇಕ ಕ್ರಿಕೆಟ್ ಆಡುವ ಯುವ ಪ್ರತಿಭೆಗಳಿದ್ದು ಇಂತಹ ಪಂದ್ಯಾವಳಿಗಳು ಅವಕಾಶವನ್ನು ಕಲ್ಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ, ಚಿತ್ರನಟ ಕೂತಂಡ ತಾರಕ್ ಪೊನ್ನಪ್ಪ ಅತಿಥಿಗಳಾಗಿ ಮಾತನಾಡಿದರು. ಮಾಳೇಟಿರ ಅಜಿತ್ ಪೂವಣ್ಣ ಪ್ರಾರ್ಥಿಸಿದರು. ಚೆಕ್ಕೆರ ಚಂದ್ರಪ್ರಕಾಶ್ ಸ್ವಾಗತಿಸಿದರು. ಚೋಕಿರ ಅನಿತಾ ಕಾರ್ಯಕ್ರಮ ನಿರೂಪಿಸಿದರು.

ಪೊನ್ನಂಪೇಟೆಯಲ್ಲಿ ತೋಕ್ ನಮ್ಮೆಗೆ ಅದ್ದೂರಿ ಚಾಲನೆ



ಸಂಸದ ಯದುವೀರ್ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಮೂಲಕ ಸಂಭ್ರಮಿಸಿದರು.

ಏಕತೆಯನ್ನು ಸಾಧಿಸಲು ಕ್ರೀಡೆ ಸಹಕಾರಿಯಾಗಿದೆ. ಒಂದು ಕ್ರೀಡೆಯನ್ನು ಯಾವ ರೀತಿ ಆಯೋಜಿಸಬೇಕು ಎಂಬುದನ್ನು ಕೊಡವ ಜನಾಂಗದವರನ್ನು ನೋಡಿ ಕಲಿಯಬೇಕು ಎನ್ನುವಷ್ಟರ ಮಟ್ಟಿಗೆ ಕೊಡವರು ಕ್ರೀಡಾಕೂಟಗಳನ್ನು ಆಯೋಜನೆ ಮಾಡುತ್ತಾ ಬರುತ್ತಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ಮಡಿಕೇರಿ, ಅ.20–ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲಾ ಮೈದಾನದಲ್ಲಿ ತೂಚಮಕೇರಿ ಪೆಮ್ಮಂಡ ಕುಟುಂಬಸ್ಥರು ಆಯೋಜಿಸಿರುವ ಮೊದಲನೇ ವರ್ಷದ ಕೊಡವ ಕೌಟುಂಬಿಕ ತೋಕ್ ನಮ್ಮೆಗೆ ಅದ್ದೂರಿ ಚಾಲನೆ ನೀಡಲಾಯಿತು.

ಮೊದಲ ವರ್ಷವೇ ದಾಖಲೆಯ 236 ತಂಡಗಳು ಪಾಲ್ಗೊಳ್ಳುವ ಮೂಲಕ ತೋಕ್ ನಮ್ಮೆಗೆ ಆರಂಭಿಕ ಯಶಸ್ಸು ದೊರೆಯಿತು. ಪೊನ್ನಂಪೇಟೆಯ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ವಾಲಗದೊಂದಿಗೆ ಮೆರವಣಿಗೆ ಮೂಲಕ ಮೈದಾನಕ್ಕೆ ಆಗಮಿಸಿದ ಪೆಮ್ಮಂಡ ಕುಟುಂಬದ ಸದಸ್ಯರು ಮೈದಾನದಲ್ಲಿ ಸಮಾಗಮವಾಗುವ ಮೂಲಕ ಒಗ್ಗಟ್ಟು ತೋರಿದರು. ಕೊಡವ ಸಾಹಿತ್ಯ ಅಕಾಡಮಿ ಮಾಜಿ ಅಧ್ಯಕ್ಷ ಪೆಮ್ಮಂಡ ಕೆ. ಪೊನ್ನಪ್ಪ ಹಾಗೂ ಪೆಮ್ಮಂಡ ಕುಟುಂಬದ ಅಧ್ಯಕ್ಷ ಪೆಮ್ಮಂಡ ಅರುಣರ ಅಧ್ಯಕ್ಷತೆಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಿಯಪ್ಪ ಗುಂಡು ಹೊಡೆಯುವ ಮೂಲಕ ತೋಕ್ ನಮ್ಮೆಗೆ ಚಾಲನೆ ನೀಡಿದರು.

ಶಾಸಕ ಎ ಎಸ್.ಪೊನ್ನಣ್ಣ ಮಾತನಾಡಿ, ಕೋವಿಯ ಹಕ್ಕು ಕೊಡವರಿಗೆ ಪಾರಂಪರಿಕವಾಗಿ ಬಂದಿದೆ. ಬ್ರಿಟಿಷರ ಕಾಲದಲ್ಲಿ ಬಂದಂತ ಕೋವಿಯ ಹಕ್ಕು, ಸ್ವಾತಂತ್ರ್ಯ ನಂತರ ಸಂಸತ್ತಿನಲ್ಲಿ ಚರ್ಚೆಯಾಗಿತ್ತು. ಕೊಡವರು ವಿಶೇಷ ಸಮುದಾಯದವರಾದ ಕಾರಣ ಕೋವಿಯ ಹಕ್ಕನ್ನು ಮುಂದುವರೆಸಲಾಯಿತು. ಕೋವಿ ಹಕ್ಕು ನಮಗೆ ಪಾರಂಪರಿಕವಾಗಿ ಬಂದಿದ್ದರೂ 2029ಕ್ಕೆ ಮುಕ್ತಾಯವಾಗಲಿರುವ ನಮ್ಮ ಪಾರಂಪರಿಕ ಹಕ್ಕಿಗಾಗಿ ಪಕ್ಷಾತೀತವಾಗಿ ಎಲ್ಲರೂ ಧ್ವನಿ ಎತ್ತ ಬೇಕಾಗಿದೆ ಎಂದು ಹೇಳಿದರೆ, ಶಾಸಕಿ ಮಂಡೆಪಂಡ ಸುಜಾ ಕುಶಾಲಪ್ಪ ಮಾತನಾಡಿ, ನಮ್ಮ ಸ್ಥಳವನ್ನು ಹೊರಗಿನವರಿಗೆ ಮಾರಾಟ ಮಾಡದೆ, ಈ ಮಣ್ಣನ್ನು ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ನಂತರ ಶಾಸಕ ಪೊನ್ನಣ್ಣ, ಅವರ ಪತ್ನಿ ಕಾಂಚನ್ ಪೊನ್ನಣ್ಣ, ಶಾಸಕಿ ಸುಜಾ ಕುಶಾಲಪ್ಪ ತೆಂಗಿನಕಾಯಿಗೆ ಗುಂಡು ಹೊಡೆಯುವ ಮೂಲಕ ತಮ್ಮ ಗುರಿ ಪ್ರದರ್ಶನ ಮಾಡಿ ಸಂಭ್ರಮಿಸಿದರು.

ಭೂ ದಾಖಲೆಯ ಸಹಾಯಕ ನಿರ್ದೇಶಕ ಅಜ್ಜಿಕುಟ್ಟೀರ ಭೀಮಯ್ಯ, ಅಂತಾರಾಷ್ಟ್ರೀಯ ಓಟಗಾರ ಪೆಮ್ಮಂಡ ಅಪ್ಪಯ್ಯ, ಪೆಮ್ಮಂಡ ಪೊನ್ನಪ್ಪ ಹಾಗೂ ಪೆಮ್ಮಂಡ ಕುಟುಂಬಸ್ಥರು ಹಾಜರಿದ್ದರು.

ಜಿಲ್ಲಾ ಸಿಬಿಎಸ್‌ಇ ಕ್ರೀಡಾಕೂಟದಲ್ಲಿ ಸೇವಾಭಾರತಿ ಪಬ್ಲಿಕ್ ಶಾಲೆ ಚಾಂಪಿಯನ್



ಜಿಲ್ಲಾ ಮಟ್ಟದ ಸಿಬಿಎಸ್‌ಇ ಕ್ರೀಡಾಕೂಟದಲ್ಲಿ ಸೇವಾಭಾರತಿ ಪಬ್ಲಿಕ್ ಶಾಲೆಯು ಸತತ 6ನೇ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು.

ಚಾಮರಾಜನಗರ, ಅ.20– ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಸಿಬಿಎಸ್‌ಇ ಕ್ರೀಡಾಕೂಟದಲ್ಲಿ ಸೇವಾಭಾರತಿ ಪಬ್ಲಿಕ್ ಶಾಲೆಯು ಸತತ 6ನೇ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದೆ

ಜಿಲ್ಲೆಯ ವಿವಿಧ ಸಿಬಿಎಸ್‌ಇ ಶಾಲೆಗಳಿಂದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದ ಕ್ರೀಡಾಕೂಟದಲ್ಲಿ ನಗರದ ಸೇವಾಭಾರತಿ ಪಬ್ಲಿಕ್ ಶಾಲೆಯು ಚಾಂಪಿಯನ್ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದೆ.

ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಬಾಲಕರಲ್ಲಿ ಸುಕೃತ್ ಮತ್ತು ಬಾಲಕಿಯರಲ್ಲಿ ಪ್ರಕೃತಿ ಬಿ, ಪ್ರೌಢಶಾಲಾ ವಿಭಾಗದ ಬಾಲಕರಲ್ಲಿ ಧನುಷ್ ಬಿ ಮತ್ತು ಬಾಲಕಿಯರಲ್ಲಿ ಅಪ್ಸರಾ ಮತ್ತು ಚಾರ್ವಿ ಎಂ ಅತ್ಯುನ್ನತ ಅಂಕ ಪಡೆದು ಚಾಂಪಿಯನ್ ಸ್ಥಾನ ಗಳಿಸಿ ವಿಜಯ ಸಾಧಿಸಿದ್ದಾರೆ.

ಸತತ 6 ವರ್ಷಗಳಿಂದ ಚಾಂಪಿಯನ್ ಟ್ರೋಫಿ ಪಡೆಯುತ್ತಿರುವ ಮಕ್ಕಳ ಸಾಧನೆಗೆ, ಹರ್ಷ ವ್ಯಕ್ತಪಡಿಸಿರುವ ಸೇವಾಭಾರತಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಶಾಲಾ ಪ್ರಾಂಶುಪಾಲರು ದೈಹಿಕ ಶಿಕ್ಷಕರು ಮತ್ತು ಶಾಲಾ ಸಮಸ್ತ ಶಿಕ್ಷಕ–ಶಿಕ್ಷಕೇತರ ವೃಂದದವರು ಅಭಿನಂದಿಸಿದ್ದಾರೆ.

ಲಕ್ಷ್ಮೀಪುರದಲ್ಲಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ



ಲಕ್ಷ್ಮೀಪುರದ ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ, ಅ.20–ತಾಲೂಕಿನ ಬಡಗಲಪುರ ಸಮೀಪದ ಲಕ್ಷ್ಮೀಪುರದಲ್ಲಿ ಎಸ್‌ಸಿಪಿ ಯೋಜನೆಯಡಿ ಪರಿಶಿಷ್ಟರ ಬೀದಿಯಲ್ಲಿ ಕಾಂಕ್ರೀಟ್‌ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಜನರ ಸುಗಮ ಸಂಚಾರಕ್ಕೆ ರಸ್ತೆ ಎಷ್ಟು ಮುಖ್ಯವೋ ಹಾಗೆಯೇ ಕೊಳಚೆನೀರು ರಸ್ತೆಯಲ್ಲಿ ಹರಿಯದಂತೆ ಮಾಡಲು ಸುಸಜ್ಜಿತ ಚರಂಡಿಯ ನಿರ್ಮಾಣದ ಅಗತ್ಯವಿದೆ ಲಕ್ಷ್ಮೀಪುರದಲ್ಲಿ ಎಸ್‌ಸಿಪಿ ಯೋಜನೆಯಡಿ ಪರಿಶಿಷ್ಟರ ಬೀದಿಯಲ್ಲಿ ಕಾಂಕ್ರೀಟ್‌ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ 50 ಲಕ್ಷ ರೂ. ಮಂಜೂರಾಗಿದೆ. ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ. ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಅಮಚವಾಡಿ ಗ್ರಾಪಂ ಅಧ್ಯಕ್ಷೆ ತೇಜಸ್ವಿನಿ, ಸದಸ್ಯರಾದ ಸಿದ್ದಶೆಟ್ಟಿ, ಜ್ಯೋತಿ, ಪಿಡಿಒ ರಮೇಶ್, ಗುತ್ತಿಗೆದಾರ ಗಣೇಶ್, ಮುಖಂಡರಾದ ಮಹದೇವಸ್ವಾಮಿ, ಶಿವಣ್ಣ, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ವೋಟ್ ಚೋರಿ ಸಹಿಸಂಗ್ರಹ ಅಭಿಯಾನಕ್ಕೆ ಚಾಲನೆ



ಚಾಮರಾಜನಗರ ವಿಧಾನಸಭೆ ಕ್ಷೇತ್ರದಲ್ಲಿ ವೋಟ್ ಚೋರಿ ಸಹಿ ಸಂಗ್ರಹ ಅಭಿಯಾನಕ್ಕೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಚಾಲನೆ ನೀಡಲಾಯಿತು.

ಚಾಮರಾಜನಗರ, ಅ.20–ದೇಶಾದ್ಯಂತ ಮತಗಳ್ಳತನ ತಡೆವ ಸಂಬಂಧ ಎಐಸಿಸಿ ಆದೇಶದ ಮೇರೆಗೆ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಗರ ಹಾಗೂ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ವತಿಯಿಂದ ವಿಧಾನಸಭೆ ಕ್ಷೇತ್ರದಲ್ಲಿ ವೋಟ್ ಚೋರಿ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಬೂತ್ ಮಟ್ಟದ ಸಭೆಯಲ್ಲಿ ಭಾಗವಹಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ದೇಶದ ವಿವಿದೆಡೆ ಮತಗಳ್ಳತನ ನಡೆಯುತ್ತಿದ್ದು, ಪಕ್ಷಕ್ಕೆ ನಿರೀಕ್ಷಿತ ಪ್ರಮಾಣದ ಮತಗಳು ಚಲಾವಣೆಯಾಗುತ್ತಿಲ್ಲ, ಇದನ್ನು ತಡೆಯುವ ಸಂಬಂಧ ಕಾಂಗ್ರೆಸ್ ಯುವ ಮುಖಂಡ ರಾಹುಲ್ ಗಾಂಧಿ ವೋಟ್ ಚೋರಿ ಸಹಿ ಸಂಗ್ರಹ ಅಭಿಯಾನದ ಉಸ್ತುವಾರಿ ವಹಿಸಿದ್ದಾರೆ. ಈ ಮಹತ್ವದ ಕಾರ್ಯಕ್ಕೆ ಕಾಂಗ್ರೆಸ್ ಕಾರ್ಯಕರ್ತರು, ಮುಂಚೂಣಿ ಘಟಕದ ಪದಾಧಿಕಾರಿಗಳು ಕೈಜೋಡಿಸಬೇಕು, ಪಕ್ಷದ ಹಿತದೃಷ್ಟಿಯಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಯುವ ಮುಖಂಡರಾಹುಲ್ ಗಾಂಧಿಅವರ ಕೈ ಬಲಪಡಿಸಬೇಕು, ವಿಧಾನಸಭೆ ಕ್ಷೇತ್ರದಲ್ಲಿ 230 ಬೂತ್‌ಗಳಿದ್ದು, ಪ್ರತಿಬೂತ್‌ನಲ್ಲೂ ಕನಿಷ್ಠ 100 ಸಹಿ ಸಂಗ್ರಹವಾಗುವ ರೀತಿಯಲ್ಲಿ ನೋಡಿ ಕೊಳ್ಳಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 25 ಸಾವಿರದಂತೆ 4 ವಿಧಾನಸಭೆ ಕ್ಷೇತ್ರಗಳಿಂದ ಲಕ್ಷ ಸಹಿ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಎಪಿಎಂಸಿ ಅಧ್ಯಕ್ಷ ಮಹದೇವಸ್ವಾಮಿ (ಸೋಮೇಶ್), ಪಿಎಲ್‌ಡಿ ಬ್ಯಾಂಕ್‌ನಿರ್ದೇಶಕ ಬಸುಮರಿ, ಮಹಿಳಾ ಜಿಲ್ಲಾಧ್ಯಕ್ಷೆ ನಾಗರತ್ನ, ನಗರ ಸಭೆ ಸದಸ್ಯೆ ಚಿನ್ನಮ್ಮ, ಜಿಪಂ ಮಾಜಿ ಸದಸ್ಯರಾದ ಕೆ.ನವೀನ್, ರಮೇಶ್, ಜಿ.ಪಂ ಕೆ.ಡಿ.ಪಿ ಸದಸ್ಯ ಸೈಯದ್‌ಮುಜಾಯಿದ್, ಚುಡಾ ಮಾಜಿ ಅಧ್ಯಕ್ಷ ಸುಹೇಲ್ ಅಲಿ ಖಾನ್, ಶಕುಂತಲಾ, ಮರಿಯಾಲದ ಹುಂಡಿ ಕುಮಾರ್, ನಾಗಯ್ಯ ನಾಗವಳ್ಳಿ, ಚಂದು ಕಾಗಲವಾಡಿ, ಆಯಿಬ್‌ಖಾನ್, ಸಿದ್ದರಾಜು, ರಾಜು, ಪಕ್ಷದ ವಿವಿಧ ಘಟಕದ ಅಧ್ಯಕ್ಷರು, ಕಾರ್ಯಕರ್ತರು ಮುಖಂಡರು ಹಾಜರಿದ್ದರು.

ಅ.28, ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವ

ಚಾಮರಾಜನಗರ: ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಶತೋತ್ತರ ದಶಮಾನೋತ್ಸವ (110ನೇ ಜಯಂತಿ) ಕಾರ್ಯಕ್ರಮ ಅ.28ರಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಎಸ್. ಶೆಟ್ಟರು ಉದ್ಘಾಟಿಸಲಿದ್ದಾರೆ.

ನಗರದ ಜೆಎಸ್‌ಎಸ್ ಕಾಲೇಜು ಮೈದಾನದಲ್ಲಿ ನಡೆಯುವ ಸಮಾರಂಭದ ಸಾನ್ನಿಧ್ಯವನ್ನು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು. ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡರು ನುಡಿನಮನ ಸಲ್ಲಿಸುವರು ಸಂಸ್ಥೆಯ ಪಿಆರ್‌ಓ ಆರ್.ಎಂ. ಸ್ವಾಮಿ ತಿಳಿಸಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ವಹಿಸಲಿದ್ದು, ಶ್ರೀಗಳ ಭಾವಚಿತ್ರಕ್ಕೆ ಸಂಸದ ಸುನೀಲ್ ಬೋಸ್ ಪುಷ್ಪಾರ್ಚನೆ ಮಾಡಲಿದ್ದಾರೆ. ಶಾಸಕ ಸಿ. ಪುಟ್ಟರಂಗಶೆಟ್ಟಿ ದತ್ತಿ ಪುರಸ್ಕಾರ ನೀಡಲಿದ್ದು, ಶಾಸಕ ಎ.ಆರ್. ಕೃಷ್ಣಮೂರ್ತಿ ಪ್ರತಿಭಾ ಪುರಸ್ಕಾರ ನೀಡುವರು. ಶಾಸಕ ಎಚ್.ಎಂ. ಗಣೇಶಪ್ರಸಾದ್ ಹಣ್ಣುಗಳನ್ನು ವಿತರಿಸಲಿದ್ದು, ರಕ್ತದಾನಿಗಳಿಗೆ ಶಾಸಕ ಎಂ.ಆರ್. ಮಂಜುನಾಥ್ ಪ್ರಮಾಣ ಪತ್ರ ವಿತರಿಸಲಿದ್ದಾರೆ.

ಅತಿಥಿಗಳಾಗಿ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಎಚ್.ವಿ. ಚಂದ್ರು, ಚಾಮುಲ್ ಅಧ್ಯಕ್ಷ ಎಂ.ನಂಜುಂಡಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಸದಸ್ಯೆ ಕುಮುದ ಕೇಶವಮೂರ್ತಿ ಭಾಗವಹಿಸಲಿದ್ದಾರೆ.

ಭಾವಚಿತ್ರ ಮೆರವಣಿಗೆ : ಇದಕ್ಕೂ ಮುನ್ನಾ ಬೆಳಗ್ಗೆ 9 ಗಂಟೆಗೆ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಅವರಣದಿಂದ ರಾಜೇಂದ್ರಶ್ರೀಗಳ ಭಾವಚಿತ್ರ ಮೆರವಣಿಗೆಗೆ ತಾಲೂಕಿನ ಎಲ್ಲಾ ಶ್ರೀಗಳು ಚಾಲನೆ ನೀಡಲಿದ್ದಾರೆ. ವಿವಿಧ ಜಾನಪದ ಕಲಾತಂಡಗಳ ಮೆರವಣಿಗೆಯೊಂದಿಗೆ ಪ್ರಮುಖ ಬೀದಿಯಲ್ಲಿ ಸಾಗಿ, ಜೆಎಸ್‌ಎಸ್ ಕಾಲೇಜು ಸಭಾಂಗಣಕ್ಕೆ ಬರಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕುಷ್ಠರೋಗ ಪತ್ತೆ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ

ಚಾಮರಾಜನಗರ, ಅ.20– ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನವನ್ನು ಎರಡನೇ ಹಂತದಲ್ಲಿ ಜಿಲ್ಲೆಯ ಆಯ್ದ ಗ್ರಾಮಗಳು ಹಾಗೂ ವಾರ್ಡ್‌ಗಳಲ್ಲಿ ನ.24 ರಿಂದ ಡಿ.9ರವರೆಗೆ ಹಮ್ಮಿಕೊಳ್ಳಲಾಗಿದ್ದು, ಈ ಅಭಿಯಾನಕ್ಕೆ ವಿವಿಧ ಇಲಾಖೆಗಳು ತೊಡಗಿಕೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕುಷ್ಠರೋಗ ಪತ್ತೆಹಚ್ಚುವ ಅಭಿಯಾನ, ಸಮಗ್ರ ರೋಗಗಳ ಜಿಲ್ಲಾ ಕಣ್ಗಾವಲು ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ ಐದು ವರ್ಷಗಳಲ್ಲಿ ಕುಷ್ಠ ರೋಗ ಪ್ರಕರಣಗಳು ಕಂಡು ಬಂದಿರುವ ಗ್ರಾಮಗಳು, ವಾರ್ಡ್‌ಗಳಲ್ಲಿ ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನ ನಡೆಸಲಾಗುತ್ತಿದೆ. ಒಟ್ಟು 14 ದಿನಗಳ ಕಾಲ ಹಮ್ಮಿಕೊಂಡಿರುವ ಅಭಿಯಾನದಲ್ಲಿ ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿ, ಆಶಾ, ಆರೋಗ್ಯ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರ ಚರ್ಮರೋಗವನ್ನ ತಪಾಸಣೆ ಮಾಡಲಿದ್ದಾರೆ. ರೋಗ ಲಕ್ಷಣಗಳು ಕಂಡು ಬಂದು ದೃಢಪಟ್ಟ ಪ್ರಕರಣಗಳಿಗೆ ಚಿಕಿತ್ಸೆ ಕೊಡಿಸಲಾಗುತ್ತದೆ ಎಂದರು.

ಅಭಿಯಾನದಲ್ಲಿ ಒಟ್ಟು 316 ತಂಡಗಳು, 32 ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದಾರೆ. ಒಂದು ತಂಡವು ದಿನಕ್ಕೆ 20 ಮನೆಗಳಂತೆ 14 ದಿನಗಳಲ್ಲಿ 88,378 ಮನೆಗಳಿಗೆ ಭೇಟಿ ನೀಡಿ, 3,77,705 ಜನರನ್ನು ತಪಾಸಣೆ ನಡೆಸಲು ಗುರಿ ನೀಡಲಾಗಿದೆ. ಜನತೆ ಸ್ವಯಂ ಪ್ರೇರಿತರಾಗಿ ತಪಾಸಣೆಗೆ ಒಳಗಾಗಲು ವ್ಯಾಪಕವಾಗಿ ಜಾಗೃತಿ ಮೂಡಿಸಬೇಕು. ಕುಷ್ಠರೋಗ ನಿರ್ಮೂಲನೆಗೆ ಅಧಿಕಾರಿಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಕಾರ್ಯನಿರ್ವಹಿಸಬೇಕು ಎಂದರು.

ಸಂಗಮ ಸೌಹಾರ್ದ ಸಹಕಾರಿ ಸಂಘಕ್ಕೆ ಅಧ್ಯಕ್ಷ,ಉಪಾಧ್ಯಕ್ಷರ ಅವಿರೋಧ ಆಯ್ಕೆ

ಚಾಮರಾಜನಗರ: ಸಂಗಮ ಸೌಹಾರ್ದ ಸಹಕಾರಿ ಸಂಘದ ನಿಯಮಿತ ಆಡಳಿಯ ಮಂಡಳಿಯ ಅಧ್ಯಕ್ಷರಾಗಿ ವೈ.ಎಸ್.ರಾಘವೇಂದ್ರ ಉಪಾಧ್ಯಕ್ಷರಾಗಿ ಸಿ.ಆರ್. ಚಂದ್ರಶೇಖರ್ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಭಾನುವಾರ ನಡೆಯಿತು. 12 ಮಂದಿಯರು ನಿರ್ದೇಶಕರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ನಗರದ ಜೋಡಿ ರಸ್ತೆಯ ಪದ್ಮನಾಭ ವಠಾರದಲ್ಲಿ ಇರುವ ಕಛೇರಿಯಲ್ಲಿ ನಡೆದ ಚುನಾವಣೆಯಲ್ಲಿ ಎಲ್ಲ ನಿರ್ದೇಶಕರ ಒಪ್ಪಿಗೆ ಮೇರೆಗೆ ಅವಿರೋಧವಾಗಿ ಇವರಿಬ್ಬರನ್ನು ಆಯ್ಕೆ ಮಾಡಲಾಯಿತು. ಚುನಾವಣಾ ಅಧಿಕಾರಿಯಾಗಿ ಎಸ್.ಪಿ.ರವಿ ಪ್ರಸಾದ್ ಕಾರ್ಯ ನಿರ್ವಹಿಸಿದರು.

ನಿರ್ದೇಶಕರಾಗಿ ವೈ.ಎಸ್.ರಾಘವೇಂದ್ರ, ಸಿ.ಆರ್.ಚಂದ್ರಶೇಖರ್. ಸಿ.ಬಿ.ನಾಗರಾಜು, ವಿಶ್ವನಾಥ್.ಎನ್, ಸಿ.ಕೆ. ಪ್ರಭುಸ್ವಾಮಿ, ನಳಿನಿ, ರಾಜೇಶ್, ಆರ್.ಸಿದ್ದರಾಜು, ಸಿದ್ದಮಲ್ಲಪ್ಪ, ರಶ್ಮಿ, ಉಪಸ್ಥಿರಿದ್ದರು.

ಪತ್ರಿಕಾ ಛಾಯಾಗ್ರಾಹಕ ಎಸ್.ಚರಣ್ ಬಿಳಿಗಿರಿಗೆ ಪ್ರಶಸ್ತಿ




ಛಾಯಾಗ್ರಾಹಕ ಚರಣ್ ಬಿಳಿಗಿರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ವಿತರಿಸಿದರು.

ಚಾಮರಾಜನಗರ: ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಯೋಜಿಸಿದ್ದ 2025–26ನೇ ಸಾಲಿನ ಮುಖ್ಯಮಂತ್ರಿ ಸಿದ್ದರಾಮಯ್ಯರವರ ರಾಜ್ಯ ಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ಪಡೆದ ಪತ್ರಿಕಾ ಛಾಯಾಗ್ರಾಹಕ ಚರಣ್ ಬಿಳಿಗಿರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ವಿತರಿಸಿ ಅಭಿನಂದಿಸಿದರು.


ಮೈಸೂರಿನ ಹುಣಸೂರು ರಸ್ತೆಯ ರಾಣಿಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾರ್, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಯಾದವ್ ಸೇರಿದಂತೆ ಇತರರಿದ್ದರು.

ಶಿಥಿಲಾವಸ್ಥೆ ತಲುಪಿದ ಪಾರಂಪರಿಕ ಕಟ್ಟಡ; ಮೈಸೂರು ಹೃದಯಭಾಗದಲ್ಲೇ ದುಸ್ಥಿತಿಯ ದರ್ಶನ



● ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ ಸುಪರ್ದಿಗೆ ಸೇರಿದ ಕಟ್ಟಡದ ಹೀನಸ್ಥಿತಿ ● ಗೋಡೆಗಳಿಗೆ ಹಬ್ಬುತ್ತಿರುವ ಗಿಡ-ಬಳ್ಳಿ ● ಮಳೆ ನೀರಿನಿಂದ ತೊಯ್ಯುತ್ತಿರುವ ಗೋಡೆಗಳು



ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ ಕಟ್ಟಡ

ಮೈಸೂರು,ಅ.20(ಪಿಎಂ)– ನಗರದ ಹೃದಯಭಾಗದಲ್ಲಿ ಪಾರಂಪರಿಕ ಕಟ್ಟಡವೊಂದು ಶಿಥಿಲಾವಸ್ಥೆಗೆ ಸಿಲುಕಿದ್ದು, ಈ ಕಟ್ಟಡದ ಗೋಡೆಗಳಿಗೆ ಗಿಡ-ಬಳಿ ಹಬ್ಬುತ್ತಿದ್ದರೆ, ಮಳೆ ನೀರಿನಿಂದ ತೊಯ್ಯುತ್ತಿರುವ ಗೋಡೆಗಳು ಯಾವಾಗ ನೆಲಕ್ಕುರುಳುವುದೋ ಎನ್ನುವಂತೆ ಗೋಚರಿಸುತ್ತಿವೆ.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ (ಶಾಲಾ ಶಿಕ್ಷಣ ಇಲಾಖೆ) ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆಗೆ ಸುಪರ್ದಿಗೆ ಸೇರಿದ ಕಟ್ಟಡದ ದುಸ್ಥಿತಿ ಇದು. 1928ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಹಿಳಾ ಶಿಕ್ಷಕಿಯರ ತರಬೇತಿ ಸಂಸ್ಥೆಗಾಗಿ ಈ ಕಟ್ಟಡ ನಿರ್ಮಿಸಿದರು. ಇದೀಗ ಈ ಕಟ್ಟಡ ಅವನತಿಯತ್ತ ಸಾಗುತ್ತಿದ್ದು, ಸೂಕ್ತ ನಿರ್ವಹಣೆ ಇಲ್ಲದ ಕಾರಣ ಅದರ ಸ್ಥಿತಿ ಅಧೋಗತಿಗೆ ತಲುಪಿದೆ. ಹೀಗಾಗಿ ಅದರ ಸಂರಕ್ಷಣೆ ಸಾಧ್ಯವೇ? ಎಂಬ ಪ್ರಶ್ನೆ ಉದ್ಭವಿಸಿದೆ.

ಈ ಕಟ್ಟಡದ ಇಂತಹ ದುಸ್ಥಿತಿ ಹಿನ್ನೆಲೆಯಲ್ಲಿ ಅಪಾಯದ ಮುನ್ಸೂಚನೆ ಅರಿತು ಯಾವುದೇ ತರಗತಿಗಳನ್ನು ಇಲ್ಲಿನ ಕೊಠಡಿಗಳಲ್ಲಿ ನಡೆಸುತ್ತಿಲ್ಲ ಎನ್ನಲಾಗಿದೆ. ಆದರೂ ಇದರ ಸಮೀಪದಲ್ಲೇ ಇರುವ ಕಟ್ಟಡದಲ್ಲಿ ಪ್ರಶಿಕ್ಷಣ ಸಂಸ್ಥೆ ಪ್ರಶಿಕ್ಷಣಾರ್ಥಿಗಳ ತರಗತಿಗಳು ನಡೆಸಲಾಗುತ್ತಿರುವ ಹಿನ್ನೆಲೆಯಲ್ಲಿ ಆಗೊಮ್ಮೆ



ಈಗೊಮ್ಮೆಯಾದರೂ ಯಾರಾದರೂ ಅತ್ತ ಸುಳಿಯುವ ಸಾಧ್ಯತೆ ಇದ್ದೇ ಇದೆ. ಹೀಗಾಗಿ ನೆಲಕ್ಕುರುಳುವ ಅಪಾಯದಲ್ಲಿರುವ ಈ ಕಟ್ಟಡದ ಸಂರಕ್ಷಣೆ ಅಥವಾ ನೆಲಸಮಕ್ಕೆ ಕ್ರಮ ವಹಿಸುವ ಅಗತ್ಯವಿದೆ ಎಂಬ ಅಭಿಪ್ರಾಯಗಳು ಕೇಳಿ ಬರುತ್ತಿವೆ.

ಇದೇ ಆವರಣದಲ್ಲಿ ಮಹಾರಾಣಿ ಮಹಿಳಾ ಪಿಯು ಕಾಲೇಜು ಹಾಗೂ ಸ್ಥಳಾಂತರಗೊಂಡ ಎನ್‌ಟಿಎಂಎಸ್ ಶಾಲೆಯೂ ಇದೆ. ಕಟ್ಟಡದತ್ತ ತೆರಳಲು ಯಾವುದೇ ಸೂಕ್ತ ನಿರ್ಬಂಧ ಕ್ರಮಗಳನ್ನು ಕೈಗೊಳ್ಳದ ಹಿನ್ನೆಲೆಯಲ್ಲಿ ಅಲ್ಲಿಗೆ ಯಾರೂ ಸುಳಿಯಲಾರರು ಎನ್ನಲಾಗದು. ಅಧ್ಯಾಪಕರು, ಪ್ರಶಿಕ್ಷಣಾರ್ಥಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಅತ್ತ ಹೋದರೆ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದ್ದು, ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತುಕೊಳ್ಳುವ ಅಗತ್ಯತೆ ತುರ್ತಾಗಿದೆ.

ಮರುಕಳಿಸದಿರಲಿ ಅನಾಹುತ: ಎಚ್ಚರ ತಪ್ಪಿದ ಹಿನ್ನೆಲೆಯಲ್ಲಿ ಅನಾಹುತ ಸಂಭವಿಸಿದ ನಿದರ್ಶನಕ್ಕೆ ಹೆಚ್ಚು ಕಾಲದ ಹಿಂದೆ ನೋಡಬೇಕಿಲ್ಲ. ಇದೇ ವರ್ಷ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದಲ್ಲಿ ಕುಸಿತ ಉಂಟಾಗಿ ಕಾರ್ಮಿಕನೊಬ್ಬ ಪ್ರಾಣವನ್ನೇ ಕಳೆದುಕೊಂಡ. ಹಾಗಾಗಿ ಅನಾಹುತದ ಬಳಿಕ ಮರುಗುವ ಬದಲು ಈಗಲೇ ಎಚ್ಚೆತ್ತುಕೊಳ್ಳುವುದೇ ಸೂಕ್ತ ಎಂಬುದು ಪ್ರಜ್ಞಾವಂತರ ಅಭಿಪ್ರಾಯ.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದಲ್ಲೂ ಇದೇ ವರ್ಷ ಜ.28ರಂದು ಕುಸಿತ ಉಂಟಾಗಿ ಕಾರ್ಮಿಕನೊಬ್ಬ ಸಾವನ್ನಪ್ಪಿದ್ದ. ಇದೂ ಪಾರಂಪರಿಕ ಕಟ್ಟಡವಾಗಿದ್ದರೂ ನೆಲಸಮಗೊಳಿಸಿ ನೂತನ ಕಟ್ಟಡ ನಿರ್ಮಾಣಕ್ಕೆ ತೀರ್ಮಾನಿಸಿ ತೆರವು ಕಾಮಗಾರಿಗೆ ಚಾಲನೆ ನೀಡಿದ್ದ ಸಂದರ್ಭದಲ್ಲಿ ನಡೆದ ಈ ದುರ್ಘಟನೆಯಲ್ಲಿ ಕಾರ್ಯನಿರತ ಕಾರ್ಮಿಕ ಮೃತಪಟ್ಟಿದ್ದ. ಇದಕ್ಕೆ ಪೂರ್ವದಲ್ಲಿ 2022ರ ಅಕ್ಟೋಬರ್ 21ರಂದು ಇದೇ ಕಾಲೇಜು ಕಟ್ಟಡದ ರಸಾಯನಶಾಸ್ತ್ರ ಲ್ಯಾಬ್‌ನ ಭಾಗದಲ್ಲಿ ಮೇಲ್ಛಾವಣಿ ಕುಸಿದಿತ್ತು. ಅದೃಷ್ಟವಶಾತ್ ಅಂದು ಕಟ್ಟಡದೊಳಗೆ ಯಾರೂ ಇಲ್ಲದ ಹಿನ್ನೆಲೆಯಲ್ಲಿ ಸಾವು ನೋವು ಸಂಭವಿಸಿರಲಿಲ್ಲ.

ತುರ್ತು ಕ್ರಮ ಅಗತ್ಯ...

ಇದು ಸಹ ಪಾರಂಪರಿಕ ಕಟ್ಟಡ. ಆದರೆ ಸೂಕ್ತ ನಿರ್ವಹಣೆ ಮೂಲಕ ಸಂರಕ್ಷಣೆಗೆ ಆದ್ಯತೆ ನೀಡದೇ ಇರುವುದು ಬೇಸರದ ಸಂಗತಿ. ಈ ಕಟ್ಟಡದ ದುಸ್ಥಿತಿ ನೋಡಿದರೆ ತೀರಾ ಅಧೋಗತಿಯಲ್ಲಿದೆ. ಕೂಡಲೇ ಸರ್ಕಾರ, ಪಾರಂಪರಿಕ ಇಲಾಖೆ ಸೂಕ್ತ ಕ್ರಮಕ್ಕೆ ಮುಂದಾಗಬೇಕು. ಆ ಮೂಲಕ ಅದರ ಸಂರಕ್ಷಣೆಗೆ ಕ್ರಮ ವಹಿಸಬೇಕು. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿರುವ ಮೈಸೂರು ಜಿಲ್ಲಾ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಸಮಿತಿಯು ಇದರ ಸಂರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಬೇಕು. ಮಹಿಳಾ ಶಿಕ್ಷಕರಿಗೆ ತರಬೇತಿ ನೀಡಲು ಆರಂಭಿಸಿದ ಸಂಸ್ಥೆಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಿರ್ಮಿಸಿದ ಕಟ್ಟಡ ಇದು. ಸೂಕ್ತ ನಿರ್ವಹಣೆ ಇಲ್ಲದೆ ಹಾಗೂ ಮಳೆ ನೀರಿನಿಂದ ತೊಯ್ದು ಈ ದುಸ್ಥಿತಿ ಉಂಟಾಗಿದೆ. ಯಾವಾಗ ಬೇಕಾದರೂ ನೆಲಕ್ಕುರುಳಬಹುದಾದ ಸ್ಥಿತಿಯಲ್ಲಿ ಈ ಕಟ್ಟಡವಿದ್ದು, ತುರ್ತಾಗಿ ಸಂರಕ್ಷಣೆಗೆ ಕ್ರಮ ವಹಿಸಬೇಕು. ಬಹುಮುಖ್ಯವಾಗಿ ಯಾವುದೇ ಸಾವು-ನೋವಿಗೆ ಆಸ್ಪದ ಆಗದಂತೆ ಜರೂರು ಕ್ರಮ ಕೈಗೊಳ್ಳುವುದು ಅಗತ್ಯ

-ಡಾ.ಎನ್.ಎಸ್.ರಂಗರಾಜು, ಮೈಸೂರು ಜಿಲ್ಲಾ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಸಮಿತಿ ಸದಸ್ಯರು.

ಆರ್‌ಎಸ್‌ಎಸ್ ನಿಷೇಧ ಸಾಧ್ಯವಾಗದ ಮಾತು

ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಮಾಜಿ ಉಪಮೇಯರ್ ಶೈಲೇಂದ್ರ ಖಂಡನೆ



ಮೈಸೂರು, ಅ.20– ಕಾಂಗ್ರೆಸ್ಸಿಗರು ಮತ್ತೊಮ್ಮೆ ಹುಟ್ಟಿಬಂದರೂ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್)ವನ್ನು ನಿಷೇಧ ಮಾಡಲು ಸಾಧ್ಯವಿಲ್ಲ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ನಗರಾಧ್ಯಕ್ಷರೂ ಮಾಜಿ ಉಪಮೇಯರ್ ವಿ.ಶೈಲೇಂದ್ರ ಕಿಡಿಕಾರಿದ್ದಾರೆ.

ಸಚಿವ ಪ್ರಿಯಾಂಕ ಖರ್ಗೆ ಅವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆರ್‌ಎಸ್‌ಎಸ್ ನಿಷೇಧಿಸಬೇಕು, ಸಂಘದ ಪಥ ಸಂಚಲನವನ್ನು ನಿರ್ಬಂಧಿಸಬೇಕು ಎಂದು ಹೇಳಿರುವುದು ನಾಚಿಕೇಗೇಡಿನ ಸಂಗತಿ. ಆರ್‌ಎಸ್‌ಎಸ್ ರಾಷ್ಟ್ರ ರಕ್ಷಣೆಗಿರುವ ಸಂಸ್ಥೆಯಾಗಿದ್ದು, ಇದರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ಸಂಘಟನೆ ಬಗ್ಗೆ ತಪ್ಪು ಕಲ್ಪನೆ ಇದ್ದರೆ ಒಮ್ಮೆ ಕಾರ್ಯಾಲಯಕ್ಕೆ ಭೇಟಿ ನೀಡಿ, ಪರಾಮರ್ಶಿಸಿದ ನಂತರ ಅಭಿಪ್ರಾಯ ತಿಳಿಸುವಂತೆ ಒತ್ತಾಯಿಸಿದ್ದಾರೆ.

ಪ್ರಿಯಾಂಕ್ ಖರ್ಗೆ ಅವರ ಎಲ್ಲಾ ಹೇಳಿಕೆಗಳನ್ನು ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಯಾರೋ ಒಬ್ಬ ಜೀವ ಬೆದರಿಕೆ ಹಾಕಿದ್ದಾನೆ ಎಂದು ತಿಳಿಸಿದ್ದಾರೆ. ಅಷ್ಟೆಲ್ಲಾ ಭದ್ರತೆ ನಡುವೆಯೂ ಬೆದರಿಕೆ ಕರೆಗೆ ಭಯಪಡುತ್ತಾರೆ ಎಂದರೆ ನಂಬಲಸಾಧ್ಯ. ಉತ್ತರ ಕರ್ನಾಟಕ ಭಾಗದಲ್ಲಿ ಕುಡಿಯುವ ನೀರಿಗೂ ಹಾಹಾಕಾರವಿದೆ. ಮಹಿಳೆಯರು ಕಿಲೋಮೀಟರ್‌ವರೆಗೆ ನಡೆದುಕೊಂಡು ನೀರು ತರುವುದನ್ನು ಈಗಲೂ ಕಾಣಬಹುದು. ಜನರಿಗೆ ಸರಿಯಾಗಿ ಸೇವೆ ನೀಡಲಾಗದೆ ಈ ರೀತಿ ಅನಗತ್ಯ ಚರ್ಚೆಗಳ ಮೂಲಕ ವೈಫಲ್ಯಗಳನ್ನು ಮರೆಮಾಚಿಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಲೇಜು ತೊರೆದ ವಿದ್ಯಾರ್ಥಿಗಳ ಮೂಲ ದಾಖಲೆ ನೀಡಲು ಶುಲ್ಕ ನಿಯಂತ್ರಣ ಸಮಿತಿ ಆದೇಶ

ಬೆಂಗಳೂರು, ಅ.20– ವೈದ್ಯಕೀಯ, ಎಂಜನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಪಡೆದು ಅನಿವಾರ್ಯ ಕಾರಣಗಳಿಂದ ಮಧ್ಯಂತರದಲ್ಲೇ ಕಾಲೇಜು ತೊರೆಯುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಸೇರಿದಂತೆ ಮೂಲ ದಾಖಲೆಗಳನ್ನು ನೀಡುವಂತೆ ಶುಲ್ಕ ನಿಯಂತ್ರಣ ಸಮಿತಿ ಆದೇಶಿಸಿದೆ.

ದೂರುಗಳ ವಿಚಾರಣೆ ನಡೆಸಿದ ಶುಲ್ಕ ನಿಯಂತ್ರಣ ಸಮಿತಿಯು ಅಧ್ಯಕ್ಷರೂ ಆಗಿರುವ ನ್ಯಾಯಮೂರ್ತಿ ಬಿ. ಶ್ರೀನಿವಾಸ ಗೌಡ ಅವರು ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ವಾಪಸ್ ನೀಡುವಂತೆ ಸೂಚಿಸಿದ್ದಾರೆ.

ದಾಖಲೆಗಳನ್ನು ಹಿಂದಿರುಗಿಸಲು ಕೆಎಲ್‌ಇ ಸಂಸ್ಥೆ 4 ಲಕ್ಷ ರೂ. ನೀಡುವಂತೆ ಒತ್ತಾಯಿಸುತ್ತಿದೆ ಎಂದು ಸ್ನಾತಕೋತ್ತರ ದಂತ ವೈದ್ಯಕೀಯ (ಎಂಡಿಎಸ್) ವಿದ್ಯಾರ್ಥಿಯೊಬ್ಬರು ದೂರು ನೀಡಿದ್ದರು. ದೂರಿನ ವಿಚಾರಣೆಗೆ ಹಾಜರಾದ ಸಂಸ್ಥೆಯ ಪ್ರತಿನಿಧಿ, ವಿದ್ಯಾರ್ಥಿಗಳು ಮಧ್ಯದಲ್ಲೇ ಕೋರ್ಸ್ ತೊರೆದರೆ ಸೀಟು ಖಾಲಿ ಉಳಿಯುತ್ತದೆ. ಬೇರೊಬ್ಬರಿಗೆ ಆ ಸೀಟು ನೀಡಲು ಅವಕಾಶ ಇಲ್ಲ. ಸಂಸ್ಥೆಗೂ ನಷ್ಟವಾಗುತ್ತದೆ ಎಂದು ಉತ್ತರ ನೀಡಿದ್ದರು. ವಾದ, ಪ್ರತಿವಾದ ಆಲಿಸಿದ ಸಮಿತಿಯು ಆರ್ಥಿಕ ತೊಂದರೆಯಿಂದ ವಿದ್ಯಾರ್ಥಿ ಕೋರ್ಸ್ ತೊರೆದು ಉದ್ಯೋಗ ಮಾಡುತ್ತಿದ್ದಾರೆ. ಕಾರಣ 50 ಸಾವಿರ ಪಡೆದು ಅವರಿಗೆ ಮೂಲ ದಾಖಲೆ ನೀಡುವಂತೆ ಆದೇಶ ನೀಡಿದೆ.

ಮತ್ತೆರಡು ಪ್ರಕರಣದಲ್ಲಿ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿರುದ್ಧವೂ ವಿದ್ಯಾರ್ಥಿಗಳ ದಾಖಲೆಗಳನ್ನು ತಡೆಹಿಡಿದಿರುವ ಕುರಿತು ದೂರುಗಳು ಬಂದಿದ್ದವು. ಈ ಪ್ರಕರಣಗಳಲ್ಲಿ ಆರೋಗ್ಯ ಸಮಸ್ಯೆ, ಸ್ಪರ್ಧಾ ಪರೀಕ್ಷೆಯ ಸಿದ್ಧತೆಯ ಕಾರಣಗಳನ್ನು ನೀಡಿದ್ದರಿಂದ ದಾಖಲೆ ಹಿಂದಿರುಗಿಸಲು ಸಮಿತಿ ಸೂಚಿಸಿದೆ.

ಸನ್ಮಾನ



ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ಹಾಡ್ಯ ರಂಗಸ್ವಾಮಿ ಅವರನ್ನು ವರುಣ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ ಧರ್ಮದರ್ಶಿ ಮಂಡಳಿಯ ಮಾಜಿ ಅಧ್ಯಕ್ಷ ಹೆಜ್ಜಿಗೆ ರಾಮಯ್ಯ, ಇಂದನ್ ಬಾಬು, ಹೊಸಬಕ್ಕಳ್ಳಿ ದೊರೆಸ್ವಾಮಿ, ಬಸವೇಗೌಡ, ದಿನೇಶ್, ಟಿ ಎನ್ ನರಸಿಂಹಮೂರ್ತಿ, ತೊರೆಮ ಗಿರೀಶ್, ಅರ್ಕೇಶ್ ಮುಂತಾದ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಹಲ್ಲೆ ನಡೆಸಿ ಕುರಿ ಕದ್ದ ದುಷ್ಕರ್ಮಿಗಳು!

ಮೈಸೂರು, ಅ.20– ದ್ವಿಚಕ್ರ ವಾಹನದಲ್ಲಿ ಕುರಿಗಳನ್ನು ಸಾಗಿಸುತ್ತಿದ್ದವರ ಮೇಲೆ ಹಲ್ಲೆ ನಡೆಸಿ, ಕುರಿಗಳನ್ನು ಹೊತ್ತೊಯ್ದಿರುವ ಘಟನೆ ಮೈಸೂರು-ಹುಣಸೂರು ಹೆದ್ದಾರಿಯಲ್ಲಿ ನಡೆದಿದೆ.

ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿ ಮಟನ್ ಅಂಗಡಿ ನಡೆಸುತ್ತಿರುವ ಕಲ್ಯಾಣಗಿರಿ ನಿವಾಸಿ ಮಹಮದ್ ಶಾಬಾಜ್ ಮೇಲೆ ಹಲ್ಲೆ ನಡೆಸಿ, ಎರಡು ಕುರಿಗಳನ್ನು ಹೊತ್ತೊಯ್ಯಲಾಗಿದೆ.

ಕಳೆದ ಶನಿವಾರ ರಾತ್ರಿ ಮಹಮದ್ ಶಾಬಾಜ್ ತಮ್ಮ ಅಂಗಡಿಯಲ್ಲಿ ಕೆಲಸ ಮಾಡುವ ಇರ್ಷಾದ್‌ನನ್ನು ಜೊತೆಯಲ್ಲಿ ಕರೆದುಕೊಂಡು ಕೆ.ಆರ್.ನಗರ ರಸ್ತೆಯಲ್ಲಿರುವ ಬೋಳನಹಳ್ಳಿಗೆ ತೆರಳಿ 2 ಕುರಿಗಳನ್ನು ಖರೀದಿಸಿ, ದ್ವಿಚಕ್ರ ವಾಹನದಲ್ಲಿ ತರುವಾಗ ಬಿಳಿಕೆರೆ ಬಳಿ ಇಬ್ಬರು ಬೈಕ್‌ನಲ್ಲಿ ಹಿಂಬಾಲಿಸಿ, ನಿಲ್ಲಿಸುವಂತೆ ಹೇಳಿದ್ದಾರೆ. ಭಯಗೊಂಡ ಮಹಮದ್ ಶಾಬಾಜ್ ಬೈಕ್ ನಿಲ್ಲಿಸದೆ ವೇಗ ಹೆಚ್ಚಿಸಿದ್ದಾರೆ. ಆದರೂ ಬಿಡದೆ ಹಿಂಬಾಲಿಸಿದ ಅಪರಿಚಿತರು ಚಾಕು ತೋರಿಸಿ ಬೆದರಿಸಿದ್ದರಿಂದ ಕಾಮನಕೊಪ್ಪಲು ಗ್ರಾಮದ ಬಳಿ ಬೈಕ್ ನಿಲ್ಲಿಸಿದ್ದಾರೆ. ಆಗ ಕಾಲಿನಿಂದ ಒದ್ದು ಬೈಕ್ ಬೀಳಿಸಿ, ಮಹಮದ್ ಮೇಲೆ ಹಲ್ಲೆ ನಡೆಸಿ, ಕುರಿಗಳನ್ನು ಹೊತ್ತೊಯ್ದಿದ್ದಾರೆ.

ಈ ಸಂಬಂಧ ಮಹಮದ್ ಶಾಬಾಜ್ ನೀಡಿದ ದೂರಿನನ್ವಯ ಇಲವಾಲ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೆ.ಆರ್.ಆಸ್ಪತ್ರೆ ಸುತ್ತಮುತ್ತ ಕುಡುಕರ ಹಾವಳಿಗೆ ಕಂಗಾಲಾದ ಜನ



ಚಾಮುಂಡಿ ಮಹಿಳಾ ಸುರಕ್ಷಾ ಪಡೆಯ ಸಿಬ್ಬಂದಿಗಳು ವಿವಿಧ ಅಪರಾಧ ಕೃತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಿರುವುದು.

ಮೈಸೂರು, ಅ.20(ಎಸ್‌ಪಿಎನ್)– ಕೆ.ಆರ್.ಆಸ್ಪತ್ರೆ ಸುತ್ತಮುತ್ತ ಕುಡುಕರ ಹಾವಳಿ ಹೆಚ್ಚಾಗುತ್ತಿದ್ದು, ಇವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಈ ಸ್ಥಳದಲ್ಲಿ ಪ್ರಯಾಣಿಕರು, ಪಾದಚಾರಿಗಳಿಗಾಗುತ್ತಿರುವ ಕಿರುಕುಳ ನಿವಾರಿಸುವಂತೆ ದೇವರಾಜ ಪೊಲೀಸರು ಹಾಗೂ ಮೈಸೂರು ನಗರ ಪಾಲಿಕೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಈ ಹಿನ್ನಲೆಯಲ್ಲಿ ದೇವರಾಜ ಪೊಲೀಸರು ಭಾನುವಾರ ರಾತ್ರಿ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಸಂತೆಪೇಟೆ, ಕೆ.ಆರ್.ಆಸ್ಪತ್ರೆ ಸುತ್ತಮುತ್ತ ಪ್ರಾಬಲ್ಯ ಸಾಧಿಸಿ, ರಾತ್ರಿ ವೇಳೆ ಫುಟ್‌ಪಾತ್‌ನಲ್ಲಿ ಮಲಗುವ ಭಿಕ್ಷುಕರು, ಅನಾಥರು ಹಾಗೂ ವಿವಿಧೆಡೆ ಕೆಲಸ ಮಾಡುವ ಕೂಲಿ ಕಾರ್ಮಿಕರು, ರೈಲ್ವೆ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರು ಹಾಗೂ ಪಾದಚಾರಿಗಳಿಗೆ ಕುಡಿದು ತೊಂದರೆ ನೀಡದಂತೆ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಶ್ರೀರಾಂಪೇಟೆ, ಸಂತೆ ಪೇಟೆಯ ಅಂಗಡಿಗಳನ್ನು ಸಮಯಕ್ಕೆ ಸರಿಯಾಗಿ ಮುಚ್ಚುವಂತೆ ಅಂಗಡಿ ಮಾಲೀಕರಿಗೆ ಮನವಿ ಮಾಡಿದ್ದು, ಜೆಎಲ್‌ಬಿ ರಸ್ತೆಯಲ್ಲಿ ವ್ಹೀಲಿಂಗ್ ಮಾಡುವವರು, ದೇವರಾಜ ಠಾಣಾ ವ್ಯಾಪ್ತಿಯಲ್ಲಿ ಮದ್ಯ, ಗಾಂಜಾ, ನಶೆಯಲ್ಲಿ ಓಡಾಡುವವರ ವಿರುದ್ಧ ದೇವರಾಜ ಪೊಲೀಸರು ತಪಾಸಣೆ ನಡೆಸಿದ್ದಾರೆ.

ಅಂತೆಯೇ ವಿ.ವಿ. ಪುರಂ ಪೊಲೀಸರು ಸಹ ಟೆಂಪಲ್ ರಸ್ತೆ ಕಾಳಿದಾಸ ರಸ್ತೆಗಳಲ್ಲಿ ಡಾಮಿನೇಷನ್ ನಡೆಸಲಾಗಿದೆ. ಈ ಸರಹದ್ದಿನ ರೌಡಿಗಳು, ಎಂಒಬಿಗಳು, ಅನುಮಾನಾಸ್ಪದ ವ್ಯಕ್ತಿಗಳು ಹಾಗೂ ಕುಡಿದು ವಾಹನ ಚಲಾಯಿಸುವವರ ತಪಾಸಣೆ ನಡೆಸಿದ್ದಾರೆ.

ಸರಸ್ವತಿಪುರಂ, ನರಸಿಂಹರಾಜ, ನಜರ್‌ಬಾದ್ ಮತ್ತು ವಿದ್ಯಾರಣ್ಯಪುರಂ ಠಾಣಾ ಸರಹದ್ದಿನ ಚಾಮುಂಡಿ ಮಹಿಳಾ ಸುರಕ್ಷಾ ಪಡೆಯ ಸಿಬ್ಬಂದಿಗಳು, ಮಹಿಳೆಯರು, ಹಿರಿಯ ನಾಗರಿಕರಿಗೆ ಮನೆಗಳ್ಳತನ, ಸರಗಳ್ಳತನ ಹಾಗೂ ಸೈಬರ್ ಅಪರಾಧಗಳು, ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲಾಗಿದೆ. ಹೆಚ್ಚಿನ ಸಹಾಯಕ್ಕಾಗಿ 1930, 112 ಸಹಾಯವಾಣಿಗೆ ಕರೆ ಮಾಡುವಂತೆ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಶೇ.83.22 ಗಣತಿ

ಮೈಸೂರು, ಅ.20(ಎಸ್‌ಪಿಎನ್)– ಮೈಸೂರು ಜಿಲ್ಲೆಯಲ್ಲಿ ಸೋಮವಾರ ಮಧ್ಯಾಹ್ನದವರೆಗೂ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಗಣತಿ ಶೇ.83.22 ಗಣತಿ ಕಾರ್ಯ ಮುಗಿದಿದೆ.

ಮೈಸೂರು ಜಿಲ್ಲೆಯಲ್ಲಿ ಒಟ್ಟು 10,07073 ಕುಟುಂಬಗಳನ್ನು 5218 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. ಇದುವರೆಗೆ 8,56,878 ಕುಟುಂಬಗಳ ಸಮೀಕ್ಷೆ ಪೂರ್ಣಗೊಂಡಿದೆ. ಒಟ್ಟು 35,89,224 ಜನಸಂಖ್ಯೆಯಿದ್ದು, ಇದರಲ್ಲಿ 29,87,095 ಮಂದಿ ಸಮೀಕ್ಷೆಗೆ ಒಳಪಟ್ಟಿದ್ದಾರೆ. ರಾಜ್ಯಾದ್ಯಂತ ಶೇ.87.74 ರಷ್ಟು ಗಣತಿ ಕಾರ್ಯ ಮುಗಿದಿದೆ. ರಾಜ್ಯಾದ್ಯಂತ ಒಟ್ಟು 1,48,14,286 ಕುಟುಂಬಗಳಿದ್ದು, ಇದರಲ್ಲಿ 1,43,23,257 ಕುಟುಂಬಗಳು ಸಮೀಕ್ಷೆಯಲ್ಲಿ ಪಾಲ್ಗೊಂಡಿವೆ.

ರಾಜ್ಯಾದ್ಯಂತ 6,14,96,236 ಜನಸಂಖ್ಯೆಯಿದ್ದು, ಇದರಲ್ಲಿ 5,39,55,795 ಮಂದಿ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಹಿಂದುಳಿದ ವರ್ಗಗಳ ಇಲಾಖೆ ಅಂಕಿ-ಅಂಶಗಳನ್ನು ಬಿಡುಗಡೆಗೊಳಿಸಿದೆ.

ಪಟಾಕಿ ಸಿಡಿಸುವಾಗ ಇಬ್ಬರಿಗೆ ಗಾಯ; ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ

ಮೈಸೂರು, ಅ.20(ಪಿಎಂ)– ಪಟಾಕಿ ಸಿಡಿಸುವಾಗ ಸುಟ್ಟ ಗಾಯಗಳಾಗಿ ಇಬ್ಬರು ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಸೋಮವಾರ ರಾತ್ರಿ ಚಿಕಿತ್ಸೆ ಪಡೆದಿದ್ದಾರೆ.

ಸುಮಾರು 8 ವರ್ಷದ ಬಾಲಕ, 45 ವರ್ಷದ ಪುರುಷರೊಬ್ಬರು ಸುಟ್ಟ ಗಾಯಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಇಬ್ಬರಿಗೂ ಗಂಭೀರ ಸ್ವರೂಪದ ಗಾಯಗಳಾಗಿಲ್ಲ. ಜೊತೆಗೆ ಅವರ ಕಣ್ಣುಗಳಿಗೂ ಹಾನಿಯಾಗಿಲ್ಲ. ಈರ್ವರಿಗೂ ಕೆಲ ಪರೀಕ್ಷೆಗಳನ್ನು ನಡೆಸುತ್ತಿದ್ದು, ನಂತರ ಆಸ್ಪತ್ರೆಗೆ ದಾಖಲಿಸಿ ಕೊಳ್ಳುವ ಬಗ್ಗೆ ನಿರ್ಧರಿಸಲಾಗುತ್ತದೆ ಎಂದು ಕೆಆರ್ ಆಸ್ಪತ್ರೆ ಮೂಲಗಳು ತಿಳಿಸಿವೆ. ಇನ್ನು ಖಾಸಗಿ ಆಸ್ಪತ್ರೆಗಳಲ್ಲೂ ಸೋಮವಾರ ರಾತ್ರಿ ಅನೇಕರು ಪಟಾಕಿ ಸಿಡಿಸುವಾಗ ಗಾಯಗೊಂಡು ಚಿಕಿತ್ಸೆ ಪಡೆದಿರುವ ಸಾಧ್ಯತೆ ಇದೆ. ಹಾಗಾಗಿ 'ಬೆಂಕಿಯೊಂದಿಗೆ ಸರಸ ಬೇಡ' ಎಂಬ ಮಾತಿನಂತೆ ಕಿಡಿಯೊಮ್ಮಿಸುವ ಪಟಾಕಿ ಸಿಡಿಸು ವಾಗ ನಿರ್ಲಕ್ಷ್ಯ, ತಮಾಷೆಗಳಿಗೆ ಆಸ್ಪದ ನೀಡದೆ ಅತ್ಯಂತ ಎಚ್ಚರ ವಹಿಸುವುದು ಅಗತ್ಯವಾಗಿದೆ.

ತೈಲ ಅಭ್ಯಂಗ ಸೇವೆ



ನರಕ ಚತುರ್ದಶಿ ವಿಶೇಷ ಆಚರಣೆ ಅಂಗವಾಗಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ವ್ಯಾಸ ತೀರ್ಥ ವಿದ್ಯಾಪೀಠದಲ್ಲಿ ಸೋಮವಾರ ಮುಂಜಾನೆ ವಿದ್ಯಾರ್ಥಿಗಳು ಮತ್ತು ಯುವ ವಿದ್ವಾಂಸರು ಸೊಸಲೆ ಶ್ರೀ ವಿದ್ಯಾ ಶ್ರೀಶ ತೀರ್ಥ ಸ್ವಾಮೀಜಿಯವರಿಗೆ ತೈಲ ಅಭ್ಯಂಗ ಸೇವೆ ಮಾಡಿದರು. ಇದೇ ಸಂದರ್ಭ ಶ್ರೀ ಸ್ವಾಮೀಜಿಯವರು ನೂರಾರು ಭಕ್ತರಿಗೆ ತೈಲ ಪ್ರದಾನ ಮಾಡಿ ಆಶೀರ್ವದಿಸಿದರು.

ಬಾಗಿಲು ಮೀಟಿ ವೃದ್ಧೆ ಮನೆಯಲ್ಲಿ 1.40 ಲಕ್ಷ ನಗದು ಕಳವು

ಮೈಸೂರು, ಅ.20– ಹಸು ಸಾಕಿಕೊಂಡು ಜೀವನ ನಡೆಸುತ್ತಿರುವ ವೃದ್ಧೆಯೊಬ್ಬರು ಹಲವು ವರ್ಷಗಳಿಂದ ಕೂಡಿಟ್ಟಿದ್ದ ಹಾಗೂ ಹಸು ಮಾರಾಟ ಮಾಡಿದ್ದ ಹಣವನ್ನು ಕಳ್ಳತನ ಮಾಡಿರುವ ಘಟನೆ ತಾಲೂಕಿನ ಉದ್ದೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೆಂಪದೇವಮ್ಮ ಅವರ ಮನೆಯ ಬಾಗಿಲು ಮೀಟಿ ಒಳನುಗ್ಗಿರುವ ಖದೀಮರು, 1.40 ಲಕ್ಷ ರೂ. ಹಣವನ್ನು ಕಳವು ಮಾಡಿದ್ದು, ಈ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಂಪದೇವಮ್ಮ ಅವರ ಪತಿ ನಿಧನರಾಗಿದ್ದು, ಇಬ್ಬರು ಹೆಣ್ಣು ಮಕ್ಕಳಿಗೂ ವಿವಾಹವಾಗಿದೆ. ಹಾಗಾಗಿ ಹಸು ಸಾಕಾಣಿಕೆ ಮಾಡಿಕೊಂಡು ಒಂಟಿಯಾಗಿ ಜೀವನ ನಡೆಸುತ್ತಿದ್ದಾರೆ. ವರ್ಷಗಳಿಂದ ಹಾಲು ಮಾರಾಟ ಮಾಡಿದ್ದರಿಂದ ಬಂದಿದ್ದ 1 ಲಕ್ಷ ಹಣವನ್ನು ಚಿಕ್ಕ ಬ್ಯಾಗ್‌ನಲ್ಲಿ ಸುತ್ತಿ, ಮಂಚದ ಕೆಳಗೆ ಇಟ್ಟುಕೊಂಡಿದ್ದರು. ಇನ್ನು ಹಸು ಮಾರಾಟ ಮಾಡಿದ್ದ 40 ಸಾವಿರ ಹಣವನ್ನು ಸೂಟ್‌ಕೇಸ್‌ನಲ್ಲಿಟ್ಟಿದ್ದರು.

ಪೂಜೆ ಕಾರ್ಯಕ್ಕೆಂದು ಅ.17ರಂದು ಬೆಳಗ್ಗೆ ಮನೆಗೆ ಬೀಗ ಹಾಕಿಕೊಂಡು ಕೆಂಪದೇವಮ್ಮ ಅವರು ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ಮಗಳ ಮನೆಗೆ ಹೋಗಿ, ಒಂದೆರಡು ದಿನ ಅಲ್ಲೇ ಉಳಿದಿದ್ದಾರೆ. ನಿನ್ನೆ ಗ್ರಾಮದವರೊಬ್ಬರು ಕರೆ ಮಾಡಿ, ಮನೆ ಬಾಗಿಲು ತೆರೆದಿದೆ ಎಂದು ಹೇಳಿದ್ದಾರೆ. ತಕ್ಷಣ ಎಲ್ಲರೂ ಗ್ರಾಮಕ್ಕೆ ತೆರಳಿ ಪರಿಶೀಲಿಸಿದಾಗ ಬಾಗಿಲು ಮೀಟಿ ಹಣ ಕಳ್ಳತನ ಮಾಡಿರುವುದು ತಿಳಿದಿದೆ. ಈ ಸಂಬಂಧ ಕೆಂಪದೇವಮ್ಮ ಅವರ ಪುತ್ರಿ ಪೊಲೀಸರಿಗೆ ದೂರು ನೀಡಿದ್ದಾರೆ.

'ಶೋಲೆ' ಚಿತ್ರದ ಜೈಲರ್ ಅಸ್ರಾನಿ ಇನ್ನಿಲ್ಲ

ಮುಂಬೈ: ಭಾರತೀಯ ಚಿತ್ರರಂಗಕ್ಕೆ ತಮ್ಮದೇ ಕೊಡುಗೆ ನೀಡಿದ ಶ್ರೇಷ್ಠ ಹಾಸ್ಯ ಕಲಾವಿದ, ನಟ ಗೋವರ್ಧನ್ ಅಸ್ರಾನಿ(84) ಇಂದು ಮುಂಬೈನ ಆಸ್ಪತ್ರೆಯಲಿ ಕೊನೆಯುಸಿರೆಳೆದಿದ್ದಾರೆ. ಸಾಂತಾಕ್ರೂಜ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.



ಭಾರತದ ಸಾರ್ವಕಾಲಿಕ ಚಿತ್ರಗಳಲ್ಲೊಂದಾದ 'ಶೋಲೆ' ಚಿತ್ರದ ಜೈಲರ್ ಪಾತ್ರದ ಮೂಲಕ ಜಗದ್ವಿಖ್ಯಾತಿ ಗಳಿಸಿದ್ದ ಗೋವರ್ಧನ್ ಅಸ್ರಾನಿ ಮೂಲತಃ ರಾಜಸ್ಥಾನದ ಜೈಪುರದ ನಿವಾಸಿ. ಇಂದು ದೀಪಾವಳಿ ಹಬ್ಬದ ಪ್ರಯುಕ್ತ ತಮ್ಮ ಸೋಶಿಯಲ್ ಮೀಡಿಯಾ ಫಾಲೋವರ್ಸ್‌ಗಳಿಗೆ ಹಾಗೂ ಅಭಿಮಾನಿಗಳಿಗೆ ಅವರು ದೀಪಾವಳಿ ಹಬ್ಬದ ಶುಭಾಶಯ ಕೋರಿದ್ದರು. ಮೂಲಗಳ ಪ್ರಕಾರ ಇಂದು ಸಂಜೆ 4 ಗಂಟೆವರೆಗೆ ಅಸ್ರಾನಿ ಆರೋಗ್ಯವಾಗಿಯೇ ಇದ್ದರು. 4 ಘಂಟೆಯ ನಂತರ ಆರೋಗ್ಯದಲ್ಲಿ ಏರುಪೇರಾದ ಕಾರಣ ಅವರನ್ನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅಸ್ರಾನಿ ಕೊನೆಯುಸಿರೆಳೆದರು.

ಸರ್ಕಾರ ಮುಟ್ಟುಗೋಲು ಹಾಕಿಕೊಂಡ ಮನೆಯ ಬಾಗಿಲು ಮುರಿದು ಕಳವು

● ಗ್ರೀನ್ ಬಡ್ಸ್ ಆಗ್ರೋ ಫಾರಂ ಪ್ರೈ.ಲಿ. ವಂಚನೆ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮನೆ ಇದು ● ಜಪ್ತಿಯಾದ ಮನೆಯನ್ನು ಸಂರಕ್ಷಿಸದ ಅಧಿಕಾರಿಗಳು!

ಮೈಸೂರು, ಅ.20– ಸರ್ಕಾರ ಮುಟ್ಟುಗೋಲು ಹಾಕಿಕೊಂಡಿರುವ ಮನೆಯ ಹಿಂಬಾಗಿಲು ಮುರಿದು, ಮನೆಯ ವಸ್ತುಗಳನ್ನು ಚೆಲ್ಲಾಪಿಲ್ಲಿ ಗೊಳಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.


ನಗರದ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದಲ್ಲಿ ಹಲವು ವರ್ಷಗಳ ಹಿಂದೆ ಸರ್ಕಾರ ಮುಟ್ಟು ಗೋಲು ಹಾಕಿಕೊಂಡು, ಸೀಜ್ ಮಾಡಲಾಗಿದ್ದ ಗ್ರೀನ್ ಬಡ್ಸ್ ಆಗ್ರೋ ಫಾರಂ ಪ್ರೈ.ಲಿ.ಗೆ ಸೇರಿದ ಮನೆಯ ಚರಾಸ್ತಿ ಸ್ಥಳಾಂತರಕ್ಕೆಂದು ಅಧಿಕಾರಿಗಳು ತೆರಳಿದ್ದಾಗ ಈ ಘಟನೆ ಬೆಳಕಿಗೆ ಬಂದಿದೆ. ಯಾವುದೋ ದಾಖಲೆ ಅಥವಾ ವಸ್ತುವಿಗಾಗಿ ಹುಡುಕಾಟ ನಡೆಸಿರಬಹುದು ಎಂದು ಶಂಕಿಸಲಾಗಿದೆ.

ಸೀಲ್ ಆಗಿದ್ದ ಮನೆಯಲ್ಲಿರುವ ಚರಾಸ್ತಿಗಳ ಪರಿಶೀಲಿಸಿ, ಪಟ್ಟಿ ಮಾಡಿದ ನಂತರ ಸ್ಥಳಾಂತರಿಸ ಬೇಕೆಂಬ ಸೂಚನೆ ಮೇರೆಗೆ ತಹಶೀಲ್ದಾರ್ ಶಿರೀನ್ ತಾಜ್, ವಿಶೇಷಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರದ ಕಾನೂನು ಅಧಿಕಾರಿ ಎಂ.ಎಸ್. ರಕ್ಷಿತ್, ರಾಜಸ್ವ ನಿರೀಕ್ಷಕ ಬಿ.ಹೇಮಂತ್ ಕುಮಾರ್, ವಿಎಗಳಾದ ಅಜೀಂಖಾನ್ ಹಾಗೂ ಗಿರೀಶ್ ತಂಡ, ಅ.18ರಂದು ಕಾರ್ಯಾಚರಣೆಗೆ ಮುಂದಾಗಿತ್ತು.

ವಿಡಿಯೋಗ್ರಾಫರ್ ಸಹಿತ ಅಂದು ಮನೆ ಬಳಿ ತೆರಳಿದಾಗ ಸೀಲ್ ಮಾಡಿದ್ದ ಮುಖ್ಯ ಗೇಟ್‌ನ ಬೀಗ ತೆಗೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಹಿಂಬದಿ ಯಲ್ಲಿದ್ದ ಸೀಲ್ ಮಾಡಿರದ ಗೇಟ್ ಮೂಲಕ ಹೋದಾಗ ಮನೆಯ ಹಿಂಬಾಗಿಲು ಮುರಿದಿರುವುದು ಕಂಡು ಬಂದಿದೆ. ಬಳಿಕ ಮನೆಯೊಳಗೆ ಹೋದಾಗ ಶಾಕ್ ಕಾದಿತ್ತು. ಮನೆಯ ಎಲ್ಲಾ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಯಾರೋ ಅಪರಿಚಿತರು ಯಾವುದೋ ದುರುದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿ, ಹಿಂಬಾಗಿಲು ಹಾಗೂ ಮೊದಲ ಹಂತದ ಬಾಗಿಲನ್ನು ಮುರಿದಿದ್ದು, ಸರ್ಕಾರದ ವಶದಲ್ಲಿರುವ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿದವರ ಪತ್ತೆ ಮಾಡಿ, ಕ್ರಮ ಕೈಗೊಳ್ಳುವಂತೆ ರಾಜಸ್ವ ನಿರೀಕ್ಷಕ ಹೇಮಂತ್ ಕುಮಾರ್ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ಸರ್ಕಾರ ವಶಪಡಿಸಿಕೊಂಡು ಸೀಲ್ ಮಾಡಿದ್ದ ಸ್ವತ್ತಿಗೆ ಯಾವುದೇ ಭದ್ರತಾ ವ್ಯವಸ್ಥೆ ಮಾಡಿರಲಿಲ್ಲ. ಘಟನೆಯ ನಂತರ ಈ ಬಗ್ಗೆ ಕ್ರಮ ವಹಿಸಿರುವುದಾಗಿ ತಿಳಿದುಬಂದಿದೆ. ಅತಿಕ್ರಮ ಪ್ರವೇಶ ಮಾಡಿ, ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿದ್ದು ಯಾರು, ಯಾವ ದಾಖಲಾತಿ ಅಥವಾ ವಸ್ತುಗಳು ಕಳುವಾಗಿವೆ ಎಂದು ಪೊಲೀಸ್ ತನಿಖೆಯಲ್ಲಿ ತಿಳಿಯಬೇಕಿದೆ.



ಸರ್ಕಾರ ಮುಟ್ಟುಗೋಲು ಹಾಕಿಕೊಂಡಿರುವ ಮನೆ.

ಮೈಸೂರು ಮಿತ್ರ

ಮಂಗಳವಾರ 21 ಅಕ್ಟೋಬರ್ 2025

ಹೊರಳಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಷಡಕ್ಷರಿ, ಉಪಾಧ್ಯಕ್ಷರಾಗಿ ಸುಂದ್ರಪ್ಪ ಅವಿರೋಧ ಆಯ್ಕೆ

ತಿ.ನರಸೀಪುರ, ಅ.20– ತಾಲೂಕಿನ ಹೊರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕಾಂಗ್ರೆಸ್ ಪಾಲಾಗಿದ್ದು, ಅಧ್ಯಕ್ಷರಾಗಿ ಷಡಕ್ಷರಿ ಹಾಗೂ ಉಪಾಧ್ಯಕ್ಷರಾಗಿ ಸುಂದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅ.12ರಂದು ನಡೆದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಕಾಂಗ್ರೆಸ್‌ನ 11 ಮಂದಿ ಅವಿರೋಧವಾಗಿ ಆಯ್ಕೆಯಾದರೆ, ಅದೇ ಪಕ್ಷದ ದೊಡ್ಡಯ್ಯ ಚುನಾವಣೆ ಮೂಲಕ ಆಯ್ಕೆಯಾಗಿದ್ದರು.

ಸೋಮವಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಷಡಕ್ಷರಿ ಹಾಗೂ ಹಿಂದುಳಿದ ವರ್ಗ 'ಬಿ'ಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಸುಂದ್ರಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜಿ.ಪ್ರೇಮ ಘೋಷಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಸಹಕಾರ ಸಂಘದ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.



ನೂತನ ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆಯಾದ ಷಡಕ್ಷರಿ, ಸುಂದ್ರಪ್ಪ ಅವರನ್ನು ಮುಖಂಡರು ಅಭಿನಂದಿಸಿದರು.

ಸಹಕಾರ ಸಂಘದಲ್ಲಿ ನಡೆದ ಚುನಾವಣಾ ವಿಶೇಷ ಸಭೆಯಲ್ಲಿ ನಿರ್ದೇಶಕರಾದ ರಾಚಯ್ಯ, ಹೆಚ್.ಎಂ.ದಶಕಂತ, ನಂಜುಂಡೇಗೌಡ, ಹೆಚ್.ಎಂ.ಮಹದೇವಸ್ವಾಮಿ, ಹೆಚ್.ಎನ್.ಕಾಮಾಕ್ಷಿ, ಹೆಚ್.ಎಂ.ಶಿವಮ್ಮ, ಎಂ.ಮಲ್ಲೇಗೌಡ, ದೊಡ್ಡಯ್ಯ, ಕೃಷ್ಣ ಹಾಗೂ ಹೆಚ್.ಪಿ.ವರದರಾಜು ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಷಡಕ್ಷರಿ ಮಾತನಾಡಿ, ನನ್ನ ಅವಿರೋಧ ಆಯ್ಕೆಗೆ ಸಹಕಾರ ನೀಡಿದ ನಿರ್ದೇಶಕರು ಹಾಗೂ ಕಾಂಗ್ರೆಸ್ ಮುಖಂಡರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಸಹಕಾರ ಸಂಘದ ಅಭಿವೃದ್ಧಿಗೆ ನಿರ್ದೇಶಕರ ಸಹಕಾರ ಬಯಸುತ್ತೇನೆ ಹಾಗೂ ಸಂಘದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಸೊಸೈಟಿಯಲ್ಲಿ ಪಕ್ಷಾತೀತವಾಗಿ ಯಾವುದೇ ಗೊಂದಲಕ್ಕೂ ಅವಕಾಶ ಮಾಡಿಕೊಡದೇ ಒಮ್ಮತದ ಮೂಲಕ ನಿರ್ದೇಶಕರು ಮತ್ತು ಅಧ್ಯಕ್ಷ, ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದೊಂದು ಉತ್ತಮ ಬೆಳವಣಿಗೆಯಾಗಿದೆ. ಸೋಸಲೆ ಹೋಬಳಿಯಲ್ಲೇ ಮೊದಲ ಹಳೆಯ ಸೊಸೈಟಿ ಎಂಬ ಹೆಗ್ಗಳಿಕೆಗೆ ಸಹಕಾರ ಸಂಘ ಪಾತ್ರವಾಗಿದೆ. ಸಹಕಾರ ಸಂಘಕ್ಕೆ ಬರಬೇಕಾದ ಅನುದಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರೊಂದಿಗೆ ಮಾತನಾಡಿ ಕೊಡಿಸಲು ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

> “1948ರಲ್ಲಿ ಎ.ಎಂ.ಮಹದೇವಯ್ಯ ಎಂಬುವರು ಆರಂಭಿಸಿದ ಸೊಸೈಟಿ ಅಂದಿನಿಂದಲೂ ರೈತರಿಗೆ ಅನುಕೂಲ ಕಲ್ಪಿಸಿಕೊಡುವ ಮೂಲಕ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿದೆ. ಸೊಸೈಟಿಯಲ್ಲಿ ಈಗ ರೈತರಿಗೆ ಕೋಟ್ಯಾಂತರ ರೂ. ಸಾಲ ನೀಡಲಾಗುತ್ತಿದೆ. ಸಹಕಾರ ಸಂಘದಲ್ಲಿ ಈಗ ನೂತನ ಆಡಳಿತ ಮಂಡಳಿ ರಚನೆಯಾಗಿದೆ. ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರ ಮಾರ್ಗದರ್ಶನದಲ್ಲಿ ನೂತನ ಅಧ್ಯಕ್ಷ ಷಡಕ್ಷರಿಯವರು ಸೊಸೈಟಿಯನ್ನು ಉತ್ತಮವಾಗಿ ಮುಂದುವರೆಸಿಕೊಂಡು ಹೋಗುತ್ತಾರೆ.
> – ಉಕ್ಕಲಗೆರೆ ಬಸವಣ್ಣ, ಎಪಿಎಂಸಿ ಮಾಜಿ ಸದಸ್ಯ.

ಎಸ್‌ಸಿ/ಎಸ್‌ಟಿ ಹಿತರಕ್ಷಣಾ ಸಮಿತಿ ಸದಸ್ಯ ಮಹದೇವಸ್ವಾಮಿ, ಮಾಜಿ ಅಧ್ಯಕ್ಷ ಚಂದ್ರಪ್ಪ ನಿಂಗಪ್ಪ ಗುರುಸ್ವಾಮಿ, ಲಿಂಗಯ್ಯ, ಡಿ.ಮಹದೇವಸ್ವಾಮಿ, ವರದರಾಜು, ಗುರಪ್ಪ ದಶಕಂತ, ಮಹದೇವಣ್ಣ, ನಾಗಪ್ಪ, ಸಿಇಓ ಗವಿಗೌಡ, ಮಾಜಿ ಕಾರ್ಯದರ್ಶಿ ಹೆಚ್.ಎಂ.ಶಿವರಾಜು ಇತರರಿದ್ದರು.

ಸಾಲಬಾಧೆ: ಸೈನಿಕ ಆತ್ಮಹತ್ಯೆ



ಹುಣಸೂರು, ಅ.20– ಸಾಲಬಾಧೆ ತಾಳಲಾರದೇ ಸೈನಿಕರೊಬ್ಬರು ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಕೆಎಸ್‌ಆರ್‌ಟಿಸಿ ಡಿಪೋ ಹಿಂಭಾಗದ ನರಸಿಂಹಸ್ವಾಮಿ ಬಡಾವಣೆಯಲ್ಲಿ ನಡೆದಿದೆ.

ತಾಲೂಕಿನ ನಂಜಾಪುರದ ಮಂಜುನಾಥ ಶೆಟ್ಟಿ ಅವರ ಪುತ್ರ, ಭೂ ಸೇನೆಯ ಬೆಂಗಳೂರಿನ ಆರ್.ಟಿ.ನಗರದ ಪ್ಯಾರಾಚೂಟ್ ರೆಜಿಮೆಂಟ್‌ನ ಸೈನಿಕ ಎಂ.ಚಂದ್ರಶೇಖರ್(35) ಸಾವನ್ನಪ್ಪಿದವರು.

ಈತ ಕಳೆದ 2 ವರ್ಷಗಳ ಹಿಂದೆ ಕೆಎಸ್‌ಆರ್‌ಟಿಸಿ ಡಿಪೋ ಹಿಂಭಾಗದ ನರಸಿಂಹಸ್ವಾಮಿ ಬಡಾವಣೆಯಲ್ಲಿ ಹೊಸದಾಗಿ ಮನೆ ಕಟ್ಟಿಸಿದ್ದರು. ಇದಕ್ಕಾಗಿ ಬ್ಯಾಂಕ್ ಸೇರಿದಂತೆ ಸ್ನೇಹಿತರ ಬಳಿ ಸಾಕಷ್ಟು ಸಾಲ ಮಾಡಿದ್ದರು. ಆದರೆ ಮಾಡಿದ ಸಾಲ ತೀರಿಸಲಾಗದೇ ಖಿನ್ನತೆಗೆ ಒಳಗಾಗಿದ್ದ ಚಂದ್ರಶೇಖರ್ ಶನಿವಾರ ರಾತ್ರಿ ಪತ್ನಿ, ಮಕ್ಕಳು ಮನೆ ಹೊರಗಿದ್ದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಹುಣಸೂರು ನಗರ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ ಎಂದು ಎಸ್‌ಐ ಜಮೀರ್ ಅಹಮದ್ ತಿಳಿಸಿದ್ದಾರೆ.

ತಿಂಗಳ ಹಿಂದೆ ರಜೆ ಮೇಲೆ ಮನೆಗೆ ಬಂದಿದ್ದರು. ದೀಪಾವಳಿ ಹಬ್ಬದ ನಂತರ ಕರ್ತವ್ಯಕ್ಕೆ ವಾಪಸ್ ತೆರಳಬೇಕಿತ್ತು. ಆದರೆ ದುರಾದೃಷ್ಟವಶಾತ್ ಶನಿವಾರ ರಾತ್ರಿ ಆತ್ಮಹತ್ಯೆಗೆ ಶರಣಾಗಿದ್ದರಿಂದ ಭಾನುವಾರ ಶವ ಪರೀಕ್ಷೆ ನಂತರ ಸ್ವಗ್ರಾಮ ನಂಜಾಪುರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಸೈನಿಕ ಎಂ.ಚಂದ್ರಶೇಖರ್ ಕಳೆದ 15 ವರ್ಷಗಳಿಂದ ಜಮ್ಮು ಕಾಶ್ಮೀರ, ಆಗ್ರಾ, ಚೀನಾ ಗಡಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು ಎಂದು ತಿಳಿದು ಬಂದಿದೆ.

ವ್ಯಕ್ತಿ ನಾಪತ್ತೆ



ತಿ.ನರಸೀಪುರ, ಅ.20– ವ್ಯಕ್ತಿ ನಾಪತ್ತೆಯಾಗಿರುವ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಲೂಕಿನ ನಿಲಸೋಗೆ ಗ್ರಾಮದ ಮಹದೇವ(43) ನಾಪತ್ತೆಯಾದವರು. ತನ್ನ ಪತಿಯನ್ನು ಹುಡುಕಿ ಕೊಡುವಂತೆ ಪತ್ನಿ ಮಂಜುಳ ದೂರು ನೀಡಿದ್ದು, ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ: 08227–261227 ಸಂಪರ್ಕಿಸಿ.

ಸೋಸಲೆ ಅಂಗನವಾಡಿಯಲ್ಲಿ ಪೋಷಣೆ ಅಭಿಯಾನ

ತಿ.ನರಸೀಪುರ, ಅ.20– ಸ್ಥಳೀಯವಾಗಿ ದೊರೆಯುವ ಸೊಪ್ಪು, ತರಕಾರಿಗಳಲ್ಲಿ ಹೆಚ್ಚು ಪೋಷಕಾಂಶ ಇರುವುದರಿಂದ ಸಾರ್ವಜನಿಕರು ಅವುಗಳನ್ನು ಹೆಚ್ಚು ಸೇವಿಸಬೇಕು ಎಂದು ಸೋಸಲೆ ಗ್ರಾಪಂ ಅಧ್ಯಕ್ಷೆ ಭಾಗ್ಯ ಶಿವಕುಮಾರ್ ತಿಳಿಸಿದರು.



ಕಾರ್ಯಕ್ರಮವನ್ನು ಗ್ರಾಪಂ ಅಧ್ಯಕ್ಷೆ ಭಾಗ್ಯ ಉದ್ಘಾಟಿಸಿದರು.

ತಾಲೂಕಿನ ಸೋಸಲೆ ಅಂಗನವಾಡಿ ಕೇಂದ್ರದಲ್ಲಿ ತಾಲೂಕು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸೋಸಲೆ ಗ್ರಾಪಂ ವತಿಯಿಂದ ನಡೆದ ಪೋಷಣೆ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮಕ್ಕಳು, ಯುವಕರು ಮತ್ತು ವಯೋವೃದ್ಧರು ಪಾಶ್ಚಿಮಾತ್ಯ ಶೈಲಿಯ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬಳಸುತ್ತಿರುವುದರಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಹೀಗಾಗಿ ಜನರು ಸ್ಥಳೀಯವಾಗಿ ಸಿಗುವ ಸೊಪ್ಪು, ತರಕಾರಿ, ಆಹಾರ, ಹಣ್ಣು ಹಂಪಲನ್ನು ಹೆಚ್ಚಾಗಿ ಸೇವಿಸುವುದರಿಂದ ಆರೋಗ್ಯ ವೃದ್ಧಿಸಲಿದೆ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋವಿಂದರಾಜು ಮಾತನಾಡಿ, ಪ್ರಸ್ತುತ ಮಕ್ಕಳು, ಮಹಿಳೆಯರಲ್ಲಿ ಹೆಚ್ಚು ರಕ್ತಹೀನತೆ ಕಾಡುತ್ತಿದೆ. ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರ ಕೊಡುವುದು ಪೋಷಕರ ಕರ್ತವ್ಯ. ಬಾಣಂತಿಯರಲ್ಲಿ ಹೆಚ್ಚು ರಕ್ತಹೀನತೆ ಸಹಜ. ಆ ವೇಳೆ ಮಹಿಳೆಯರು ಪೋಷಕಾಂಶಯುಕ್ತ ಆಹಾರ ಸೇವಿಸುವುದರಿಂದ ತಮ್ಮ ಜೀವದ ಜೊತೆಗೆ ತಮ್ಮ ಮಗುವಿನ ಜೀವ ಕಾಪಾಡಬಹುದು ಎಂದರು.

ಬಿಆರ್‌ಸಿ ನಾಗೇಶ್ ಮಾತನಾಡಿ, ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲು ಪ್ರಥಮ ಆದ್ಯತೆ ನೀಡಬೇಕು. ಇದರಿಂದ ಪೋಷಕರ ಮೇಲಿನ ಆರ್ಥಿಕ ಹೊರೆ ಕಡಿಮೆಯಾಗಲಿದೆ. ಸರ್ಕಾರಿ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಸರ್ಕಾರ ಸಮವಸ್ತ್ರ, ಶೂ, ವಿದ್ಯಾರ್ಥಿ ವೇತನ, ಬಿಸಿಯೂಟ, ಹಾಲು, ಹಣ್ಣು ನೀಡುವ ಜೊತೆಗೆ ಉತ್ತಮ ಶಿಕ್ಷಣ ನೀಡುತ್ತಿದೆ ಎಂದರು.

ಈ ವೇಳೆ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಸದಸ್ಯರಾದ ಶಿವಕುಮಾರ್, ಮಹೇಶ್, ಪ್ರೀತಿ, ವೈದ್ಯೆ ಡಾ.ವೇದ, ಪೋಷಣ್ ಕೋ ಆರ್ಡಿನೇಟರ್ ನಂದಿನಿ, ಅಂಗನವಾಡಿ ಮೇಲ್ವಿಚಾರಕರಾದ ಎಲ್ಲಮ್ಮ, ಸುಗಂಧ, ಸರೋಜ, ಉಪಾಧ್ಯಕ್ಷೆ ನವೀನ, ಮುಖಂಡ ಶಿವಕುಮಾರ್, ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು.

ನ.1ಕ್ಕೆ ಕೋಟೆ, ಸರಗೂರಲ್ಲಿ ಅದ್ಧೂರಿ ಕನ್ನಡ ರಾಜ್ಯೋತ್ಸವ

ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಮಾಹಿತಿ

ಹೆಚ್.ಡಿ.ಕೋಟೆ, ಅ.20– ಸರಗೂರು ಹಾಗೂ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ನ.1ರಂದು ಅದ್ಧೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮಹಾತ್ಮ ಗಾಂಧಿ ಸಭಾ ಭವನದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದಲ್ಲಿ ಕಾರು ಚಾಲಕರು, ಆಟೋ ಚಾಲಕ, ವರ್ತಕರ ಸಂಘ ಹಾಗೂ ಇತ್ಯಾದಿ ಸಂಘ ಸಂಸ್ಥೆಗಳ ಸದಸ್ಯರೊಂದಿಗೆ ಮತ್ತೊಂದು ಸಭೆ ಕರೆದು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೋರಲಾಗುವುದು. ಅಲ್ಲದೇ ಸ್ತಬ್ಧ ಚಿತ್ರ ನಿರ್ಮಿಸಿ ಭಾಗವಹಿಸಲು ಸೂಚಿಸಲಾಗುವುದು ಎಂದರು.



ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಮಾತನಾಡಿದರು.

ಸರಗೂರಿನ ಬಾಲ್ ಮೈದಾನ ಮತ್ತು ಕೋಟೆಯ ಹಳೇ ಆಸ್ಪತ್ರೆ ಆವರಣದಲ್ಲಿ ರಾಜ್ಯೋತ್ಸವ ಆಚರಿಸಲಾಗುವುದು ಎಂದ ಅವರು, ರಾಜ್ಯೋತ್ಸವದಂದು ಕನ್ನಡದಲ್ಲಿ ನಾಮಫಲಕ ಇಲ್ಲದ ಅಂಗಡಿಗಳಿಗೆ ತೆರಳಿ ಜಾಗೃತಿ ಮೂಡಿಸಿ ಅವರನ್ನು ಸನ್ಮಾನಿಸುವ ಮೂಲಕ ಕನ್ನಡ ನಾಮಫಲಕ ಅಳವಡಿಸುವಂತೆ ಸೂಚಿಸಲಾಗುವುದು ಎಂದರು.

ರಾಜ್ಯೋತ್ಸವದಂದು ವರ್ತಕರು ತಮ್ಮ ಅಂಗಡಿಗಳ ಮೇಲೆ ಕನ್ನಡ ಬಾವುಟ ಹಾರಿಸಬೇಕು. ಜೊತೆಗೆ ಉತ್ತಮವಾಗಿ ಕನ್ನಡ ರಾಜ್ಯೋತ್ಸವ ಆಚರಿಸುವ ವರ್ತಕರಿಗೆ ಪ್ರಥಮ 10 ಸಾವಿರ, ದ್ವಿತೀಯ 5 ಸಾವಿರ ಹಾಗೂ ತೃತೀಯ 3 ಸಾವಿರ ಬಹುಮಾನ ವಿತರಿಸಲಾಗುವುದು ಎಂದರು.

ಈ ಬಾರಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸಾಧ್ಯವಾದರೆ ಆನೆ ಕರೆತರಲು ಪ್ರಯತ್ನಿಸಲಾಗುವುದು ಎಂದರು.

ತಾಲೂಕು ಕಸಾಪ ಅಧ್ಯಕ್ಷ ಪ್ರಮೋದ್ ಮಾತನಾಡಿ, ರಾಜ್ಯೋತ್ಸವದಂದು ಆಟೋ ಚಾಲಕರು, ಕಾರು ಚಾಲಕರು ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಾಡು ನುಡಿಗೆ ಗೌರವ ಸಲ್ಲಿಸುವಂತಹ ಸ್ತಬ್ಧ ಚಿತ್ರಗಳನ್ನು ನಿರ್ಮಿಸಿ ಮೆರವಣಿಗೆಯಲ್ಲಿ ಭಾಗವಹಿಸುವಂತೆ ಸೂಚಿಸಲು ತಹಸೀಲ್ದಾರ್ ಅವರಿಗೆ ಮನವಿ ಮಾಡಿದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ತಾಲೂಕು ಆಡಳಿತದಿಂದ ಎಲ್ಲಾ ಇಲಾಖೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಸಂದೇಶ ಸಾರುವ ರೀತಿ ಕಾರ್ಯಕ್ರಮ ಆಯೋಜಿಸಲಾಗುವುದು. ಈ ಬಾರಿ ಐವರು ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಈ ವೇಳೆ ಸರಗೂರು ತಹಸೀಲ್ದಾರ್ ಮೋಹನ್ ಕುಮಾರಿ, ಇನ್ಸ್‌ಪೆಕ್ಟರ್‌ಗಳಾದ ಗಂಗಾಧರ್, ಕಿರಣ್, ಕೋಟೆ, ಸರಗೂರು ಇಓಗಳಾದ ಧರಣೇಶ್, ಪ್ರೇಮ್ ಕುಮಾರ್, ಮುಖಂಡರಾದ ಕೆಂಡಗಣ್ಣೇಗೌಡ, ಜೀವಿಕ ಬಸವರಾಜ್, ಪ್ರಕಾಶ್, ಜವರಯ್ಯ, ಕ್ರಾಂತಿ ಕುಮಾರ್, ಪ್ರಕಾಶ್ ಬುದ್ಧ, ಉಮೇಶ್, ಅಶೋಕ್, ನಾಗರಾಜು, ಮಾದೇವನಾಯಕ, ಚಾಮರಾಜು, ಅನುಷಾ, ಬಿಇಓ ರಾಜು, ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ಮಹೇಶ್, ವೈ.ಡಿ.ರಾಜಣ್ಣ, ಸಂತೋಷ್ ಕುಮಾರ್, ಶಶಿಕಲಾ, ರಮೇಶ್, ನೇತ್ರಾವತಿ, ಎಇಇ ಗಣೇಶ್, ಗೋವಿಂದನಾಯಕ, ಚಂದುಕುಮಾರ್, ವಸಂತ್, ಇತರರಿದ್ದರು.

ಇಂದಿನಿಂದ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ದೀವಟಿಗೆ ಉತ್ಸವ

● ಉತ್ಸವಕ್ಕೆ ಸಕಲ ಸಿದ್ಧತೆ ● ಸಂಸದ ಯದುವೀರ್ ಭಾಗಿ

ಬೆಟ್ಟದಪುರ, ಅ.20– ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಇಲ್ಲಿನ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೀವಟಿಗೆ ಉತ್ಸವಕ್ಕೆ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಬೆಟ್ಟದಪುರ ಗ್ರಾಮ ನವವಧುವಿನಂತೆ ಸಿಂಗಾರಗೊಂಡಿದೆ.

ದೀವಟಿಗೆ ಉತ್ಸವ 2 ದಿನಗಳ ಕಾಲ ನಡೆಯಲಿದ್ದು, ಮಂಗಳವಾರ ಅ.21 ರಂದು ಮುಂಜಾನೆ 5 ಗಂಟೆಗೆ ರಾಜವಂಶಸ್ಥರೂ ಆದ ಸಂಸದ ಯದುವೀರ್ ಇದೇ ಮೊದಲ ಬಾರಿಗೆ ಬೆಟ್ಟ ಹತ್ತಿ ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಇವರನ್ನು ಸ್ವಾಗತಿಸಲು ಗ್ರಾಮಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ.

ಅಲ್ಲದೇ ಬೆಟ್ಟದಪುರ ಬೆಟ್ಟ 3600 ಮೆಟ್ಟಿಲುಗಳನ್ನು ಹೊಂದಿದ್ದು, ಲಕ್ಷಾಂತರ ಭಕ್ತರು ಬೆಟ್ಟ ಹತ್ತಲಿದ್ದಾರೆ. ಇವರಿಗೆ ಹುಣಸೂರು ತಾಲೂಕಿನ ದಾವಣಗೆರೆ ಮಠದ ಶ್ರೀಗುರುಲಿಂಗ ಜಂಗಮಮಠದ ನಟರಾಜ ಸ್ವಾಮಿಗಳು ಅನ್ನ ದಾಸೋಹ ಏರ್ಪಡಿಸಿದ್ದಾರೆ. ಅಲ್ಲದೇ ಕುಡಿಯುವ ನೀರಿನ ವ್ಯವಸ್ಥೆ ಕೈಗೊಂಡಿದ್ದಾರೆ.

ಮನೆ ಮನೆಗಳಲ್ಲಿ ಹಸಿರು ತೋರಣ: ದೀಪಾವಳಿ ಹಿನ್ನಲೆಯಲ್ಲಿ ಬೆಟ್ಟದ ಸುತ್ತಲ ಗ್ರಾಮಗಳಲ್ಲಿ ಸಂಭ್ರಮ ಮನೆ ಮಾಡಿದೆ. ಹಸಿರು ಚಪ್ಪರ ಹಾಕಿ ಬೆಳ್ಳಿ ಬಸಪ್ಪ ಮತ್ತು ಸಿಡಿಲು ಮಲ್ಲಿಕಾರ್ಜುನ ಸ್ವಾಮಿಯನ್ನು ಪೂಜಿಸುವುದೇ ಒಂದು ವಿಶೇಷ. ತಮ್ಮ ಮನೆಗೆ ಬಂಧುಗಳನ್ನು ಕರಿಸಿ, ಚಪ್ಪರದಲ್ಲಿ ಕೂರಿಸಿ ವಿಶೇಷ ಪೂಜೆಗಳನ್ನು ಮಾಡಿಸಿ ದೇವರಿಗೆ ತಮ್ಮ ಹರಕೆಯನ್ನು ತೀರಿಸುತ್ತಾರೆ. ಮಂಗಳವಾರ ಅಮಾವಾಸ್ಯೆ ದಿನ ಲಕ್ಷಾಂತರ ಜನರು ಬೆಟ್ಟ ಹತ್ತಿ ಹೋಗುವುದರಿಂದ ಪೊಲೀಸ್, ಅರಣ್ಯ ಹಾಗೂ ಆರೋಗ್ಯ ಇಲಾಖೆಯವರು ವಿಶೇಷ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.



ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಸನ್ನಿಧಿ.

ಹೆಚ್ಚಿನ ಭದ್ರತೆ: ಬುಧವಾರ ದೀಪಾವಳಿ ದೀವಟಿಗೆ ಉತ್ಸವ ನಡೆಯಲಿದ್ದು, ಬೆಟ್ಟದಪುರ ಪೊಲೀಸ್ ಠಾಣಾಧಿಕಾರಿ ಅಜಯ್ ಕುಮಾರ್ ನೇತೃತ್ವದಲ್ಲಿ ಈಗಾಗಲೇ 200ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಆ ಮೂಲಕ ಬೆಟ್ಟದ ಮೇಲೆ ನೂಕುನುಗ್ಗಲು ಆಗದಂತೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ.

ದೀವಟಿಕೆ ಉತ್ಸವ ಮಾಡುವ ಭಕ್ತರಿಗೆ ಬೆಟ್ಟದಪುರದ ವೀರಶೈವ ಲಿಂಗಾಯತ ಸಮಾಜ ಹಾಗೂ ಗ್ರಾಮಸ್ಥರ ನೆರವಿನೊಂದಿಗೆ ಸಾವಿರಾರು ಭಕ್ತಾದಿಗಳಿಗೆ ಬುಧವಾರ ಸಂಜೆ ಅನ್ನ ದಾಸೋಹ ನೆರವೇರಿಸಲಾಗುತ್ತದೆ.

ಮಂಗಳವಾರ ಸಂಸದ ಯದುವೀರ್, ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವಕ್ಕೆ ರಥ ನೀಡಿದ ದಾನಿ ಸುರೇಶ್ ಹಾಗೂ ಕುಟುಂಬಸ್ಥರಿಗೆ ಸನ್ಮಾನ ಮಾಡಲಾಗುವುದು. ಕಾರ್ಯಕ್ರಮದಲ್ಲಿ ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ, ದಿಂಡುಗಾಡು ಮಠದ ಅಪ್ಪಾಜಿ ಸ್ವಾಮೀಜಿ ವಿವಿಧ ಸಮಾಜದ ಮುಖಂಡರು ಸೇರಿದಂತೆ ಇತರರಿಗೂ ಸನ್ಮಾನ ಮಾಡಲಾಗುವುದು.

ಕನ್ನಡ ರಾಜ್ಯೋತ್ಸವ ಅಂಗವಾಗಿ ಕವನ ವಾಚನ ಸ್ಪರ್ಧೆ

ಸರಗೂರು, ಅ.20– ಕನ್ನಡ ರಾಜ್ಯೋತ್ಸವ ಅಂಗವಾಗಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಕವನ ವಾಚನ ಸ್ಪರ್ಧೆ ಆಯೋಜಿಸಲಾಗಿದೆ.

ಕವನಗಳು 50 ಪದ ಮೀರಿರಬಾರದು. ಕವನಗಳು ಸರಗೂರು ತಾಲೂಕಿನ ಇತಿಹಾಸ, ಹೆಮ್ಮೆ ಹಾಗೂ ಗಡಿ ಕುರಿತಾಗಿರಬೇಕು. ಒಬ್ಬರು ಒಂದು ಕವನ ಕಳುಹಿಸಲು ಮಾತ್ರ ಅವಕಾಶ ಕಲ್ಪಿಸಲಾಗಿದೆ. ಸ್ವೀಕೃತವಾದ ಕವನಗಳನ್ನು ಆಯ್ಕೆ ಸಮಿತಿ ಪರಿಶೀಲಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನದ ಜೊತೆಗೆ ಪ್ರಶಸ್ತಿ ಪತ್ರ ವಿತರಿಸಲಾಗುವುದು. ಆಯ್ಕೆಯಾದ 3 ಕವನಗಳೊಂದಿಗೆ ಇನ್ನಿತರರು ನ.1ರಂದು ನಡೆಯುವ ಕನ್ನಡ ರಾಜ್ಯೋತ್ಸವದಲ್ಲಿ ವಾಚನ ಮಾಡಲು ಅವಕಾಶ ಮಾಡಿಕೊಡಲಾಗುವುದು ಮತ್ತು ಬರಹಗಾರರನ್ನು ಸನ್ಮಾನಿಸಲಾಗುವುದು. ಕವನಗಳನ್ನು ಅ.25ರೊಳಗೆ ಅಧ್ಯಕ್ಷರು, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ಸರಗೂರು ತಾಲೂಕು ಅಥವಾ ಜಂಟಿ ಕಾರ್ಯದರ್ಶಿ ಕನ್ನಡ ಸಾಹಿತ್ಯ ಪರಿಷತ್ತು, ಸರಗೂರು ತಾಲೂಕು ಇವರಿಗೆ ಖುದ್ದಾಗಿ ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ಮೊ: 9880821541 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಹುಣಸೂರು ಟಿಎಪಿಸಿಎಂಎಸ್ ಚುನಾವಣೆ

ನಾಲ್ವರು ಜೆಡಿಎಸ್ ಬೆಂಬಲಿತ ನಿರ್ದೇಶಕರು ಆಯ್ಕೆ

ಹುಣಸೂರು, ಅ.20– ಹುಣಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿ ಜೆಡಿಎಸ್ ಬೆಂಬಲಿತ ನಾಲ್ವರು ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಟಿಎಪಿಸಿಎಂಎಸ್ ಆಡಳಿತ ಮಂಡಳಿ ಚುನಾವಣೆ ದಿನಾಂಕ ಘೋಷಣೆಯಾಗಿ ಅ.12 ರಿಂದ 18ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಮಾಡಿಕೊಡಲಾಗಿತ್ತು. ಅ.19ರಂದು ನಾಮಪತ್ರ ಪರಿಶೀಲನೆ ನಡೆದು, ಅ.20 ರಂದು ನಾಮಪತ್ರ ವಾಪಸ್ ಪಡೆಯಲು ಅಂತಿಮ ದಿನವಾಗಿತ್ತು. ಕಣದಲ್ಲಿ 20 ಮಂದಿ ಉಳಿದಿದ್ದರು.

'ಎ' ತರಗತಿಯ 4 ಸ್ಥಾನಗಳಿಗೆ ಅವಿರೋಧ ಆಯ್ಕೆ: 'ಎ' ತರಗತಿ (ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ) ನಾಲ್ಕು ಸ್ಥಾನಗಳಿಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಮಧುಗಿರಿಕೊಪ್ಪಲಿನ ಗೋವಿಂದೇಗೌಡ, ಗೆರಸನಹಳ್ಳಿಯ ರೇವಣ್ಣ, ಹಬ್ಬನಕುಪ್ಪೆಯ ಪ್ರೇಮ್ ಕುಮಾರ್, ಗಾವಡಗೆರೆಯ ಹೊನ್ನಪ್ಪರಾವ್ ಕಾಳಿಂಗೆ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಹಸೀಲ್ದಾರ್ ಮಂಜುನಾಥ್ ಘೋಷಿಸಿದರು.

ಕಣದಿಂದ ಹಿಂದೆ ಸರಿದ ಅಭ್ಯರ್ಥಿಗಳು: ಸ್ವತಂತ್ರವಾಗಿ ಆಯ್ಕೆ ಬಯಸಿ ನಾಮಪತ್ರ ಸಲ್ಲಿಸಿದ ರವಿಕುಮಾರ್, ಸತ್ಯನಾರಾಯಣ.ಕೆ ಹಾಗೂ ವೆಂಕಟಪತಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಬೆಂಬಲಿಸಿ ಕಣದಿಂದ ಹಿಂದೆ ಸರಿದರು.






ಹೊನ್ನಪ್ಪರಾವ್ ಪ್ರೇಮ್ ಕುಮಾರ್ ಗೋವಿಂದೇಗೌಡ ರೇವಣ್ಣ

ಶಾಸಕರ ಚಾಣಾಕ್ಷತನ: ನಾಲ್ವರು ಜೆಡಿಎಸ್ ಬೆಂಬಲಿತ ನಿರ್ದೇಶಕರ ಆಯ್ಕೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರ ರಾಜಕೀಯ ಚಾಣಾಕ್ಷತನ ಎದ್ದು ಕಾಣುತ್ತಿತ್ತು. ಪಕ್ಷದ ಆಕಾಂಕ್ಷಿಗಳ ಮನವೊಲಿಸುವ ಜೊತೆಗೆ ಬೇರೆ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದಂತೆ ನೋಡಿಕೊಂಡು ಅವಿರೋಧ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಇವರಿಗೆ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳಿ ನಿರ್ದೇಶಕ ಕೆ.ಎಸ್.ಕುಮಾರ್ ಸಾಥ್ ನೀಡಿದರು.

ಟಿಎಪಿಸಿಎಂಎಸ್‌ನ ಒಟ್ಟು 12 ಸ್ಥಾನಗಳಿಗೆ ಈಗಾಗಲೇ ಎ ತರಗತಿಯಿಂದ ನಾಲ್ವರು ಅವಿರೋಧವಾಗಿ ಆಯ್ಕೆಯಾಗಿದ್ದು, ಬಿ ತರಗತಿಯಿಂದ ಉಳಿದ 8 ಸ್ಥಾನಗಳ ಪೈಕಿ ಪ.ಜಾತಿ ಗೆ 1, ಪಪಂ ಕ್ಕೆ 1, ಹಿಂದುಳಿದ ವರ್ಗ ಎ 1, ಹಿಂದುಳಿದ ವರ್ಗ ಬಿ 1, ಸಾಮಾನ್ಯ ವರ್ಗ 2, ಮಹಿಳೆಯರಿಗೆ 2 ಸ್ಥಾನಗಳು ಮೀಸಲಾಗಿದ್ದು, ಅಂತಿಮ ಕಣದಲ್ಲಿ ಜೆಡಿಎಸ್, ಕಾಂಗ್ರೆಸ್‌ನಿಂದ ತಲಾ 8, ನಾಲ್ವರು ಪಕ್ಷೇತರರು ಕಣದಲ್ಲಿದ್ದು, ಅ.26 ರಂದು ನಡೆಯುವ ಚುನಾವಣೆ ಕುತೂಹಲ ಮೂಡಿಸಿದೆ.

ಜೆಡಿಎಸ್‌ನಿಂದ ಮಹಿಳಾ ಮೀಸಲು ಕ್ಷೇತ್ರಕ್ಕೆ ಇಂದುಕಲಾ, ಮಂಗಳಗೌರಿ, ಪ.ಜಾತಿ ಬಸವಲಿಂಗಯ್ಯ, ಪಪಂ ಸೋಮಶೇಖರ್.ಎಂ, ಹಿಂ.ವರ್ಗ ಎ ಯಿಂದ ಹೆಚ್.ಟಿ.ಬಾಬು, ಹಿಂ.ವರ್ಗ ಬಿಯಿಂದ ಕೆಂಪೇಗೌಡ.ಎ.ಸಿ, ಸಾಮಾನ್ಯ ಕ್ಷೇತ್ರದಿಂದ ವೆಂಕಟೇಶ್.ಜಿ.ಎನ್, ಮಹೇಶ್.ಹೆಚ್.ಆರ್ ಅಂತಿಮ ಕಣದಲ್ಲಿದ್ದಾರೆ.

ಕಾಂಗ್ರೆಸ್‌ನಿಂದ ಮಹಿಳಾ ಮೀಸಲು ಕ್ಷೇತ್ರಕ್ಕೆ ಕೆ.ಎನ್.ಕಲ್ಪನಾ, ಕಾವ್ಯ ಎಂ.ಎನ್, ಪ.ಜಾತಿ ಚಿನ್ನವೀರಯ್ಯ, ಹಿಂ.ವರ್ಗ ಬಿ ಯಿಂದ ಹೆಚ್.ಜೆಯೋಗಾನಂದ, ವೈಶಾಕ್.ಎಂ, ಹಿಂ.ವರ್ಗ ಎ ಯಿಂದ ಶಂಕರ್.ಕೆ, ಸಾಮಾನ್ಯ ಕ್ಷೇತ್ರ ಹೆಚ್.ಎಸ್.ಮಹೇಶ್, ಕುಮಾರ್.ಎಂ ಅಂತಿಮ ಕಣದಲ್ಲಿದ್ದಾರೆ. ಅಲ್ಲದೇ ಪಕ್ಷೇತರ ಅಭ್ಯರ್ಥಿಗಳಾಗಿ ಜಯಣ್ಣ, ಜವರನಾಯ್ಕ, ಗೌಡಯ್ಯ, ಪುಟ್ಟಸ್ವಾಮಿ ಕಣದಲ್ಲಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಖಂಡಿಸಿ

ಹೆದ್ದಾರಿ ತಡೆದು ಪ್ರತಿಭಟಿಸಿದ 'ಕೈ' ಕಾರ್ಯಕರ್ತರು

ನಂಜನಗೂಡು, ಅ.20– ಸರ್ಕಾರಿ ಶಾಲಾ ಕಾಲೇಜುಗಳ ಆವರಣದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆದಿದ್ದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದುಷ್ಕರ್ಮಿಗಳು ದೂರವಾಣಿ ಕರೆ ಮಾಡಿ ಬೆದರಿಸುತ್ತಿರುವುದನ್ನು ಖಂಡಿಸಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ನಗರದ ವಿಶ್ವೇಶ್ವರಯ್ಯ ವೃತ್ತದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ 766ರ ಮೈಸೂರು ಮುಖ್ಯ ರಸ್ತೆ ತಡೆದು, ಮಾನವ ಸರಪಳಿ ನಿರ್ಮಿಸಿ ಆರ್‌ಎಸ್‌ಎಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ, ಆರ್‌ಎಸ್‌ಎಸ್‌ನ ಕೆಲ ಮನುವಾದಿಗಳು ನಮಗೆ ಸಂವಿಧಾನ ಬೇಡ, ಮನು ಸ್ಮೃತಿ ಬೇಕು ಎಂದು ಸಂವಿಧಾನವನ್ನು ಬುಡಮೇಲು ಮಾಡಲು ಹೊರಟಿದ್ದಾರೆ. ಅಲ್ಲದೇ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರೆ ಮಾಡಿ ಬೆದರಿಕೆ ಹಾಕುವ ಮೂಲಕ ದೇಶದಲ್ಲಿ ಕೋಮುವಾದ ಸೃಷ್ಟಿಸಿ ಭಯದ ವಾತಾವರಣ ನಿರ್ಮಿಸಿರುವ ಕ್ರಮ ಖಂಡನೀಯ ಎಂದರು.

ನಂಜನಗೂಡು ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ ಮಾತನಾಡಿ, ಸಚಿವ ಪ್ರಿಯಾಂಕ್ ಖರ್ಗೆ ಡಾ.ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳಲ್ಲಿ ಅಚಲ ನಂಬಿಕೆ ಇಟ್ಟವರು. ಜಾತಿ ರಹಿತ, ವರ್ಗ ರಹಿತ, ಶೋಷಣೆ ಮುಕ್ತ ಸಮಾಜ ಸ್ಥಾಪನೆಗೆ ಶ್ರಮಿಸುತ್ತಿದ್ದಾರೆ. ರಾಜ್ಯದಲ್ಲಿ ಇತ್ತೀಚೆಗೆ ಜಾತಿವಾದಿ ಸಂಘಟನೆಗಳು ಮಕ್ಕಳ ತಲೆಯಲ್ಲಿ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿರುವುದನ್ನು ಗಮನಿಸಿ ಇಂತಹ ಸಂಘಟನೆಗಳ ಚಟುವಟಿಕೆಯನ್ನು ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ನಿರ್ಬಂಧಿಸುವಂತೆ ಪತ್ರ ಬರೆದಿದ್ದರು. ಆದರೆ ಇದನ್ನೇ ನೆಪವಾಗಿಟ್ಟುಕೊಂಡು ಸಚಿವ ಪ್ರಿಯಾಂಕ್ ಅವರ ತೇಜೋವಧೆ, ವ್ಯಯಕ್ತಿಕ ನಿಂದನೆ ನಡೆಸಲಾಗುತ್ತಿದೆ. ಇದು ಖಂಡನೀಯವಾಗಿದ್ದು 'ಭಾರತ ಬುದ್ಧ, ಬಸವಣ್ಣರ ದೇಶ. ಡಾ.ಅಂಬೇಡ್ಕರ್ ಬರೆದ ಸಂವಿಧಾನ ಈ ದೇಶದ ಜೀವಾಳವಾಗಿದ್ದು, ದೇಶದ ಸಂವಿಧಾನ ತೆಗೆದು ಮನುಸ್ಮೃತಿ ತರುವುದು ಆರ್‌ಎಸ್‌ಎಸ್ ಸಂಘಟನೆಯ ಹುನ್ನಾರವಾಗಿದೆ. ಹೀಗಾಗಿ ಸಂವಿಧಾನ ಪ್ರತಿಪಾದಿಸುವ ಸಚಿವ ಪ್ರಿಯಾಂಕ್ ಖರ್ಗೆಯವರ ಬೆಳವಣಿಗೆ ಸಹಿಸದೇ ಅವರ ವಿರುದ್ಧ ಕೀಳುಮಟ್ಟದ ಭಾಷೆ ಬಳಸಿ ನಿಂದಿಸಲಾಗುತ್ತಿದೆ. ಕೂಡಲೇ ರಾಜ್ಯ ಹಾಗೂ ದೇಶದಲ್ಲಿ ಆರ್‌ಎಸ್‌ಎಸ್ ನಿಷೇಧಿಸಬೇಕು. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಹಾಕುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಬಿಜೆಪಿಗರು ದೇಶದಲ್ಲಿ ಕೋಮುವಾದ ಸೃಷ್ಟಿಸಿ ಜನರನ್ನು ಎತ್ತಿ ಕಟ್ಟುವ ಜೊತೆಗೆ ದಲಿತ ನಾಯಕತ್ವವನ್ನು ಹತ್ತಿಕ್ಕುವ ಹುನ್ನಾರ ನಡೆಸುತ್ತಿದ್ದಾರೆ. ಅಲ್ಲದೇ ಅವರ ವಿರುದ್ಧ ಧ್ವನಿ ಎತ್ತಿದ ಎಲ್ಲರನ್ನು ಹತ್ಯೆಗೈಯುವ ಮೂಲಕ ದೇಶದಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದಾರೆ ಎಂದು ಆಪಾದಿಸಿದರು.

ಇದೇ ವೇಳೆ ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್ ನೇತೃತ್ವದಲ್ಲಿ ಮತಗಳ್ಳತನದ ವಿರುದ್ಧ ರಾಹುಲ್ ಗಾಂಧಿ ನಡೆಸುತ್ತಿರುವ ಜನಜಾಗೃತಿ ಹೋರಾಟಕ್ಕೆ ಬೆಂಬಲ ಸೂಚಿಸಿ ಸಹಿ ಸಂಗ್ರಹಿಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ರಾಜ್ಯ ಎಸ್‌ಟಿ ಘಟಕದ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ನಿರಂಜನ್, ಸೋಮು, ಗೋವಿಂದರಾಜು, ಎನ್.ಎಸ್.ಮಾದಪ್ಪ, ಮುದ್ದುಮಾದಶೆಟ್ಟಿ, ಬೀರೇಗೌಡ, ರಘು, ಅಜ್ಗರ್, ಮಹೇಶ್, ಜಗದೀಶ್ ಇತರರಿದ್ದರು.

ಅನ್ಯಾಯವಾದರೆ ಕೇಳುವ ಹಕ್ಕು ರೈತ ಸಂಘಕ್ಕಿದೆ

ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಬೆಟ್ಟೇಗೌಡ



ವಾರ್ಷಿಕೋತ್ಸವವನ್ನು ಜಿಲ್ಲಾಧ್ಯಕ್ಷ ಬೆಟ್ಟೇಗೌಡ ಉದ್ಘಾಟಿಸಿದರು.

ಕಂಪಲಾಪುರ, ಅ.20– ಯಾವುದೇ ಇಲಾಖೆಗಳಲ್ಲಿ ಜನಸಾಮಾನ್ಯರಿಗೆ ಅನ್ಯಾಯವಾದರೆ ಅದನ್ನು ನ್ಯಾಯಯುತವಾಗಿ ಕೇಳುವ ಹಕ್ಕು ರೈತ ಸಂಘಕ್ಕಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ) ಜಿಲ್ಲಾಧ್ಯಕ್ಷ ಬೆಟ್ಟೇಗೌಡ ತಿಳಿಸಿದರು.

ಕಂಪಲಾಪುರದಲ್ಲಿ ಶುಕ್ರವಾರ ಗ್ರಾಮ ಘಟಕದ ಮೊದಲ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ರೈತ ಬೆಳೆದ ದವಸ ಧಾನ್ಯಗಳಿಗೆ ಸರಿಯಾದ ಬೆಲೆ ದೊರಕದಿದ್ದಾಗ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರೆ ಅದನ್ನು ಕೇಳುವ ಸ್ವಾತಂತ್ರ್ಯ ರೈತ ಸಂಘಕ್ಕಿದೆ. ಆ ನಿಟ್ಟಿನಲ್ಲಿ ಸಂಘ ಜಾಗೃತವಾಗಬೇಕು. ಆಂಧ್ರ ಪ್ರದೇಶದಲ್ಲಿ ತಂಬಾಕಿಗೆ ಪ್ರತಿ ಕೆಜಿಗೆ 438 ರೂ. ಇದೆ. ಅದೇ ದರ ಕರ್ನಾಟಕದ ರೈತರಿಗೂ ಸಿಗಬೇಕು ಎಂದರು.

ಹುಣಸೂರು ತಾಲೂಕು ಘಟಕದ ಅಧ್ಯಕ್ಷ ಬಸವೇಗೌಡ ಮಾತನಾಡಿ, ರೈತರು ಯಾವುದೇ ಪರಿಸ್ಥಿತಿಯಲ್ಲೂ ಎದೆಗುಂದಬಾರದು. ಅನ್ಯಾಯವಾದ ಜಾಗದಲ್ಲಿ ರೈತ ಸಂಘ ನಿಲ್ಲಬೇಕು. ನಿಮ್ಮ ಜೊತೆ ನಾವಿದ್ದೇವೆ. ಯಾವುದೇ ಸರ್ಕಾರಿ ಕಚೇರಿ, ಗೊಬ್ಬರದ ಅಂಗಡಿಗಳಲ್ಲಿ ಅನ್ಯಾಯವಾದಾಗ ನ್ಯಾಯಾಯುತವಾಗಿ ಕೇಳುವ ಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು ಎಂದರು.

ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಭಾರತಿ ಮಾತನಾಡಿದರು. ಜಿಲ್ಲಾ ಘಟಕದ ಉಪಾಧ್ಯಕ್ಷ ಕೆ.ಎಸ್.ಕೃಷ್ಣಮೂರ್ತಿ, ಹುಣಸೂರು ತಾಲೂಕು ಘಟಕದ ಗೌರವಾಧ್ಯಕ್ಷ ಉದಯ ಕುಮಾರ್, ಉಪಾಧ್ಯಕ್ಷ ಶಿವಲಿಂಗೇಗೌಡ, ಕಂಪಲಾಪುರ ಘಟಕದ ಅಧ್ಯಕ್ಷ ಜಗದೀಶ್ ಗೌಡ, ಉಪಾಧ್ಯಕ್ಷ ರಾಮಯ್ಯ, ರಾಜಣ್ಣ, ಭಾಗ್ಯಮ್ಮ ಸೇರಿದಂತೆ ರೈತಸಂಘದ ಪದಾಧಿಕಾರಿಗಳು, ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಸಾಹಸಿಗರ ಕಾಶ್ಮೀರ To ಕನ್ಯಾಕುಮಾರಿ ರೋಚಕ ಸೈಕಲ್ ಯಾತ್ರೆ



ಕಾಶ್ಮೀರದಲ್ಲಿ ಕೆ2ಕೆ ಪಯಣ ಆರಂಭಿಸಿದ ಮೈಸೂರಿನ ರಾಯಲ್ ರೈಡರ್ಸ್ ತಂಡ

ಮಾರ್ಗದುದ್ದಕ್ಕೂ ಭಾವೈಕ್ಯತೆ, ಆರೋಗ್ಯದ ಸಂದೇಶ

ಮೈಸೂರು, ಅ.20(ವಿವಿಹೆಚ್)– 'ದೇಶ ಸುತ್ತು ಕೋಶ ಓದು' ಎಂಬ ಗಾದೆ ಮಾತಿನಂತೆ ಮೈಸೂರಿನಲ್ಲೊಂದು ವಯಸ್ಕರ ತಂಡ ಕೋಶ ಓದಿ ದೇಶ ಸುತ್ತಲು ಹೊರಟಿತು. ಅದುವೇ ವಿಮಾನ, ಬಸ್ಸು, ಕಾರು ಅಥವಾ ಬೈಕಿನಲ್ಲಲ್ಲ. ಬದಲಾಗಿ ಸೈಕಲ್‌ನಲ್ಲಿ...

ಭಾರತವನ್ನೇ ಸುತ್ತಿ ನೋಡುವ ಕುತೂಹಲ. ದೇಶ ಸುತ್ತಲು ಈ ತಂಡ ಆಯ್ದುಕೊಂಡದ್ದು ಮಾತ್ರ ಸೈಕಲ್... ಆಶ್ಚರ್ಯವೆನಿಸಿದರೂ ಇದುವೇ ಸತ್ಯ ಅದೇನೆ ಆದರೂ ನೋಡೇ ಬಿಡೋಣ ಎಂದು 11 ಜನರ ತಂಡವೊಂದು ಈ ಸಾಹಸಕ್ಕೆ ಕೈ ಹಾಕಿಯೇ ಬಿಟ್ಟಿತು. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ (ಕೆ2ಕೆ) ರಾಷ್ಟ್ರೀಯ ಹೆದ್ದಾರಿ 'ಎನ್‌ಹೆಚ್ 44' ಆಯ್ದುಕೊಂಡು ತಮ್ಮ ಸೈಕಲ್ ಪಯಣ ಆರಂಭಿಸಿಯೇ ಬಿಟ್ಟರು.

ಮೈಸೂರಿನ ರಾಯಲ್ ರೈಡರ್ಸ್ ತಂಡದ ನಿರ್ದೇಶಕ ವಿನಯ್ ಸಿಂಗ್ ಜೊತೆಗೂಡಿದ 10 ಮಂದಿ ಈ ಸಾಹಸ ಪಯಣಕ್ಕೆ ಸಾಕ್ಷಿಯಾದರು. ಕೇವಲ 22 ದಿನಗಳಲ್ಲಿ 11 ರಾಜ್ಯಗಳನ್ನು ಹಾಯ್ದು, 3568 ಕಿ.ಮೀ ದೂರ ಕ್ರಮಿಸಿದ್ದಾರೆ. ಸೆ.22 ರಂದು ಕಾಶ್ಮೀರದ ಶ್ರೀನಗರದಲ್ಲಿ ಪಯಣ ಆರಂಭಿಸಿ ಅ.16 ರಂದು ಕನ್ಯಾಕುಮಾರಿವರೆಗಿನ ಸುದೀರ್ಘ ಪಯಣಕ್ಕೆ ನಾಂದಿ ಹಾಡಿದರು.

ವಿವಿಧ ವಾತಾವರಣಗಳು, ಮಳೆ, ವಿಪರೀತ ಗಾಳಿ, ಬಿಸಿಲು, ಆಹಾರ ಎಲ್ಲವೂ ನಮಗೆ ಹೊಸತನವನ್ನೆ ಕೊಟ್ಟಿತು. ಅಲ್ಲಲ್ಲಿ ಭೂ ಕುಸಿತ, ಅರಣ್ಯ ಪ್ರದೇಶಗಳು, ಟ್ರಾಫಿಕ್ ಕಿರಿ–ಕಿರಿ ಸೇರಿದಂತೆ ಇನ್ನು ಹತ್ತು ಹಲವು ಸಮಸ್ಯೆಗಳನ್ನು ದಾಟಿ ಈ ಸಾಧನೆ ಮಾಡಿದೆವು.

ಪ್ರತಿ ದಿನ 150 ರಿಂದ 200 ಕಿ.ಮೀ ಸೈಕಲ್ ರೈಡ್ ಮಾಡುತ್ತಿದ್ದೆವು. ಮೊದಲ ವಾರ 850 ಕಿ,ಮೀ ದೂರ ಕ್ರಮಿಸಲು ಹರಸಾಹಸ ಪಟ್ಟೆವು. ಅದಾದ ಮೇಲೆ ವಾತಾವರಣಕ್ಕೆ ಹೊಂದಿಕೊಂಡು



ಕನ್ಯಾಕುಮಾರಿಯಲ್ಲಿ ಪಯಣ ಅಂತಿಮಗೊಳಿಸಿದ 11 ಮಂದಿ ತಂಡ.

ರಾಯಲ್ ರೈಡರ್ಸ್ ಮೈಸೂರು ತಂಡ

ಮೆಂಟರ್ ಸೈಕ್ಲಿಸ್ಟ್ ವಿನಯ್ ಸಿಂಗ್, ಡಾ. ಬೃಂದಾ ಸುಹಾಸ್ ಗೋಧಿ, ಡಾ. ಸುಮನ್ ಎಂ.ಭೈರೇಗೌಡ, ಸಂದೀಪ್, ವೀಣಾ ಅಶೋಕ್, ಜೀತೇಂದ್ರ, ಚಂದನಾ, ಅನಿತಾ ಬರ್ಗಿ, ಎಲ್. ಸೋಲಂಕಿ, ಹರೀಶ್ ರಾಮನ್ ಹಾಗೂ ಪೂಜಾ ಒಳಗೊಂಡ 11 ಜನರ ತಂಡ ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ 11 ರಾಜ್ಯಗಳನ್ನೊಳಗೊಂಡಂತೆ ಕೇವಲ 22 ದಿನಗಳಲ್ಲಿ ಸೈಕಲ್‌ನಲ್ಲಿ 3658 ಕಿ.ಮೀ ಕ್ರಮಿಸಿದ್ದಾರೆ. ಕಾಶ್ಮೀರದಿಂದ ನೀರನ್ನು ಸಂಗ್ರಹಿಸಿ ಕನ್ಯಾಕುಮಾರಿ ಸಮುದ್ರದಲ್ಲಿ ವಿಸರ್ಜನೆ ಮಾಡುವ ಮೂಲಕ ತಮ್ಮ ಸೈಕ್ಲಿಂಗ್ ಪ್ರಯಾಣಕ್ಕೆ ತೆರೆ ಎಳೆದರು.

ಸರಾಗವಾಗಿ ನಮ್ಮ ಗುರಿ ಮುಟ್ಟಿದೆವು.

ಬೆಳಿಗ್ಗೆ 4 ಗಂಟೆಗೆ ಸೈಕಲ್‌ನ್ನೇರಿದರೆ, ರಾತ್ರಿ 9 ಗಂಟೆಗೆ ವಿರಾಮ ಕೊಡುತ್ತಿದ್ದೆವು. ಮಧ್ಯಾಹ್ನ ಬಿಸಿಲಿನ ಬೇಗೆಗೆ ಸೈಕಲ್ ತುಳಿಯಲು ಆಗದೆ ದೇವಾಲಯಗಳು, ಮರಗಳಡಿ ಆಶ್ರಯ ಪಡೆಯುತ್ತಾ, ಸಂಜೆ ವೇಳೆ ಸೈಕಲ್ ತುಳಿಯುತ್ತಿದ್ದೆವು. ಮಹಿಳೆಯರು ತಂಡದಲ್ಲಿದ್ದರಿಂದ ರಾತ್ರಿ ವೇಳೆ ಸೈಕಲ್ ತುಳಿಯುವ ಸಾಹಸಕ್ಕೆ ಕೈ ಹಾಕಲಿಲ್ಲ.

ಜರ್ನಿಯುದ್ದಕ್ಕೂ ವಿವಿಧ ರಾಜ್ಯಗಳ ಸಂಸ್ಕೃತಿ, ಆಚಾರ, ಆಹಾರ ಪದ್ಧತಿ, ಜನ ಜೀವನ, ಅಲ್ಲಿನ ಸಸ್ಯ ಮತ್ತು ಜೀವನ ಸಂಕುಲಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಾ, ಸೈಕಲ್ ಸವಾರಿ ಮಾಡಿದ್ದು, ನಿಜಕ್ಕೂ ರೋಮಾಂಚನಕಾರಿ ಅನುಭವ. ದೇಶ ಸುತ್ತಲೂ, ಜನರ ಜೀವನ ಅರ್ಥೈಸಿಕೊಳ್ಳಲು ಸೈಕಲ್ ಪಯಣ ನಿಜಕ್ಕೂ ಸಹಕಾರಿಯಾಗಿತ್ತು. ನಾವು ಕಂಡಿರದ ಎಷ್ಟೋ ವಿಷಯಗಳು, ವಿಸ್ಮಯಗಳು ನಮಗೆ ಈ ಯಾತ್ರೆ ವೇಳೆ ಅರಿವಿಗೆ ಬಂದವು ಎನ್ನುತ್ತಾರೆ ರಾಯಲ್ ರೈಡರ್ಸ್‌ನ ವಿನಯ್ ಸಿಂಗ್.

ಎನ್‌ಹೆಚ್ 44 ಮಾರ್ಗ ಹಾದು ಹೋಗುವ ರಾಜ್ಯಗಳಿವು: ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಹರಿಯಾಣ, ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು

ಭಾರತದ ಅತೀ ಉದ್ದವಾದ ರಸ್ತೆ 'ಎನ್‌ಹೆಚ್44'. ಇದು ಶ್ರೀನಗರದಿಂದ ಕನ್ಯಾಕುಮಾರಿಗೆ ನೇರ ಸಂಪರ್ಕ ಕಲ್ಪಿಸುತ್ತದೆ. ನಮ್ಮ ದೇಶವನ್ನು ಸೈಕಲ್‌ನಲ್ಲಿ ಸುತ್ತಲು ನಮಗೆ ಈ ರಸ್ತೆ ಸ್ಫೂರ್ತಿಯಾಯಿತು. ಪರ್ವತ ಶ್ರೇಣಿಗಳಿಂದ ಸಮುದ್ರ ತೀರದವರೆಗೆ ನೋಡಲು ಈ ಪಯಣ ಸಹಕಾರಿಯಾಯಿತು.

-ವಿನಯ್ ಸಿಂಗ್, ರಾಯಲ್ ರೈಡರ್ಸ್ ತಂಡದ ಮೆಂಟರ್.

ಸಿಆರ್‌ಪಿಎಫ್ ಸಹಾಯ ಸ್ಮರಣೀಯ: ಕಾಶ್ಮೀರದಲ್ಲಿ ಟ್ರಾಫಿಕ್ ಜಾಮ್ ಆಗಿದ್ದ ವೇಳೆ ಅಲ್ಲಿನ ಸಿಆರ್‌ಪಿಎಫ್ ತಂಡ ಸೈಕ್ಲಿಸ್ಟ್ ಪಯಣಿಗರಿಗೆ ವಿಶೇಷ ಆದ್ಯತೆ ನೀಡಿತು. ಬೆಂಗಾವಲು ವಾಹನದ ಮೂಲಕ ಪಠಾಣ್ ಕೋರ್ಟ್‌ವರೆಗೂ ಜೀರೋ ಟ್ರಾಫಿಕ್ ಮಾಡಿಕೊಡುವ ಮೂಲಕ ಸಹಾಯ ಮಾಡಿದರು. ವಿಶೇಷ ಸಾಧನೆ ಮಾಡುವವರಿಗೆ ಈ ರೀತಿಯ ಸಹಾಯಗಳು ಸದಾ ಸ್ಫೂರ್ತಿ ನೀಡುತ್ತವೆ ಎಂದು ಹೇಳುತ್ತಾರೆ ಸೈಕ್ಲಿಸ್ಟ್ ವಿನಯ್ ಸಿಂಗ್.

ಪರಿಸರದೊಂದಿಗೆ ಸಂಬಂಧ ಹೊಂದಿ: ಇಂದಿನ ಯುವ ಸಮೂಹ ಮೊಬೈಲ್ ಗೀಳು, ಸೋಷಿಯಲ್ ಮಿಡಿಯಾದಲ್ಲಿ ಮುಳುಗಿ ಹೋಗಿದ್ದಾರೆ. ಇದನ್ನು ಮೀರಿದ ಸಂಬಂಧಗಳು ಭೂಮಿ ಮೇಲಿವೆ ಎಂಬುದನ್ನು ಮರೆತಿದ್ದಾರೆ. ಪ್ರಕೃತಿ ಮತ್ತು ಮಾನವನ ಸಂಬಂಧ ಇಂದು ಹಾಳಾಗಿದೆ. ಮೊಬೈಲ್ ಗೀಳು ಬಿಟ್ಟು ಸ್ಥಳೀಯ ಸಂಸ್ಕೃತಿ, ಆಚಾರ ವಿಚಾರಗಳು, ರೈತ–ಕೃಷಿ ಸಂಬಂಧಗಳ ಬಗ್ಗೆ ತಿಳಿಯುವುದು ಇಂದಿನ ದಿನಮಾನಗಳಲ್ಲಿ ಬಹಳ ಮುಖ್ಯ. ಯುವ ಪೀಳಿಗೆ ಎಚ್ಚೆತ್ತುಕೊಳ್ಳದಿದ್ದರೆ, ನಮ್ಮ ಅಸ್ತಿತ್ವವೇ ನಾಶವಾಗುತ್ತದೆ. ಪಯಣ ಎಂಬುದು ಮೋಜು ಮಸ್ತಿಗಾಗಿ ಅಲ್ಲ. ವಿವಿಧತೆಯಲ್ಲಿ ಏಕತೆಯನ್ನು ನೆನೆಯುವ, ಪರಿಸರ ಮತ್ತು ಸಮಾಜದೊಂದಿಗೆ ಮಾನವ ಉತ್ತಮ ಬಾಂಧವ್ಯ ಹೊಂದುವ ಒಂದು ಮಾರ್ಗ ಎಂದು ಯುವ ಪೀಳಿಗೆಗೆ ವಿನಯ್ ಸಿಂಗ್ ಕಿವಿ ಮಾತು ಹೇಳಿದರು.

ಓರಲ್ ಕ್ಯಾನ್ಸರ್ ಬಗ್ಗೆ ಜಾಗೃತಿ: ಡಾ. ಬೃಂದಾ

ಬಾಯಿ ಮತ್ತು ಮುಖ (ಓರಲ್ ಹೈಜಿನ್)ದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಆಸೆಯಿತ್ತು. ರಾಷ್ಟ್ರೀಯ ಹೆದ್ದಾರಿ ಎನ್‌ಎಚ್.44 ರಲ್ಲಿ ಪ್ರಯಾಣದ ವೇಳೆ ಸಿಗುವ ಊರುಗಳು, ಡಾಬಾಗಳಲ್ಲಿ ಲಾರಿ ಡ್ರೈವರ್ಸ್, ಶಾಲೆಗಳು, ಬೀದಿಬದಿ ವ್ಯಾಪಾರಿಗಳಿಗೆ ಓರಲ್ ಹೈಜಿನ್ ಬಗ್ಗೆ ಉಪಯುಕ್ತ ಮಾಹಿತಿ ನೀಡಲಾಯಿತು. ಮಾನವನ ಆರೋಗ್ಯಕ್ಕೆ ಬಾಯಿ ಸ್ವಚ್ಛತೆ ಎಷ್ಟು ಮುಖ್ಯ ಎಂಬ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಯಿತು. ದೈನಂದಿನ ಜೀವನ ಕ್ರಮಗಳು, ಹಲ್ಲು ಉಜ್ಜುವ ಬಗೆ ಹಾಗೂ ಅದರಿಂದ ಆಗುವ ಪ್ರಯೋಜನಗಳ ಕುರಿತಂತೆ ವಿಶೇಷ ತರಗತಿಗಳನ್ನು ನೀಡಲಾಯಿತು. ಪ್ರಮುಖವಾಗಿ 20 ರಿಂದ 25 ವರ್ಷ ಒಳಗಿನ ಮಕ್ಕಳಿಗೆ ಓರಲ್ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು ಎಂದು ಪೀಡಿಯಾಟ್ರಿಕ್ ಮತ್ತು ಪ್ರಿವೆಂಟಿವ್ ಡೆಂಟಿಸ್ಟ್ರಿ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಬೃಂದಾ ಸುಹಾಸ್ ಗೋಧಿ ಹೇಳಿದರು.



ಶಾಲಾ ಮಕ್ಕಳೊಂದಿಗೆ ಡಾ. ಬೃಂದಾ ಸುಹಾಸ್ ಗೋಧಿ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡೀಸೆಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಡ್ಯೂಡ್ (ತ)	4 ಪ್ರದರ್ಶನಗಳು
ಲಿಡೋ	
ತೆಲುಸು ಕದ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪ್ರೇಮಿಗಳ ಗಮನಕ್ಕೆ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.00ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಮ.1.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ. **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಪಾಯಕಾರಿ ಉದ್ದಿಮೆಗಳಲ್ಲಿ ಅಪ್ರಾಪ್ತ ಮಕ್ಕಳ ನೇಮಕ ನಿಷಿದ್ಧ

ಮೈಸೂರು, ಅ.20– ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆ ನಿಷೇಧಿಸಲು ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016 ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆ ಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಈ ವಯೋಮಿತಿ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಮೈಸೂರು ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ ದೀಪಾವಳಿ ಪ್ರಯುಕ್ತ ಪಟಾಕಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಪಟಾಕಿ ತಯಾರಿಕೆ, ಮಾರಾಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದಿಮೆಗಳ ವ್ಯಾಪ್ತಿಗೆ ಬರುವುದರಿಂದ ಸದರಿ ಅಂಗಡಿಗಳಲ್ಲಿ ಯಾವುದೇ ಕಾರಣಕ್ಕೂ 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳಬಾರದು. ತಪ್ಪಿದ್ದಲ್ಲಿ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ ಕಾಯ್ದೆ) ಅನ್ವಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮೈಸೂರು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವಲಯ ಗಿಳಿವಿಂಡು ಪ್ರಾಂತೀಯ ಸಮಾವೇಶ ಉದ್ಘಾಟನೆ



ಮೈಸೂರು ವಲಯ ಗಿಳಿವಿಂಡು ಪ್ರಾಂತೀಯ ಸಮಾವೇಶವನ್ನು ಗಿಡಕ್ಕೆ ನೀರೆಯುವ ಮೂಲಕ ಉದ್ಘಾಟಿಸಲಾಯಿತು.

ಮೈಸೂರು, ಅ. 20– ಮೈಸೂರು ವಲಯ ಗಿಳಿವಿಂಡು ಪ್ರಾಂತೀಯ ಸಮಾವೇಶವನ್ನು ರಾಮಕೃಷ್ಣನಗರದ ನೃಪತುಂಗ ಶಾಲೆಯ ಆವರಣದಲ್ಲಿ ಭಾನುವಾರ ಉದ್ಘಾಟಿಸಲಾಯಿತು.

ಮಂಗಳೂರಿನ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಮತ್ತು ಸಿಬ್ಬಂದಿ ಒಕ್ಕೂಟ ಏರ್ಪಡಿಸಿದ್ದ ಮೈಸೂರಿನ ಪ್ರಾಂತೀಯ ಸಮಾವೇಶವನ್ನು ಗಿಳಿವಿಂಡು ಮೊದಲ ತಂಡದ ವಿದ್ಯಾರ್ಥಿ ಹಾಗೂ ಹಿರಿಯ ಪ್ರಾಧ್ಯಾಪಕ ಪ್ರೊ.ಎಲ್.ತಿಪ್ಪೇಸ್ವಾಮಿ ಗಿಡಕ್ಕೆ ನೀರು ಹಾಕುವುದರ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಕನ್ನಡ ಮಾಧ್ಯಮದ ಶಾಲೆಗಳು ಇಂದು ಮುಚ್ಚುವ ಪರಿಸ್ಥಿತಿ ಬಂದಿರುವುದಕ್ಕೆ ಕನ್ನಡಿಗರಾದ ನಾವುಗಳೇ ಕಾರಣ. ಕನ್ನಡದ ಎಲ್ಲ ಮನಸ್ಸುಗಳು ಒಗ್ಗಟ್ಟಿನಿಂದ ಭಾಷೆಯನ್ನು ಬಳಸುವಂತಾದರೆ ಶಾಶ್ವತವಾಗಿ ಕನ್ನಡವನ್ನು ಉಳಿಸಿ ಬೆಳೆಸಬಹುದೆಂದು ಅಭಿಪ್ರಾಯಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಪ್ರಾಧ್ಯಾಪಕ ಡಾ.ರಾಮೇಗೌಡ (ರಾಗೌ), ಕನ್ನಡದ ಅಸ್ಮಿತೆಯು ಕೇವಲ ದೇಹ, ಉಡುಪು ಅಥವಾ ಆಚರಣೆಗಳಿಗೆ ಸೀಮಿತವಾಗಿಲ್ಲ. ಅದು ಭಾಷೆಯ ಮೂಲಕ ಜನರ ಭಾವನೆಗಳನ್ನು ಒಂದುಗೂಡಿಸುತ್ತದೆ ಎಂದರು.

ಕನ್ನಡದ ಹೋರಾಟದ ವಿಷಯಕ್ಕೆ ಬಂದಾಗ ಕನ್ನಡ ಪರ ಸಂಘಟನೆಗಳು ಒಗ್ಗಟ್ಟಾಗಿ ಸಮಸ್ಯೆಗಳಿಗೆ ಸ್ಪಂದಿಸಿ, ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯುವಲ್ಲಿ ಮುಂದಾಗಬೇಕೆಂದು ತಿಳಿಸಿದರು. ಕನ್ನಡ ಭಾಷೆಯು ಸಂಸ್ಕೃತಿ, ಕಲೆ, ಸಂಗೀತ, ಸಾಹಿತ್ಯ ಮತ್ತು ಕರಕುಶಲ ವಸ್ತುಗಳ ಮೂಲಕ ವ್ಯಕ್ತವಾಗುತ್ತದೆ. ಇದನ್ನು ಕನ್ನಡಿಗರಾದ ನಾವು ಒಂದೆಡೆ ಸೇರುವುದರ ಮೂಲಕ ಒಗ್ಗಟ್ಟಾಗಿ ಅನ್ಯ ಭಾಷೆಗಳಿಗೆ ಮನಸೋಲದೆ, ನಮ್ಮ ನಾಡಿನ ನೆಲ, ಜಲ, ಸಂಸ್ಕೃತಿ, ಭಾಷೆ ಉಳಿಸಬಹುದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಕೊಣಾಜೆ, ಗಿಳಿವಿಂಡು ಅಧ್ಯಕ್ಷ ಪ್ರೊ. ಡಾ.ಬಿ.ಶಿವರಾಮಶೆಟ್ಟಿ, ಶಿಕ್ಷಣ, ಉದ್ಯೋಗ, ಜ್ಞಾನಕ್ಷೇತ್ರಗಳಲ್ಲಿ ಕನ್ನಡ ಹಿಂದು, ಇಂದು, ಮುಂದು, ಎಂದೆಂದೂ ಎದುರಿಸುವ ಸಮಸ್ಯೆ, ಸವಾಲುಗಳ ಜೊತೆಗೆ ಕನ್ನಡದ ಸಾಧ್ಯತೆಗಳ ಕುರಿತು ಅವಲೋಕನ, ಚಿಂತನೆ ನಡೆಸುವ ಒಂದು ಸಾಂಘಿಕ ಪ್ರಯತ್ನವೇ ಗಿಳಿವಿಂಡು ವೇದಿಕೆಯ ಬಹಳ ಮುಖ್ಯವಾದ ಉದ್ದೇಶವಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ಪೂರಕವಾದ ಯೋಜನೆ, ಕಾರ್ಯಕ್ರಮಗಳನ್ನು ಗಿಳಿವಿಂಡು ಮುಂದಿನ ದಿನಗಳಲ್ಲಿ ನಿರ್ವಹಿಸುತ್ತಾ ಬರಲಿದೆ ಎಂದು ತಿಳಿಸಿದರು.

ಶಾರದಾವಿಲಾಸ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ನಟರಾಜ್ ಕಾರ್ಯಕ್ರಮ ನಿರೂಪಿಸಿದರು, ಪ್ರಾರ್ಥನೆಯನ್ನು ಗಾಯಕಿ ಹೆಚ್.ರಕ್ಷಾರಾವ್ ನಡೆಸಿಕೊಟ್ಟರೆ, ನಿವೃತ್ತ ಪ್ರಾಧ್ಯಾಪಕ ನೃಪತುಂಗ ಶಾಲೆಯ ಕಾರ್ಯದರ್ಶಿ ಪ್ರೊ.ಹೆಚ್.ಜಿ.ಕೃಷ್ಣಪ್ಪ ಸ್ವಾಗತಿಸಿದರು. ವೇದಿಕೆಯಲ್ಲಿ ಪ್ರೊ.ಶಿವಾಜಿ ಜೋಯಿಸ್, ಪ್ರೊ.ಹೆಚ್.ಸಿ.ಸರಸ್ವತಿ, ಡಾ||ಕೆ.ಎನ್.ಲೋಲಾಕ್ಷಿ, ಪ್ರೊ.ಹೊ.ಮ.ಪಂಡಿತಾರಾಧ್ಯ, ಪ್ರೊ.ಜಯಪ್ರಕಾಶ್ ಗೌಡ, ಡಾ.ನಾಗಪ್ಪಗೌಡ, ಪ್ರೊ. ಸೋಮಣ್ಣ, ಪ್ರೊ. ಸದೇಬೋಸ್, ಪ್ರೊ.ಚಂದ್ರಕಲಾನಂದಾವರ ಅವರನ್ನು ಸನ್ಮಾನಿಸಲಾಯಿತು.

ಎಸ್.ವಿ.ಪರಮೇಶ್ವರಭಟ್, ಪ್ರೊ.ಬಿ.ಶಿವರಾಮಶೆಟ್ಟಿ, ಪ್ರೊ.ಶಿವಾಜಿ ಜೋಯಿಸ್, ಪ್ರೊ.ಹೆಚ್.ಸಿ.ಸರಸ್ವತಿ, ನೃಪತುಂಗ ಶಾಲೆಯ ಕಾರ್ಯದರ್ಶಿ ಪ್ರೊ.ಹೆಚ್.ಜಿ. ಕೃಷ್ಣಪ್ಪ, ಸಂವಹನ ಪ್ರಕಾಶಕರಾದ ಡಿ.ಎನ್.ಲೋಕಪ್ಪ ಮತ್ತಿತರರು ಉಪಸ್ಥಿತರಿದ್ದರು.

ದೀಪಾವಳಿ ಆಚರಣೆ



ಮೈಸೂರಿನ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ದೀಪಾವಳಿ ಹಬ್ಬವನ್ನು ದೀಪ ಬೆಳಗಿಸುವ ಮೂಲಕ ಸಂಭ್ರಮ, ಸಡಗರದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಆಡಳಿತಾಧಿಕಾರಿ ಕಾಂತಿ ನಾಯಕ್, ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಚಿಣ್ಣರು ಹಾಗೂ ಸಹ ಶಿಕ್ಷಕರು ಉಪಸ್ಥಿತರಿದ್ದರು.

ಮಹಾಜನ ಕಾಲೇಜಿಗೆ ಪುರುಷರ ಕುಸ್ತಿ ಸಮಗ್ರ ಪ್ರಶಸ್ತಿ



ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವತಿಯಿಂದ ಆಯೋಜಿಸಿದ್ದ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2025–26ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಶ್ರೀ ಪಿ.ಎಸ್. ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ರಾಧಿಕಾ ರಾಣಿ, ಕ್ರೀಡಾ ಸದಸ್ಯೆ, ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು, ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಡಾ. ಭಾಸ್ಕರ್ ಹೆಚ್.ಎನ್., ದೈಹಿಕ ಶಿಕ್ಷಣ ನಿರ್ದೇಶಕರು, ಡಾ. ಸೋಮಶೇಖರ್ ಕೆ.ಕೆ., ಕ್ರೀಡಾ ಸದಸ್ಯ ಹಾಗೂ ತಂಡದ ನಾಯಕ ಲಾಲು ಪ್ರಸಾದ್; (ನಿಂತಿರುವವರು): ಮನೋಜ್ ಜಿ, ರಾಹುಲ್ ಹೆಚ್.ಎಂ., ಹೇಮಂತ್‌ಗೌಡ, ವಿಸ್ಮತ್, ಹರ್ಷವರ್ಧನ್ ಜಿ.ಎಸ್., ರಾಮ ಪಿ, ಪ್ರಥಮ್ ಜಿ.ಎಸ್., ಅಬ್ದುಲ್ ಅವೇಜ್‌ಖಾನ್ ಅವರನ್ನು ಕಾಣಬಹುದು.

ಅಂತರ ಪ್ರೌಢಶಾಲಾ ಚರ್ಚಾ ಸ್ಪರ್ಧೆ, ಜನಪದ ಗೀತೆ ಗಾಯನ ಸ್ಪರ್ಧೆ

ಮೈಸೂರು, ಅ. 20– ಸ್ಪರ್ಧೆಗಳು ಕ್ರಿಯಾತ್ಮಕ ಕಾಯಕಕ್ಕೆ ಎಡೆ ಮಾಡಿಕೊಡುತ್ತದೆ. ವಿದ್ಯಾರ್ಥಿಗಳು ಈ ರೀತಿಯ ಸ್ಪರ್ಧೆಗಳಲ್ಲಿ ಭಾಗವಹಿಸುವ ಮನಸ್ಸು ಮಾಡಿದರೆ ಕೆಲವೇ ಸಮಯದಲ್ಲಿ ಚಿಂತನಾತ್ಮಕ ವ್ಯಕ್ತಿತ್ವದ ವ್ಯಕ್ತಿಗಳಾಗಿ ಹೊರಹೊಮ್ಮುತ್ತಾರೆ ಎಂದು ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಮಂಜುನಾಥ ಹೇಳಿದರು.

ಮೈಸೂರಿನ ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆಯಲ್ಲಿ ಎಂಡಿಇಎಸ್‌ನ ವಜ್ರ ಮಹೋತ್ಸವದ ಪ್ರಯುಕ್ತ ಹಸಿರು ಪರಿಸರ ಸ್ವಚ್ಛ ದಾಯಕ ವಲಯ ಧ್ಯೇಯೋದ್ದೇಶ ಅಡಿಯಲ್ಲಿ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ ಮತ್ತು ಜನಪದ ಗೀತೆ ಗಾಯನ ಸ್ಪರ್ಧೆ–2025 ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚರ್ಚಾ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಸರಿ ತಪ್ಪುಗಳ ವಿಮರ್ಶಾತ್ಮಕ ಚಿಂತನೆಯ ಮೂಲಕ, ವಿಶ್ಲೇಷಣೆಯ ಮನೋಭಾವದ ವಿಸ್ತಾರಕ್ಕೆ ನೆರವಾಗುತ್ತದೆ. ಮಾತಿನಲ್ಲಿ ಬದ್ಧತೆ, ಪರಿಪೂರ್ಣತೆ, ಕ್ರಿಯಾತ್ಮಕತೆಯನ್ನು ಬೆಳೆಸುವಲ್ಲಿ ಅಭೂತಪೂರ್ವವಾಗಿ ಪ್ರಯೋಜನಕಾರಿಯಾಗಿದೆ. ಪ್ರಸ್ತುತ ದಿನಗಳಲ್ಲಿ ಜನಪದ ಸೃಷ್ಟಿಯಾಗುತ್ತಿಲ್ಲ. ಇರುವ ಜನಪದ ಸಂಪತ್ತನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪಾಶ್ಚಿಮಾತ್ಯ ಆಧುನಿಕ ಮಾಧ್ಯಮದ ಹೆಚ್ಚಿನ ಬಳಕೆಯ ಕಾಲಘಟ್ಟದಲ್ಲಿ ಮೂಲ ಜನಪದವನ್ನು ಕಟ್ಟುವ, ಕಟ್ಟಿರುವ ತಾಯಿಬೇರನ್ನು ರಕ್ಷಿಸುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಸ್ಥಿರವಾಗುವಂತೆ ಮಾಡಬೇಕಾದದ್ದು ಶಿಕ್ಷಣ ಕ್ಷೇತ್ರದ ಕರ್ತವ್ಯವಾಗಿದೆ. ಜಗತ್ತಿನಲ್ಲಿ ಕಾಯಕದೊಂದಿಗೆ ಮೌಲ್ಯಯುತ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಿದ ಸಾಹಿತ್ಯ ಯಾವುದಾದರೂ ಇದ್ದರೆ ಅದು ಜಾನಪದ ಸಾಹಿತ್ಯವಾಗಿದೆ. ಈ ನಿಟ್ಟಿನಲ್ಲಿ ಸಂತ ಜೋಸೆಫರ ಕೇಂದ್ರೀಯ ಶಾಲೆಯು ಜನಪದ ಗೀತೆ ಗಾಯನ ಸ್ಪರ್ಧೆಯನ್ನು, ಕನ್ನಡ ಚರ್ಚಾ ಸ್ಪರ್ಧೆಯ ಕಾರ್ಯಕ್ರಮಗಳನ್ನು ಮೈಸೂರು ನಗರದ 18 ಪ್ರತಿಷ್ಠಿತ ಶಾಲೆಗಳ 70ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿರುವುದು ಪ್ರಸಂಶನೀಯ ಕಾಯಕವಾಗಿದೆ ಎಂದರು.

ಎಂಡಿಇಎಸ್‌ನ ಮುಖ ಕಾರ್ಯ ನಿರ್ವಾಹಕ ಅಧಿಕಾರಿ ಸೆಬಿ ಮಾವೇಲಿ, ಪ್ರಾಂಶುಪಾಲರಾದ ಶ್ರೀಮತಿ ಎಲಿಜಬೆತ್ ಎಸ್ ಥಾಮಸ್, ಶಾಲೆಯ ಕನ್ನಡ ವಿಭಾಗದ ಮುಖ್ಯಸ್ಥರಾದ ಪದ್ಮಕುಮಾರಿ, ಸಂಗೀತ ಶಿಕ್ಷಕ ಪುರುಷೋತ್ತಮ ಕಿರುಗಸೂರು, ಸಹಾಯಕ ಪ್ರಾಧ್ಯಾಪಕ ಮೈಸೂರು ಮಹಾಲಿಂಗ ಎಂ, ಸಹಾಯಕ ಪ್ರಾಧ್ಯಾಪಕ ಡಾ. ಯಶವಂತ ಕುಮಾರ್, ಸಾಹಿತಿ ಪರಮೇಶ ಕೆ ಉತ್ತನಹಳ್ಳಿ, ಪ್ರಾಂಶುಪಾಲ ರಾದ ಶ್ರೀಮತಿ ಮೇರಿ ಮಾರ್ಗರೇಟ್ ನಿರ್ಮಲ, ಸಂತ ಜೋಸೆಫರ ವಿವಿಧ ಶಾಲೆಗಳಿಂದ ಆಗಮಿಸಿದ್ದ ಪ್ರಾಂಶುಪಾಲರು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ವಿ.ವಿ.ಎಸ್.ಬಿ.ಎಂ ಶಾಲೆಯ ಕುಮಾರಿ ನಾದಶ್ರೀ ಆರ್ ಭಟ್, ದ್ವಿತೀಯ ಬಹುಮಾನ ಕೌಟಿಲ್ಯ ಶಾಲೆಯ ಕುಮಾರಿ ಪೂರ್ವಿಕ ಆನಂದ್, ತೃತೀಯ ಬಹುಮಾನ ಕುಮಾರಿ ಅಚ್ಯೋದ ಎಂ, ಕ್ರೈಸ್ಟ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಪಡೆದುಕೊಂಡರು.

ಜನಪದ ಗೀತೆ ಗಾಯನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಭಾರತೀಯ ವಿದ್ಯಾಭವನ ಶಾಲೆಯ ಮಲ್ಲಿಕಾರ್ಜುನ್ ಆರ್ ನಾಯಕ, ದ್ವಿತೀಯ ಬಹುಮಾನ ಅನಂತಗೀತಾ ಶಾಲೆಯ ಕೃತಿಕ ಪಿ, ತೃತೀಯ ಬಹುಮಾನ ನಿತೀಶ್.ಡಿ, ಭಾರತೀಯ ವಿದ್ಯಾ ಭವನ ಶಾಲೆಯ ವಿದ್ಯಾರ್ಥಿಗಳು ತಮ್ಮದಾಗಿಸಿಕೊಂಡರು.



ಕನ್ನಡ ಚರ್ಚಾ ಸ್ಪರ್ಧೆ ಮತ್ತು ಜನಪದ ಗೀತೆ ಗಾಯನ ಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಆಮದು ಕಡಿಮೆ ಮಾಡಲು ರೈತರು ಹೆಚ್ಚು ದ್ವಿದಳ ಧಾನ್ಯ ಬೆಳೆಯಿರಿ

ರೈತರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕರೆ

ಬೆಂಗಳೂರು, ಅ.20– ಭಾರತವು ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಭತ್ತದ ಜೊತೆಗೆ ದ್ವಿದಳ ಧಾನ್ಯಗಳನ್ನು ಬೆಳೆಯುವಂತೆ ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವ ಹೆಚ್.ಡಿ. ಕುಮಾರಸ್ವಾಮಿ ರೈತರಿಗೆ ಕರೆ ನೀಡಿದ್ದಾರೆ.

ಯಲಹಂಕದಲ್ಲಿ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಬ್ಯೂರೋದ 33ನೇ ಸಂಸ್ಥಾಪನಾ ದಿನಾಚರಣೆ ಹಾಗೂ 3ನೇ ಕೃಷಿಕೀಟ ಜೈವಿಕ ನಿಯಂತ್ರಣದ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬೇಳೆಕಾಳುಗಳನ್ನು ಬೆಳೆಯಲು ರೈತರು ಮುಂದಾಗಬೇಕು. ದ್ವಿದಳ ಧಾನ್ಯ ಬೆಳೆಯಲು ರೈತರಿಗೆ ಉತ್ತೇಜನ ನೀಡುವ ಯೋಜನೆಗೆ ಕೇಂದ್ರ ಸರ್ಕಾರದಿಂದ 35 ಸಾವಿರ ಕೋಟಿ ರೂ.ನಷ್ಟು ಅನುದಾನ ಒದಗಿಸಲಾಗಿದೆ. ಅಕ್ಕಿಯಿಂದಲೇ ಪೌಷ್ಟಿಕತೆ ಸಾಧ್ಯವಿಲ್ಲ. ಹೀಗಾಗಿ ದ್ವಿದಳ ಧಾನ್ಯ ಪೌಷ್ಟಿಕತೆ ಹೆಚ್ಚಳಕ್ಕೆ ಸಹಕಾರಿಯಾಗಿದೆ ಎಂದು ಹೇಳಿದರು.


ಕುಮಾರಸ್ವಾಮಿ

ಪ್ರಧಾನಿಯವರು ಕೃಷಿಗೆ ಹೆಚ್ಚು ಒತ್ತು ನೀಡಿದ್ದಾರೆ. ರಾಷ್ಟ್ರವು ಕೃಷಿ ಕ್ಷೇತ್ರದಲ್ಲಿ ದೊಡ್ಡ ಸಾಧನೆಗಳನ್ನು ಮಾಡುತ್ತಿದೆ. ರೈತರ ಬಗ್ಗೆ ಕಳಕಳಿ ಹೊಂದಿರುವ ಮೋದಿಯವರು ರೈತರಿಗೆ ಆರ್ಥಿಕಶಕ್ತಿ ತುಂಬಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಕಳಪೆ ರಸಗೊಬ್ಬರ ಮಾರಾಟವಾಗುತ್ತಿದೆ. ಇದರಿಂದ ಭೂಮಿಯ ಫಲವತ್ತತೆ ನಾಶವಾಗುವುದಲ್ಲದೆ, ಆಹಾರದ ಉತ್ಪಾದನೆಯಲ್ಲೂ ಕುಂಠಿತವಾಗುತ್ತದೆ. ಕಪ್ಪು ತಲೆ ಹುಳುವಿನ ಬಾಧೆಯಿಂದ ತೆಂಗು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹುಳುಗಳ ಬಾಧೆಗೆ ನನ್ನ ತೆಂಗಿನ ತೋಟವು ಒಳಗಾಗಿದೆ. ತೆಂಗಿನ ಮರದ ಗರಿಗಳು ಒಣಗುತ್ತಿವೆ. ಕ್ರಿಮಿನಾಶಕವನ್ನು ಅನಿಯಂತ್ರಿತವಾಗಿ ಬಳಸುವುದರಿಂದ ರೈತರ ಬದುಕು ಹಾಳಾಗುತ್ತಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ 'ಪಿಪಿಪಿ' ಮಾದರಿಯಲ್ಲಿ ಎಂಟು ವೈದ್ಯಕೀಯ ಕಾಲೇಜು ಸ್ಥಾಪನೆ: ಸರ್ಕಾರದ ಪ್ರಸ್ತಾವನೆಗೆ ಶಿಕ್ಷಣ ತಜ್ಞರ ಆಕ್ಷೇಪ

ಬೆಂಗಳೂರು, ಅ.20– ಕೋಲಾರ, ತುಮಕೂರು, ವಿಜಯಪುರ, ದಾವಣಗೆರೆ, ಉಡುಪಿ, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಎಂಟು ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯುವ ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ನಗರ ಮೂಲದ ಶಿಕ್ಷಣ ತಜ್ಞರು ತೀವ್ರವಾಗಿ ಟೀಕಿಸಿದ್ದಾರೆ.

ಪಿಪಿಪಿ ಮಾದರಿ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯದಂತಹ ಪ್ರಮುಖ ಕ್ಷೇತ್ರಗಳಿಗೆ ಸೂಕ್ತವಲ್ಲ ಎಂದು ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಹೇಳಿದ್ದಾರೆ. ಖಾಸಗಿ ಸಂಸ್ಥೆಗಳು ಹತೋಟಿ ತೆಗೆದುಕೊಂಡಾಗ, ಶಿಕ್ಷಣವು ಸಾಮಾಜಿಕ ಹಕ್ಕಿಗಿಂತ ವ್ಯಾಪಾರವಾಗುತ್ತದೆ. ಇದು ದುರ್ಬಲ ಸಮುದಾಯಗಳ ಪ್ರವೇಶವನ್ನು ಕಸಿದುಕೊಳ್ಳುತ್ತದೆ ಮತ್ತು ಕಲಿಕೆಯನ್ನು ಶ್ರೀಮಂತರ ಸವಲತ್ತುಗಳಾಗಿ ಪರಿವರ್ತಿಸುತ್ತದೆ. ಇದು ಅತ್ಯಂತ ಅಮಾನವೀಯ ಮತ್ತು ಸಂವಿಧಾನದ ಮೂಲ ತತ್ವಗಳಿಗೆ ವಿರುದ್ಧವಾಗಿದೆ. ಸ್ವಾಭಾವಿಕ ನ್ಯಾಯ ಎಲ್ಲಿದೆ, ಅವಕಾಶಗಳ ಸಮಾನತೆ ಎಲ್ಲಿದೆ ಎಂದು ಪ್ರಶ್ನಿಸಿದ್ದಾರೆ.

ವೈದ್ಯಕೀಯ ಶಿಕ್ಷಣದಲ್ಲಿ ಖಾಸಗೀಕರಣ ವಿದ್ಯಾರ್ಥಿಗಳಲ್ಲಿ ಲಾಭದಾಯಕ ಮನಸ್ಥಿತಿಯನ್ನು ಪ್ರೋತ್ಸಾಹಿಸುತ್ತದೆ. ಯಾರೇ ಆಗಲಿ ವೈದ್ಯಕೀಯ ಅಧ್ಯಯನವನ್ನು ಪೂರ್ಣಗೊಳಿಸಲು ಕೋಟಿಗಟ್ಟಲೆ ಖರ್ಚು ಮಾಡಿದಾಗ, ಜನರಿಗೆ ಸೇವೆ ಮಾಡುವ ಬದಲು ಆ ಹಣವನ್ನು ಹಿಂಪಡೆಯುವ ಉದ್ದೇಶ ಹೆಚ್ಚಾಗಿರುತ್ತದೆ. ಶಿಕ್ಷಣ ರಾಜ್ಯ ಸರ್ಕಾರದ ನಿರ್ವಹಣೆಯಾಗಿರಬೇಕು. ತಾರತಮ್ಯವಿಲ್ಲದೆ ಎಲ್ಲರಿಗೂ ದೊರೆಯುವಂತಾಗಬೇಕು. ಇಲ್ಲದಿದ್ದರೆ ಸಂಪೂರ್ಣ ವ್ಯವಸ್ಥೆಯೇ ಹದಗೆಟ್ಟು ಹೋಗುತ್ತದೆ. ಹಣ ಇಲ್ಲದವರು ಮೂಲಭೂತ ಹಕ್ಕುಗಳನ್ನು ಕಳೆದುಕೊಳ್ಳುವಂತಾಗುತ್ತದೆ ಎಂದು ಅವರು ಹೇಳಿದ್ದಾರೆ.

ಖಾಸಗಿ–ಸಾರ್ವಜನಿಕ ಸಹಭಾಗಿತ್ವದ ವೈದ್ಯಕೀಯ ಕಾಲೇಜುಗಳ ಸರ್ಕಾರದ ಪ್ರಸ್ತಾಪವು ಖಂಡಿತವಾಗಿಯೂ ಖಾಸಗೀಕರಣಕ್ಕೆ ಕಾರಣವಾಗುತ್ತದೆ. ಅನುಮತಿ ನೀಡುವಾಗ ಶೇ.50 ರಷ್ಟು ಸೀಟುಗಳನ್ನು ದುರ್ಬಲ ಸಮುದಾಯಗಳ ವಿದ್ಯಾರ್ಥಿಗಳಿಗೆ ಹಂಚುವುದು ಅಥವಾ ಸರ್ಕಾರಿ ಪ್ರವೇಶ ಪರೀಕ್ಷೆಯ ಶೇ.50 ರಷ್ಟು ಮೀಸಲು ಮುಂತಾದ ಷರತ್ತುಗಳನ್ನು ವಿಧಿಸಬೇಕು ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತ ವಾಸುದೇವ್ ಶರ್ಮಾ ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಣದ ಖಾಸಗೀಕರಣ ವಾಣಿಜ್ಯೀಕರಣದತ್ತ ಒಂದು ಹೆಜ್ಜೆಯಾಗಲಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ ಸದಸ್ಯರು ಆರೋಪಿಸಿದ್ದಾರೆ. ಪಿಪಿಪಿ ಮಾದರಿಯು ಅಭಿವೃದ್ಧಿಯ ಹೆಸರಿನಲ್ಲಿ "ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗಿ ಲಾಭಕೋರರಿಗೆ ಹಸ್ತಾಂತರಿಸುವ ಸಾಧನವಾಗಿದೆ. ಇಂತಹ ವ್ಯವಸ್ಥೆಗಳಿಂದ ಅತಿಯಾದ ಶುಲ್ಕ, ಶೈಕ್ಷಣಿಕ ಗುಣಮಟ್ಟ ಕುಸಿಯುವುದು, ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಣೆ ಮಾಡುತ್ತದೆ ಎಂದು ಸಂಘಟನೆ ಎಚ್ಚರಿಸಿದೆ.



ಕ್ರ. ಸಂ.	ವಿವರಗಳು	ಸಾಮಾನ್ಯ ನಾಗರೀಕರಿಗೆ/ ಅಂಗವಿಕಲರಿಗೆ/ಟ್ರಸ್ಟ್‌ಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ	ಹಿರಿಯ ನಾಗರಿಕರಿಗೆ	ನೋಂದಾಯಿತ ಸಂಘ ಸಂಸ್ಥೆಗಳಿಗೆ (1 ಕೋಟಿಗೂ ಮೇಲ್ಪಟ್ಟ ಠೇವಣಿಗಳಿಗೆ)
1	31 ದಿನಗಳಿಂದ 90 ದಿನಗಳವರೆಗೆ	4.25%	4.75%	4.75%
2	91 ದಿನಗಳಿಂದ 180 ದಿನಗಳವರೆಗೆ	4.75%	5.25%	5.25%
3	181 ದಿನಗಳಿಂದ 364 ದಿನಗಳವರೆಗೆ	5.75%	6.25%	6.25%
4	1 ವರ್ಷ ದಿಂದ 2 ವರ್ಷದವರಗೆ	8.00%	8.50%	8.50%
5	2 ವರ್ಷ 1 ತಿಂಗಳ ಮೇಲ್ಪಟ್ಟು 5 ವರ್ಷದವರಗೆ	8.25%	8.75%	8.75%



ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಬೆಂಗಳೂರು ನಗರ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಮಹಾಗಣಪತಿ ನಗರ, ಅಂಬೇಡ್ಕರ್ ಸ್ಟೇಡಿಯಂ ಹತ್ತಿರ, 1ನೇ ಹಂತ, 6ನೇ ಫೇಸ್, 10ನೇ ಕ್ರಾಸ್, ಮನೆ ನಂ.468, 469, 470 ರಲ್ಲಿ ವಾಸವಾಗಿರುವ ಶ್ರೀ. ಎಸ್.ಕೆ. ಶಿವಶಂಕರ್ ರವರ ಮಗನಾದ ಸುಮಾರು 56 ವರ್ಷದ ಶ್ರೀ. ಅನಂಥ ಶಿವಶಂಕರ್ ರವರಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕ್ರಯಪತ್ರವನ್ನು ನೊಂದಾಯಿಸಿಕೊಳ್ಳಲು ತಯಾರಿರುತ್ತೇವೆ, ಆದುದರಿಂದ ಷೆಡ್ಯೂಲ್‌ನಲ್ಲಿ ನಮೂಧಿಸಿರುವ ಸ್ವತ್ತಿಗೆ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 07 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂದಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೊಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೆ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ. ಮೈಸೂರು ತಾಲೂಕು, ಜಯಪುರ ಹೋಬಳಿ, ಕೆಲ್ಲಹಳ್ಳಿ ಗ್ರಾಮದ ಸರ್ವೆ ನಂ.23/4 [ಹಳೇ ಸರ್ವೆ ನಂ.23/2] ರಲ್ಲಿ ವಿಸ್ತೀರ್ಣ 01–03 (ಒಂದು ಎಕರೆ ಮೂರು ಗುಂಟೆ), ಖುಷ್ಕಿ ಜಮಿನಿಗೆ ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ಲಾ. ಹಿ. 3 ; ಉತ್ತರಕ್ಕೆ: ಲಾ. ಸ. 11, 24 ; ದಕ್ಷಿಣಕ್ಕೆ ; ಸರ್ವೆ ನಂ. 23/2 ರ ಜಮೀನು.

ಸಹಿ/– ನಾಗೇಶ ಕೆ, ಎಂ.ಬಿ.ಎ. ಎಲ್.ಎಲ್.ಬಿ.
ವಕೀಲರು, ನಂ. 1197, 12/2, ಕೃಷ್ಣರಾಜ ಬುಲೆವಾರ್ಡ ರಸ್ತೆ, ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ,ಮೈಸೂರು.
ಮೊ.9538842045

ದಿನಾಂಕ: 21–10–2025, ಸ್ಥಳ : ಮೈಸೂರು.

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

